ಪ್ರಕಟಣೆಯ ೩೪ನೆಯ ವರ್ಷ / ೧೯೯೯

೩೨೭
೩೨೮

ಸಂಕ್ರಮಣ

ಸಂಕ್ರಮಣ ಸಾಹಿತ್ಯ ಸ್ಪರ್ಧೆ : ೧೯೯೯

ಬಹುಮಾನಿತ ಬರಹಗಳು

ಅದೀಬ್ ಅಖ್ತರ್

ಹಳೇ ಮನೆ : ಸಣ್ಣಕಥೆ

ತುರುವೇಕೆರೆ ಪ್ರಸಾದ

ಪರಕೀಯ ಪ್ರೇತ : ಲಲಿತ ಪ್ರಬಂಧ

ಗೀತಾ ಹೆಗಡೆ

ಬಲೆ : ಸಣ್ಣ ಕಥೆ

ಹತ್ತು ಕವನಗಳು : ಇಪ್ಪತ್ತೈದು ಹನಿಗವನಗಳು

ಡಾ. ಜಿ. ರಾಮಕೃಷ್ಣ

ಮಧ್ಯಮ ವರ್ಗ : ಒಂದು ಚಿಂತನೆ

ಮಾಧವ ಪೆರಾಜೆ

ಭಾನುಮತಿಯ ನೆತ್ತ : ಮತ್ತೆ ಪರಿಶೀಲನೆ

ಪ್ರಫುಲ್ಲಾ ನಾಯಕ

ಕೃತಿ ಸ್ವಾಮ್ಯ ಕಾನೂನು ೧೯೫೭

ಚಂಪಾಕಾಲಂ

ಹೊಸ ಶತಮಾನ : ಅದೇ ಬಾನು ಅದೇ ಭಾನು

ಸಂಪುಟ : ೩೪
ಸಂಚಿಕೆ : ೧೧- ೧೨

ನವೆಂಬರ್ - ಡಿಸೆಂಬರ್
೧೯೯೯

ಸಂಕ್ರಮಣ

ಸಾಹಿತ್ಯಿಕ ಮಾಸಿಕ

ಸಂಪಾದ
ನೀಲಾ ಪಾಟೀಲ

ಸಲಹಾ ಸಂಪಾದ
ಚಂದ್ರಶೇಖರ ಪಾಟೀಲ

ಈ ಸಂಚಿಕೆಯಲ್ಲಿ

ಸಂಕ್ರಮಣ ಪ್ರಕಾಶನ

ನಂ.೨೭೫೧, ೧೭-ಎ ಕ್ರಾಸ್,

೬ನೇ ಮೇನ್, ಬನಶಂಕರಿ ೨ನೇ ಹಂತ,

ಬೆಂಗಳೂರು - ೫೬೦ ೦೭೦. ಫೋನ್ : ೦೮೦-೬೭೬೩೦೦೪

ನಿಮ್ಮೊಂದಿಗೆ ಆಪಸಾತ್

●

ಸಂಕ್ರಮಣದ ಮೂವತ್ನಾಲ್ಕನೆಯ ಪ್ರಕಟಣಾ ವರ್ಷದ ಕೊನೆಯ ಸಂಚಿಕೆ ಇದು. ೧೯೯೯ರ ಸಂಕ್ರಮಣ ಸಾಹಿತ್ಯ ಸ್ಪರ್ಧೆಯಲ್ಲಿ ಆಯ್ಕೆಯಾದ ಸಣ್ಣ ಕಥೆ, ಲಲಿತ ಪ್ರಬಂಧ, ಕವನ, ಹನಿಗವನಗಳು ಇಲ್ಲಿವೆ. ೧೯೮೭ರಿಂದಲೂ ನಡಕೊಂಡು ಬಂದಿರುವ ಈ ಸಾಹಿತ್ಯ ಸ್ಪರ್ಧೆ ಕನ್ನಡದ ಹೊಸ ಹೊಸ ಪ್ರತಿಭೆಗಳಿಗೆ ಅಭಿವ್ಯಕ್ತಿಯ ಮತ್ತು ಆ ಮೂಲಕ ಆತ್ಮವಿಶ್ವಾಸದ ಅವಕಾಶ ಒದಗಿಸುತ್ತಾ ಬಂದಿದೆ.

ಜನವರಿ ೨೦೦೦ರಿಂದ ಸಂಕ್ರಮಣದ ಮತ್ತೊಂದು 'ಅವತಾರ' ಪ್ರಾರಂಭ. ಹೆಚ್ಚು ಪುಟ, ಹೊಸ ವಿನ್ಯಾಸದೊಂದಿಗೆ, ಡಿಟಿಪಿ ಮುದ್ರಣದಲ್ಲಿ ದ್ವೈಮಾಸಿಕ ಸಾಹಿತ್ಯ ಸಂಕಲನವಾಗಿ ಬೆಂಗಳೂರಿನಿಂದ ಬರಲಿರುವ ಸಂಕ್ರಮಣದ ವಾರ್ಷಿಕ ಚಂದಾ ರೂ.೨೦೦/-. ಕಾಗದದ ಬೆಲೆ, ಮುದ್ರಣದ ಬೆಲೆ ವಿಪರೀತ ಹೆಚ್ಚಾಗಿರುವುದು ಮತ್ತು ನಮ್ಮ ನೂರಾರು ಚಂದಾದಾರ ಗೆಳೆಯರು ತೋರುತ್ತಿರುವ ಆರ್ಥಿಕ ಅಸಹಕಾರ - (ಅಂದರೆ, ಚಂದಾ ಬಾಕಿ ಕಳಿಸದಿರುವುದು) - ಇವೆಲ್ಲ ಈ ಬದಲಾವಣೆಗಳಿಗೆ ಕಾರಣ. ಇನ್ನು ಮುಂದೆ ಸಂಕ್ರಮಣ ಲಭ್ಯವಾಗುವುದು : ಸರಿಯಾಗಿ ಚಂದಾ ಕಳಿಸುವ ಸಂಗಾತಿಗಳಿಗಾಗಿ ಮಾತ್ರ.

ಅನೇಕ ವರ್ಷಗಳ ಹಿಂದೆ ಆಯಾ ಸಂದರ್ಭದ ಚಾಲ್ತಿ ರೂಪಾಯಿ ಮೌಲ್ಯಕ್ಕೆ ತಕ್ಕಂತೆ 'ಆಜೀವ' ಚಂದಾ ನೀಡಿದ ಗೆಳೆಯರೂ ಅನೇಕರು. ಆ ಹಣ ಎಫ್.ಡಿ. ಆಗಿ ಬ್ಯಾಂಕು ಸೇರಿದ್ದರೆ ಒಂದು ರೀತಿ. ಆದರೆ 'ಅವತ್ತು ಬಂದದ್ದು ಅವತ್ತಿನ ಖರ್ಚಿಗೆ' ಎಂಬ ಅನಿವಾರ್ಯತೆಯಿಂದಾಗಿ ಇದು ಸಾಧ್ಯವಾಗಲೇ ಇಲ್ಲ. ಪರಿಣಾಮವೆಂದರೆ, ಈಗಿನ ತುಟ್ಟೀಕಾಲದಲ್ಲಿ ಆಗಿನ 'ಆಜೀವ' ಎಂಬುದು ಹೊರೆ (ಲಾಯಬಿಲಿಟಿ) ಆಗಿದೆ. ಪರಿಸ್ಥಿತಿ ವಿವರಿಸಿ ಆ ಗೆಳೆಯರಿಗೆಲ್ಲ ಪ್ರತ್ಯೇಕವಾಗಿ ಬರೆದಿರುವೆ. ಸಂಕ್ರಮಣ 'ಬಳಗ'ದ ಮಂದಿ ಅವರೆಲ್ಲ. ನಂಬಿ ಕರೆದರೆ ಓ ಎನ್ನದಿರಲಾರರು ಎಂಬ ನಂಬಿಗೆ ನನ್ನದು.

ಅನುಕೂಲವಿದ್ದವರು ಐದು ವರ್ಷದ ಮುಂಗಡ ಚಂದಾ ರೂ.೧೦೦೦/- ಕಳಿಸಿರಿ. ಬಹಳ ಅನುಕೂಲ ಮತ್ತು ಕಳಕಳಿ ಇದ್ದವರು ರೂ. ೫೦೦೦/- ಕಳಿಸಿ ಸಂಕ್ರಮಣದ ಮಹಾಪೋಷಕರಾಗಬೇಕೆಂದು ಕೋರುವೆ.

ಚಂದ್ರಶೇಖರ ಪಾಟೀಲ

ಸಂಕ್ರಮಣ ಸಾಹಿತ್ಯ ಸ್ಪರ್ಧೆ ೧೯೯೯ : ಫಲಿತಾಂಶ

(ಬಹುಮಾನಿತರ ಹೆಸರು ಅಕಾರಾದಿಯಲ್ಲಿ)

ಸಣ್ಣ ಕಥೆ

ಅದೀಬ್ ಅಖ್ತರ್ (ಬನ್ನೂರು)	ಹಳೇಮನೆ
ಗೀತಾ ಹೆಗಡೆ (ಸಿದ್ದಾಪುರ)	ಬಲೆ

ಲಲಿತ ಪ್ರಬಂಧ

ತುರುವೇಕೆರೆ ಪ್ರಸಾದ (ತುರುವೇಕೆರೆ)	ಪರಕೀಯ ಪ್ರೇತ

ಕಾವ್ಯ

ಅರಕಲಗೂಡು ನೀಲಕಂಠಮೂರ್ತಿ (ಮೈಸೂರು)	ಫ್ರೀಟೌನ್
ಬಿ.ಎಂ.ಗುರುಸ್ವಾಮಿ (ಉಜ್ಜನಿ)	ಊರುಬಿಟ್ಟ ಹುಡುಗಿ ಮತ್ತು ನೀರಿತ್ತ ನರ
ಗುಂಡಣ್ಣ ಕಲಬುರ್ಗಿ (ಮೂಡಲಗಿ)	ಅಮೃತ ಮತಿ
ದಿನೇಶ ಮಾದೇನಹಳ್ಳಿ (ಬೆಂಗಳೂರು)	ಸೂರ್ಯ ಸ್ಖಲನ
ನಾಗವೇಂದ್ರಸ್ವಾಮಿ ಚಿದರವಳ್ಳಿ (ಬೆಂಗಳೂರು)	ಪ್ರಾಯದ ಮುಂಗಾರು
ಮಲ್ಲಿಕಾರ್ಜುನ ಗೌಡ (ತೂಲಹಳ್ಳಿ)	ಬದಲಾಗಿ ಬಿಟ್ಟಿದ್ದಾನೆ ಸೂರ್ಯ
ಮಾಧವಿ ಭಂಡಾರಿ (ಕೆರೆಕೋಣ)	ಈ ಸ್ಥಿತಿ ಬರುತ್ತಿರಲಿಲ್ಲ
ವಿಜಯಕಾಂತ ಪಾಟೀಲ (ಹಾನಗಲ್ಲ)	ಮಲೆನಾಡಲ್ಲಿ ಮಳೆ ಬಿದ್ದರೆ
ವೇದಾರಾಣಿ ಸೊಲಬಕ್ಕನವರ (ಶಿಗ್ಗಾವಿ)	ಕಲ್ಲುಗಳೊಂದಿಗೆ ನಾ
ಸಿ.ಪಿ. ಸಿದ್ಧಾಶ್ರಮ (ಮೈಸೂರು)	ಸೂತಪುತ್ರ

ಹನಿಗವನಗಳು

ಅಶೋಕ ಜೋಶಿ (ಧಾರವಾಡ)	ಜಾತ್ಯಾತೀತ
ಎಫ್.ಅಸದುಲ್ಲಾ ಬೇಗ್ (ಶಿವಮೊಗ್ಗೆ)	ಅಪೇಕ್ಷೆ
ಜಿ.ಎಸ್.ಉಬರಡ್ಕ (ದೊಡ್ಡ ತೋಟ)	ಕವಿತೆ
ಸಿ.ಎನ್.ಗೋವಿಂದರಾವ (ಬೆಂಗಳೂರು)	ನುಂಗಣ್ಣ ಹೇಳಿದ್ದು
ದೀಪಾ ಹಿರೇಗುತ್ತಿ (ಎಕ್ಕಂಬಿ)	ಪ್ರಮಾದ
ಕೆ.ಆರ್.ಪ್ರೇಮಲೀಲಾ (ಮೈಸೂರು)	ಸ್ಲಮ್ ಹೆಂಗಸರು
ಯು.ಎನ್.ಬಾಲಕೃಷ್ಣ (ಸುರಪುರ)	ಮೌನ-ಕಾವ್ಯ

ಬಾಲಶೇಖರ ಬಂದಿ (ಮೂಡಲಗಿ)	ಕನ್ನಡಿತಿ
ಕೆ.ಬಿ.ಬ್ಯಾಳಿ (ಕುಕನೂರ)	ಅಶಾಂತಿ
ಬೆಮೆಲ್ ಕಂಪಲಪ್ಪ (ಮೈಸೂರು)	ಮಹಿಮೆ
ಎಸ್.ಟಿ.ಭಾಗ್ಯಲಕ್ಷ್ಮಿ (ಬೆಂಗಳೂರು)	ಹೊಟ್ಟೇಬಾಕ
ಭಾರತಿ ಪಾಟೀಲ (ಸಿಂದಗಿ)	ಉಡುಗೊರೆ
ಎ.ಎಸ್.ಮಕಾನದಾರ (ಸವಣೂರ)	ವಿಮರ್ಶೆ
ಹಾ.ರಾ.ರಂಗನಾಥ (ಚಿನ್ನಿಕಟ್ಟೆ)	ಕರುಣೆ
ಜಿ.ಕೆ.ಎಲ್.ರಾಜನ್ (ಬೆಂಗಳೂರು)	ಕನ್ನಡ ಅಂಕಿ
ರೂಪ ಹಾಸನ (ಹಾಸನ)	ತಪ್ಪುಗಳು
ವೀರೇಶ ಎಸ್.ಸೊಪ್ಪಿಮಠ (ಸುರಪುರ)	ಸಂಧಿ
ಎಸ್.ಜಿ.ಶಿವಶಂಕರ (ಮೈಸೂರು)	ಭಯಾ-ಗ್ರಫಿ
ಶಿವಾಜಿ ಜೆ.ಕಾಂಬಳೆ (ಧಾರವಾಡ)	ಬಿಗಿದ ಭಾಷಣ
ಶ್ರೀನಿವಾಸ ವಿ.ಸುತ್ರಾವೆ (ದಾವಣಗೆರೆ)	ಮೇರಾ ಭಾರತ್ ಮಹಾನ್
ಸತೀಶಾರಾಧ್ಯ ಕೂನೂರು (ಟಿ.ಬೇಕುಪ್ಪೆ)	ಅಂತರ-ದೇಶಾಂತರ
ಸರ್ವಮಂಗಳ ಜಿ. (ಕನಕಪುರ)	ಸ್ವಾತಿ ಮುತ್ತು
ಎಚ್.ಕೆ.ಬಿ.ಸ್ವಾಮಿ (ಸೊರಬ)	ಚೈತ್ರದಂತೆ
ಸುನಂದಾ ಹಾಲಭಾವಿ (ಬೆಳಗಾವಿ)	ಪತಿವ್ರತೆ
ಹಿನ್ನಕ್ಕಿ ಚಂದ್ರಶೇಖರ (ಹೆನ್ನಾಗರ)	ಗೆಳೆತನ

ಹಳೇ ಮನೆ

ಅದೀಬ್ ಅಖ್ತರ್

ಕತೆ ಹೇಳುತ್ತೀನಿ ಬಾರೋ ಮರೀ ಅಂದೆ;
ಬಂದ, ಕೂತ. ಏನಂದ, ವ್ಯಥೆ ಹೇಳುತ್ತೀಯಾ
ಅಂದ. ಯಾಕೋ ನಿನಗೆ ಹಾಗಂತ ಕೇಳಿಸ್ತಾ?
ಇಲ್ಲಪ್ಪ, ಕತೇನೇ ಹೇಳುತ್ತೀನಿ ಕೇಳು....

– ಜಿ.ಎಸ್.ಶಿವರುದ್ರಪ್ಪ

★

ಹಳೇ ಮನೆಯ ಮಾರಾಟದಿಂದ ಬರುವ ಅಲ್ಪ ಸ್ವಲ್ಪ ಹಣ ನಮಗೆ ಯಾವ ಪ್ರಯೋಜನವೂ ಉಂಟು ಮಾಡದಿರುವುದರಿಂದ ಸುಮ್ಮನೆ ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಳ್ಳುವುದರ ಬದಲು ಅದನ್ನು ಸೌಮ್ಯರಿಗೆ ಬಾಡಿಗೆಗೆ ಕೊಡುವುದೆ ಸರಿ ಎಂದು ಹೆಂಡತಿ ಸಲಹೆ ಇಟ್ಟಾಗ ಅವಳ ಸಲಹೆಯನ್ನು ಗಣನೆಗೆ ತೆಗೆದುಕೊಳ್ಳುವ ಗೋಜಿಗೆ ಹೋಗಲಿಲ್ಲ. ಮನೆ ಮಾರಾಟಕ್ಕೆ ಮುನ್ನ ಇದಕ್ಕೆ ನನ್ನ ಅಂತರಾಳದ ವಿರೋಧ ಸಹ ಇದೆ ಎಂಬುದನ್ನು ಮರೆತೆ.

ಇಂದು ಮಧ್ಯಾಹ್ನದಿಂದ ನಾನು ಹಳೇ ಮನೆಗೆ ಮಾಲಿಕನಲ್ಲ. ಬೆಳಗ್ಗೆ ಹನ್ನೊಂದರ ಸಮಯಲ್ಲಿ-ನೊಂದಾಣಿಕೆ ಕಛೇರಿಗೆ ಭೇಟಿ ನೀಡಿ ಮನೆಯನ್ನು ಕೊಂಡುಕೊಂಡ ನೂತನ ಮಾಲಿಕನ ಹೆಸರಿಗೆ ದಾಖಲೆ ಪತ್ರಗಳನ್ನು ವರ್ಗಾಯಿಸಿದ್ದೇನೆ.

ಮನೆ ಮೇಲಿದ್ದ ಅಧಿಕಾರವನ್ನು ಕಳೆದುಕೊಂಡು, ನೊಂದಾಣಿಕೆ ಕಛೇರಿಯಿಂದ ಹೊರಕ್ಕೆ ಬರುತ್ತಿದ್ದಂತೆ ಒಮ್ಮೆಲೇ ಇಂದು ರಾತ್ರಿ ಹಳೇ ಮನೆಯಲ್ಲಿ ಒಬ್ಬನೆ ಕುಳಿತು ಅಲ್ಲಿ ಕಳೆದ ದಿನಗಳನ್ನು ಮೆಲಕು ಹಾಕಬೇಕೆಂದು ಆಸೆಯಾಯಿತು. ಇದನ್ನು ನೂತನ ಮಾಲಿಕನ ಮುಂದೆ ವ್ಯಕ್ತಪಡಿಸಿದಾಗ ಅವನು ನಿರಾಕರಿಸದೆ ಒಪ್ಪಿಗೆ ಸೂಚಿಸಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ.

ನೊಂದಾಣಿಕೆ ಕಛೇರಿಯಿಂದ ಹೆಂಡತಿಯೊಂದಿಗೆ ಹೊಸ ಮನೆಗೆ ಬಂದು ಸಂಜೆಯಾಗುವುದನ್ನೆ ನೀರೀಕ್ಷಿಸುತ್ತ ಕುಳಿತೆ. ಕತ್ತಲೆ ಹರಡಲು ಪ್ರಾರಂಭವಾದಾಗ ಹಳೇ ಮನೆಯತ್ತ ಹೆಜ್ಜೆಯಿಟ್ಟೆ.

ಬಾಗಿಲಿಗೆ ನೇತಾಡುತ್ತಿರುವ ತುಕ್ಕು ಹಿಡಿದಿರುವ ಬೀಗವನ್ನು ತೆಗೆದು ಮನೆಯೊಳಗೆ ಪ್ರವೇಶಿಸಿದಾಗ ಗೋಡೆಗಳು ಅಪರಿಚಿತರಂತೆ ನೋಡುವುದಲ್ಲದೆ ಏನೇನೋ ಪ್ರಶ್ನಿಸುತ್ತಿರುವಂತೆ ಭಾಸವಾಗಿ ಉಕ್ಕಿ ಬಂದ ದುಃಖವನ್ನು ತಡೆದುಕೊಂಡೆ.

ನಿಮ್ಮಿಂದ ಸಂಬಂಧ ಕಡಿದುಕೊಂಡಿದ್ದೇನೆ ಕ್ಷಮಿಸಬೇಕೆಂದು ಮನದಲ್ಲೆ ಗೋಡೆಗಳನ್ನು ಕ್ಷಮೆ ಕೇಳುತ್ತ ವರಾಂಡಕ್ಕೆ ಕಾಲಿಟ್ಟೆ.

ಬಣ ಬಣ ಎನ್ನುತ್ತಿದ್ದ ಖಾಲಿ ಮನೆಯನ್ನು ಒಂದೆರಡು ದಿನಗಳ ಹಿಂದಷ್ಟೆ ಹೆಂಡತಿ, ಮಕ್ಕಳು ಉಲ್ಲಾಸದಿಂದ ಸ್ವಚ್ಛ ಮಾಡಿದ್ದನ್ನು ನೆನಪಿಸಿಕೊಂಡಾಗ ಕಣ್ಣು ತೇವಗೊಂಡವು. ಹೊಸ ಮನೆಯಲ್ಲಿ ಬೇಸರವಾದಾಗಲೆಲ್ಲ ಇಲ್ಲಿಗೆ ಆಗಮಿಸಿ ಒಂದಿಷ್ಟು ಹೊತ್ತು ಕಾಲ ಕಳೆಯಬೇಕೆಂದು ಅವರ ಆಸೆಯಾಗಿತ್ತು. ಆದರೆ ಅವರ ಆಸೆಯನ್ನು ಚೂರು ಚೂರು ಮಾಡಿದ್ದೇನೆಂದು ಮೊದಲ ಬಾರಿಗೆ ಅರಿವಾಯಿತು.

ದೀರ್ಘಾವಧಿ ಬಳಿಕ ಇಂದು ಹಳೇ ಮನೆಯಲ್ಲಿ ರಾತ್ರಿ ಕಳೆಯಲು ಬಂದಿದ್ದೇನೆಂದು ನೆನಪಾಯಿತು. ಹೊಸ ಮನೆಗೆ ಹೋಗಿ ಹೆಚ್ಚು ಕಡಿಮೆ ನಾಲ್ಕು ವರ್ಷಗಳಾಗಿ ಹೋಗಿತ್ತು. ಎರಡು ಮನೆಗಳ ಮಧ್ಯೆ ತುಂಬ ಅಂತರವಿದೆ. ಹಳೇ ಮನೆ ಊರಿನ ಮಧ್ಯಭಾಗದಲ್ಲಿದ್ದರೆ ಹೊಸ ಮನೆ ಊರಿನ ಒಂದು ತುದಿಯಲ್ಲಿದೆ.

ನಾವು ಹೊಸ ಮನೆಗೆ ಹೋದ ಬಳಿಕ ಸುಮಾರು ಎರಡು ತಿಂಗಳಿಗಿಂತ ಹೆಚ್ಚಿನ ಕಾಲದವರೆಗೆ ಹಳೇ ಮನೆ ಖಾಲಿಯಾಗಿಯೇ ಇತ್ತು. ಆವಾಗಲೂ ಸಹ ಅದರಿಂದ ಆದಷ್ಟು ಬೇಗ ಸಂಬಂಧ ಕಳಚಿಕೊಳ್ಳಬೇಕೆಂದು ನನ್ನ ನಿರ್ಧಾರವಿತ್ತು. ಆಗಲೂ ಸಹ ಹೆಂಡತಿ ವಿರೋಧ ವ್ಯಕ್ತಪಡಿಸಿದಳು. ಅವಳ ವಿರೋಧಕ್ಕೆ ಹೆದರಿ ಮನೆ ಮಾರಾಟ ಮಾಡಿರಲಿಲ್ಲ. ಇದಕ್ಕೆ ಮತ್ತೊಂದು ಬಲವಾದ ಕಾರಣವಿತ್ತು. ಅದೇನೆಂದರೆ ಮನೆಗೆ ತಕ್ಕ ಬೆಲೆ ಕೊಡಲು ಯಾರೊಬ್ಬರು ಮುಂದೆ ಬರದೆ ಹೋದದ್ದು. ಅಂಥ ಸಮಯದಲ್ಲಿ ತೀರ ಪರಿಚಯ ಇರುವ ಕುಟುಂಬವೊಂದು ಸ್ವಲ್ಪ ಅವಧಿಯ ಮಟ್ಟಿಗೆ ಮನೆ ಬಾಡಿಗೆಗೆ ಕೊಡಲು ಮನವಿ ಮಾಡಿಕೊಂಡಾಗ ವಿಧಿಯಿಲ್ಲದೆ ಒಪ್ಪಿಕೊಳ್ಳಬೇಕಾಯಿತು.

ಮೂರುವರೆ ವರ್ಷಕ್ಕಿಂತ ಹೆಚ್ಚಿನ ಕಾಲದವರೆಗೆ ಅವರು ಬಾಡಿಗೆಗಿದ್ದು, ಹದಿನೈದು ದಿನಗಳ ಹಿಂದಷ್ಟೆ ಮನೆ ಖಾಲಿ ಮಾಡಿ ಹೋಗಿದ್ದರು. ಮನೆಯನ್ನು ಪುನಃ ಮತ್ತೊಬ್ಬರಿಗೆ ಬಾಡಿಗೆಗೆ ಕೊಡದೆ ಖಾಲಿ ಬಿಟ್ಟು ಹೊಸ ಮನೆಯಲ್ಲಿ ಬೇಸರವಾದಾಗ ಇಲ್ಲಿದ್ದು ಹೋಗಬೇಕೆಂದು ಹೆಂಡತಿ ಮಕ್ಕಳ ಆಸೆಯಾಗಿತ್ತು ನಿಜ. ಆದರೆ ನಾನು ಅವರ ಆಸೆಯ ವಿರುದ್ಧವಾಗಿ ಮನೆಯನ್ನೆ ಮಾರಿ ಬಿಟ್ಟೆ.

ಇಂದು ಇಲ್ಲಿ ಕಳೆಯುತ್ತಿರುವುದು ಕೊನೆ ರಾತ್ರಿ, ಭವಿಷ್ಯದಲ್ಲಿ ಇಲ್ಲಿ ಬರಲು ಸಾಧ್ಯವಿರಲಿಲ್ಲ.

ಹಿಂದೆ ಇಲ್ಲಿ ವಾಸವಾಗಿದ್ದಾಗ ಮನಸ್ಸು ಖಿನ್ನವಾದಾಗಲೆಲ್ಲ ನೇರವಾಗಿ ಹೆಜ್ಜೆಯಿಡುತ್ತಿದ್ದದೆ ಊರಿನ ಒಂದು ತುದಿಯಲ್ಲಿ ಇರುವ ಅಶ್ವತ್ಥ ವೃಕ್ಷದತ್ತ.

ಕೊಳದ ಬಳಿ ಕುಳಿತು, ಅಶ್ವತ್ಥ ವೃಕ್ಷದ ಪ್ರತಿಯೊಂದು ಕೊಂಬೆಯಲ್ಲಿ ನೇತಾಡುವ ನೂರಾರೂ ಬಾವಲಿಗಳನ್ನು ಸ್ಥಿರ-ದೃಷ್ಟಿಯಿಂದ ವೀಕ್ಷಿಸುವುದರಲ್ಲಿ ಮಗ್ನನಾಗುತ್ತಿದ್ದೆ. ಹಾಗೇ ಮಾಡುವಾಗಲೆಲ್ಲ ಬಾವಲಿಗಳು ಇಡೀ ಜೀವನವೆಲ್ಲ ಗೂಡು ಕಟ್ಟುವ ಗೋಜಿಗೆ ಹೋಗದಿರುವ ವಿಷಯ ಲಕ್ಷ್ಯಕ್ಕೆ ಬಂದು ಆಶ್ಚರ್ಯಕ್ಕೊಳಗಾಗುತ್ತಿದ್ದೆ.

ನಾಡ ಹಂಚಿನ, ಮಣಿಗೊಡೆಯ ಮನೆ ತುಂಬ ಹಿಂದೆಯೇ ಶಿಥಿಲಾವಸ್ಥೆಗೆ ತಲುಪಿತ್ತು. ಮಳೆಗಾಲದಲ್ಲಿ ಇಡೀ ಮನೆಯಲೆಲ್ಲ ನೀರು ಸೋರುತ್ತಿತ್ತು. ಸೋರುವ ಕಡೆಯಲೆಲ್ಲ ಮಣ್ಣಿನ ಪಾತ್ರೆಗಳನ್ನು ಇಡುತಿದ್ದೆವು.

ಅಪ್ಪ ಮಲಗುತ್ತಿದ್ದದು ವರಾಂಡದ ಮಧ್ಯ, ಅಮ್ಮ ಮತ್ತು ತಂಗಿ ಒಂದು ಮೂಲೆಯಲ್ಲಿ, ನಾನೊಬ್ಬನೇ ಇನ್ನೊಂದು ಮೂಲೆಯಲ್ಲಿ. ಮಳೆಗಾಲದಲ್ಲಿ ನನಗೆ ನಿಶ್ಚಿಂತೆಯಿಂದ ನಿದ್ದೆ ಬರುತ್ತಿರಲಿಲ್ಲ. ಹರಡಿರುವ ಕತ್ತಲೆಯಲ್ಲಿ ಕಾಣದಿರುವ ಗೋಡೆಗಳತ್ತ ದೃಷ್ಟಿ ನೆಟ್ಟಿ ಅವು ಯಾವ ಕ್ಷಣದಲ್ಲಾದರೂ ಬೀಳುವ ಸಂಭವವಿದೆ ಎಂದು ಭಯ ಪಡುತ್ತಿದ್ದೆ.

ಗೋಡೆ ಬಿದ್ದರೆ ನನ್ನ ಮೇಲೆಯೇ ಬೀಳಲಿ ಎಂದು ಪ್ರಾರ್ಥಿಸುತ್ತಿದ್ದೆ. ಹೀಗೆಲ್ಲ ವಿಚಿತ್ರವಾಗಿ ಯೋಚಿಸುತ್ತಿದ್ದದ್ದು ಸುಮಾರು ಇಪ್ಪತ್ತು ವರ್ಷಗಳಾಚೆ, ಇಪ್ಪತ್ತನೆ ವಯಸ್ಸಲ್ಲಿ ಆಗ ನಮ್ಮ ಕುಟುಂಬದಲ್ಲಿ ನಾಲ್ಕು ಸದಸ್ಯರಿದ್ದರು. ಈಗಲೂ ಸಹ ನಾಲ್ಕೇ ಸದಸ್ಯರಿರುವುದು.

ನಾನು, ಹೆಂಡತಿ, ಇಬ್ಬರು ಗಂಡು ಮಕ್ಕಳು. ಅಪ್ಪ, ಅಮ್ಮ ಬದುಕಿದಷ್ಟು ಕಾಲ ಮನೆಯನ್ನು ಬೀಳಿಸಿ ಅಲ್ಲೆ ಹೊಸ ಮನೆ ನಿರ್ಮಾಣ ಮಾಡಬೇಕೆಂದು ಆಸೆ ಹೊಂದಿದ್ದರು. ಆದರೆ ಅವರು ಹೊಸ ಮನೆ ಕಟ್ಟುವುದಕ್ಕೆ ಮುನ್ನವೇ ತಂತಮ್ಮ ಶಾಶ್ವತವಾದ ಗೂಡಿಗೆ ಹೋಗಿ ಸೇರಿಕೊಂಡರು. ಅವರು ಮರಣ ಹೊಂದಿದ ಬಳಿಕ ಮೊದಲು ನನ್ನ ಅನಂತರ ತಂಗಿಯ ವಿವಾಹವಾಯಿತು. ಅಪ್ಪ, ಅಮ್ಮ ಕೇವಲ ಆರು ದಿನಗಳ ಅಂತರದಲ್ಲಿ ಮರಣ ಹೋದಾಗ ನಾನು ಮತ್ತು ತಂಗಿ ಹೇಳಲು ಸಾಧ್ಯವಿಲ್ಲದಷ್ಟು ದುಃಖ ಅನುಭವಿಸಿದ್ದೇವೆ. ನಿಜ ಅರ್ಥದಲ್ಲಿ ನಮಗೆ ಸಮಾಧಾನ ಹೇಳುವರಿಲ್ಲದ ಕಾಲದಲ್ಲಿ ಕೆಲವೊಮ್ಮೆ ಅವಳು ನನಗೆ ಮತ್ತೆ ಕೆಲವೊಮ್ಮೆ ನಾನು ಅವಳಿಗೆ ಸಮಾಧಾನ ಹೇಳುತ್ತಿದ್ದೆವು.

ಕನ್ನಡ ಪತ್ರಿಕೆಯ ಸಂಪಾದಕರೊಬ್ಬರು ಮೊನ್ನೆ ನನ್ನ ಹೊಸ ಕಥೆಯೊಂದನ್ನು ಓದಿದ ಬಳಿಕ ನನ್ನ ಕಥೆಗಳು ದುಃಖದಿಂದ ತುಂಬಿರುತ್ತೆ ಎಂದು ಹೇಳಿ, ನಿಮ್ಮ ದೃಷ್ಟಿಯಲ್ಲಿ ಜೀವನದ ಎರಡನೇ ಹೆಸರು ದುಃಖ ಏನು ಎಂದು ಪ್ರಶ್ನಿಸಿದಾಗ ನಮ್ಮ ಹಿನ್ನಲೆ ಹೇಳಲು ಮನಸ್ಸಾಗದೆ ಮೌನ ವಹಿಸಿದೆ.

ನಮ್ಮ ಜೀವನದಲ್ಲಿ ಯಾವಾಗಲೂ ದುಃಖಗಳೇ ಇರುತ್ತಿರಲಿಲ್ಲ ನಿಜ. ಸುಖಗಳು ಸಹ ಇದ್ದವು. ಅಪ್ಪ ಅಮ್ಮ ಜೀವಂತವಾಗಿದ್ದಾಗ ನಾವೆಲ್ಲರು ಎಷ್ಟೊಂದು ಸುಖವಾಗಿದ್ದೆವು. ಇದ್ದುದಷ್ಟರಲ್ಲಿ ನೆಮ್ಮದಿ ಪಡೆಯುತ್ತಿದ್ದೆವು.

ಅಮ್ಮನಿಗೆ ಕರುಳಿನ ಅಲ್ಸರ್ ಇತ್ತು. ಒಮ್ಮೊಮ್ಮೆ ಹೊಟ್ಟೆ ನೋವು ಜಾಸ್ತಿಯಾದಾಗ ಸ್ಥಳೀಯ ವೈದ್ಯರಿಂದ ಔಷಧಿ ತೆಗೆದುಕೊಂಡರೆ ನೋವು ಕಡಿಮೆಯಾಗುತ್ತಿತ್ತು.

ಒಂದು ರಾತ್ರಿ ಅಮ್ಮನಿಗೆ ವಿಪರೀತ ಹೊಟ್ಟೆ ನೋವು ಕಾಣಿಸಿಕೊಂಡಾಗ ಅರ್ಧ ರಾತ್ರಿಯಲ್ಲೆ ಟ್ಯಾಕ್ಸಿ ಮಾಡಿಸಿಕೊಂಡು ಮೈಸೂರಿಗೆ ಹೋಗಬೇಕಾಯಿತು. ಮನೆಯಿಂದ ತುಸುವೇ ದೂರದಲ್ಲಿ ನಿಂತಿದ್ದ ಕಾರಿನವರೆಗೆ ನನ್ನನ್ನು ಹಾಗೂ ಅಮ್ಮನನ್ನು ಬೀಳ್ಕೊಡಲು ತಂಗಿ ಮತ್ತು ಅಪ್ಪ ಇಬ್ಬರೂ ಬಂದಿದ್ದರು. ಅಪ್ಪ ನಿರಂತರವಾಗಿ ಅಮ್ಮನಿಗೆ ಧೈರ್ಯ ಹೇಳುತ್ತಲೆ ಇದ್ದ. ಅಪ್ಪ, ಅಮ್ಮರ ಅದೇ ಕೊನೇ ಭೇಟಿ ಎಂದು ಈಗ ನೆನಪಿಗೆ ಬರುತ್ತೆ.

ಅತ್ತ ಅಮ್ಮ ಆಸ್ಪತ್ರೆಯಲ್ಲಿದ್ದಾಗಲೇ ಇತ್ತ ಒಳ್ಳೆ ಸ್ಥಿತಿಯಲ್ಲಿದ್ದ ಅಪ್ಪನಿಗೆ ಒಮ್ಮೆಲೇ ಜ್ವರ ಬಂದು ಅವರು ಮರಣ ಹೊಂದಿದಾಗ ಅವರ ಬಳಿ ತಂಗಿ ಮಾತ್ರ ಇದ್ದಳು.

ಅಪ್ಪನ ಮರಣದ ಸುದ್ದಿ ನನಗೆ ಆಸ್ಪತ್ರೆಯಲ್ಲಿ ತಲುಪಿದ ಸಂದರ್ಭದಲ್ಲಿ ಅಮ್ಮನಿಗೆ ಒಂದು ಚೂರು ಪ್ರಜ್ಞೆ ಇರಲಿಲ್ಲ. ಇಂಥ ಚಿಂತಾಜನಕ ಸನ್ನಿವೇಶದಲ್ಲಿ ಆಪ್ತರೊಬ್ಬರನ್ನು ಅಮ್ಮನ ಬಳಿ ಬಿಟ್ಟು ನಾವು ಊರಿಗೆ ತಲುಪಿ, ಹೆಚ್ಚಿನ ಸಮಯದವರೆಗೆ ಯಾರೊಬ್ಬರನ್ನು ನಿರೀಕ್ಷಿಸದೆ ಅಪ್ಪನ ಅಂತ್ಯಕ್ರಿಯೆ ಮುಗಿಸಿದ ಕೂಡಲೇ ತಂಗಿಯನ್ನು ಜೊತೆಯಲ್ಲಿ ಕರೆದುಕೊಂಡು ಮೈಸೂರಿಗೆ ಹೊರಟಿದ್ದೆ.

ಅಮ್ಮನಿಗೆ ಎರಡು ದಿನವಾದರೂ ಪ್ರಜ್ಞೆ ಬಾರದೆ ಅವಳು ಬದುಕಲು ಸಾಧ್ಯವೇ ಇಲ್ಲ ಎಂದು ಖಾತರಿಯಾಗಿ ತುಂಬಿದ ಹೃದಯದಿಂದ ಅವಳನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿಸಿಕೊಂಡು ಊರಿಗೆ ತಂದೆ. ಊರಿಗೆ ಮರಳಿದ ಮೂರನೇ ದಿನವೇ ಅಮ್ಮ ಇಹಲೋಕ ತ್ಯಜಿಸಿದಳು. ಅಮ್ಮ ಸತ್ತಾಗ ಅವಳಿಗೆ ತಾನು ವಿಧವೆಯಾಗಿ ಸಾಯುತ್ತಿದ್ದೇನೆಂಬ ವಿಚಾರ ಅವಳ ಅರಿವಿಗೆ ಬರಲೇ ಇಲ್ಲ.

ನನ್ನ ಜೀವನದಲ್ಲಿ ಇಷ್ಟೆಲ್ಲ ನಡೆದರೂ ಒಮ್ಮೆಯೂ ನಾನು ಜೀವನವನ್ನು ಒಂದು ಯುದ್ಧ ಎಂದು ಪರಿಗಣಿಸಲೇ ಇಲ್ಲ. ಆದರೆ ಇಂದು ಮಾತ್ರ ನನ್ನ ಸ್ಥಿತಿ ಯುದ್ಧದಲ್ಲಿ ರಾಜ್ಯವನ್ನೇ ಕಳೆದುಕೊಂಡ ರಾಜನಂತೆ ಆಗಿತ್ತು. ಇದಕ್ಕೆ ಮುಖ್ಯ ಕಾರಣ ಹಿರಿಯರ ನೆನಪಾಗಿದ್ದ ಮನೆಯನ್ನು ಕಳೆದುಕೊಂಡದಕ್ಕಿರಬಹುದೆ?

ಆಸ್ತಿ, ಅಂತಸ್ತು, ಯೌವ್ವನ, ಸೌಂದರ್ಯ ಇವೆಲ್ಲವೂ ಒಂದಲ್ಲ ಒಂದು ದಿನ ಮಣ್ಣಾಗುತ್ತೆ, ಏನೇ ಕಳೆದುಕೊಂಡರು ದುಃಖ ಪಡಬಾರದೆಂದು ನಾನು ಅನೇಕ ಕಥೆಗಳಲ್ಲಿ ಹೇಳಲಿಲ್ಲವೇ?

ಅಪ್ಪ-ಅಮ್ಮ ಮರಣ ಹೊಂದಿದ ಬಳಿಕ ಅವರು ಉಪಯೋಗಿಸುತ್ತಿದ್ದ ವಸ್ತುಗಳನ್ನು ಕಾಲ ಕ್ರಮೇಣ ಒಂದೊಂದಾಗಿ ಕಂಡ ಕಂಡವರಿಗೆ ಹಂಚಲು ತೊಡಗಿದೆ. ಈ ರೀತಿ ಹಳೇ ನೆನಪುಗಳಿಂದ ಮುಕ್ತಿ ಪಡೆಯಬೇಕೆಂದು ಆಸೆ. ನಿಜ ಹೇಳಬೇಕೆಂದರೆ ಅವರ ವಸ್ತುಗಳಿಂದ ಮಾತ್ರ ಮುಕ್ತಿ ಪಡೆದೆನೇ ವಿನಃ ನನ್ನ ಮನದಲ್ಲಿ ಅಡಗಿರುವ ಅವರ ನೆನಪುಗಳಿಂದ ಮುಕ್ತಿ ಪಡೆಯಲು ಆಗಲೇ ಇಲ್ಲ. ಮನೆ ಮಾರಾಟ ಮಾಡಿದ್ದು ಸಹ ನೆನಪುಗಳಿಂದ ಮುಕ್ತಿ ಪಡೆಯಲು ಇರಬಹುದೆ?

ಇನ್ನೊಬ್ಬರು ಕೇಳುವ ಪ್ರಶ್ನೆ ನನಗೆ ಯಾವ ಪರಿಣಾಮವನ್ನು ಉಂಟು ಮಾಡುವುದಿಲ್ಲ. ಆದರೆ ನನ್ನ ಪ್ರಶ್ನೆ ಈಟಿಯಂತೆ ನನ್ನ ಹೃದಯವನ್ನೆ ಸೀಳಿಕೊಂಡು ಹೋಗುತ್ತೆ.

ಜೀವನದಲ್ಲಿ ನಡೆದ ಇಂಥ ಘಟನೆಗಳಿಂದ ಬೇಸತ್ತು ಒಮ್ಮೊಮ್ಮೆ ನಾಸ್ತಿಕನಂತೆ ಮಾತನಾಡುವುದುಂಟು. ಕಾಣದಿರುವ ದೇವರಿಂದ ಸಹಾಯ ಬೇಡುವ ಬದಲು ಕಣ್ಣೆದುರಿಗಿರುವ ಮನುಷ್ಯನತ್ತ ಸ್ನೇಹದ ಹಸ್ತ ಚಾಚಿದರೆ ಸರಿಯಿಲ್ಲವೇ? ಕೂಡಿಟ್ಟ ಅಲ್ಪ ಸ್ವಲ್ಪ ಹಣ ತಾಯಿಯ ಖಾಯಿಲೆಗೆ ಖರ್ಚಾಗಿ ಹೋದಾಗ ನನ್ನ ನೋವನ್ನು ಯಾರೊಂದಿಗೂ ಹೇಳಲಿಲ್ಲ, ದೇವರೊಂದಿಗು ಸಹ.

ಮರಣ ಹೋದವರ ಆತ್ಮಕ್ಕೆ ಶಾಂತಿ ಸಿಗಲೆಂದು ಮಾಡುವ ತಿಥಿಯ ಮೇಲೆ ವಿಶ್ವಾಸವಿಲ್ಲದಿದ್ದರೂ ವಿಧಿಯಿಲ್ಲದೆ ಅಪ್ಪ-ಅಮ್ಮರ ತಿಥಿ ಮಾಡಬೇಕಾಯಿತು.

ಎಷ್ಟೊ ಮಂದಿಗೆ ಆತ್ಮವೇ ಇರುವುದಿಲ್ಲ.

ತಿಥಿ ಬಳಿಕ ನೆಂಟರೆಲ್ಲರೂ ಹೊರಟು ಹೋದ ನಂತರ ಈ ಮನೆಯೇ ನಮಗೆ ಸಮಾಧಾನ ಹೇಳಿದ್ದು. ಇಂದು ಇದರ ಋಣವನ್ನು ಇದರಿಂದ ಮುಕ್ತಿ ಪಡೆಯುವ ಮೂಲಕ ತೀರಿಸುತ್ತಿದ್ದೇನೆ.

ಕೆಲವು ದಿನಗಳ ಹಿಂದೆ ಆಪ್ತರೊಬ್ಬರು ಮರಣ ಹೊಂದಿದಾಗ ಸ್ಮಶಾನಕ್ಕೆ ಹೋಗುವ ಸಂದರ್ಭವಾಯಿತು. ಹದಿನೈದು ವರ್ಷಗಳ ಹಳೇಯ ಅಪ್ಪ-ಅಮ್ಮರ ಗೋರಿಗಳು ಯಾವುದೆಂದು ಪತ್ತೆ ಮಾಡಲು ಸಾಧ್ಯವಾಗಿಲ್ಲ.

ಹೊಸ ಮನೆ ನಿರ್ಮಾಣ ಮಾಡಬೇಕೆಂದು ಅವರ ಕನಸಾಗಿತ್ತು. ನಡೆದದ್ದೆಲ್ಲವನ್ನು ಮೆಲಕು ಹಾಕುತ್ತ, ನಮ್ಮದೆ ಒಂದು ಕಥೆ ಬರೆಯಬೇಕೆಂದು ಯೋಚನೆ ಬಂತು. ಕೆಲವು ಕಥೆಗಳಿರುತ್ತವೆ ಅವುಗಳು ಶಬ್ದಗಳ ಬಲೆಯಲ್ಲಿ ಸಿಗುವುದಿಲ್ಲ. ನಮ್ಮ ಕಥೆಯು ಅಂಥದ್ದೆ.

ರಾತ್ರಿ ಮೆಲ್ಲ-ಮೆಲ್ಲನೆ ಕರಗುತ್ತ, ಮುಗಿಯುತ್ತ ಬಂದಿತ್ತು, ಇಲ್ಲಿ ನಾನು ಕ್ಷಣಗಳ ಅತಿಥಿಯಾಗಿದ್ದೇನೆ ಎಂಬ ವಿಚಾರ ಲಕ್ಷ್ಯಕ್ಕೆ ಬಂದು ಒಮ್ಮೆಲೆ ಕಣ್ಣುಗಳಿಂದ

ಧಾರಾಕಾರವಾಗಿ ಕಣ್ಣೀರು ಹರಿದು ಬಂತು. ಇದೇ ವೇಳೆಯಲ್ಲಿ ಇಂದು ಮನೆಯೂ ಸಹ ಸಮಾಧಾನ ಹೇಳುತ್ತಿಲ್ಲವೆಂದು ಭಾಸವಾಯಿತು. ಉಕ್ಕಿ ಬರುತ್ತಿರುವ ದುಃಖವನ್ನು ತಡೆಯಲು ಸಾಧ್ಯವಿಲ್ಲ ಎನ್ನಿಸುವಷ್ಟರಲ್ಲೇ ನಲ್ಲಿಯಲ್ಲಿ ನೀರು ಬರುವ ಶಬ್ದ ಕೇಳಿಸಿತು.

ಮುಖ ತೊಳೆದು ಒಂದೆರಡು ಬೊಗಸೆ ನೀರು ಕುಡಿದು ಮುಗಿಸುವಷ್ಟರಲ್ಲಿ ಇಲ್ಲಿನ ನೀರಿನ ಋಣ ಮುಗಿಯಿತೆಂದು ಅರಿವಾಗಿ ಗರ ಬಡಿದಂತಾಯಿತು. ನಲ್ಲಿ ಬಳಿ ನಿಂತುಕೊಂಡಿರುವಾಗಲೇ ಯಾರೋ ಬಾಗಿಲು ಬಡಿಯುತ್ತಿರುವುದು ಕೇಳಿಸಿ ಅತ್ತ ಸೋತ ಹೆಜ್ಜೆಯಿಟ್ಟೆ. ಚಿಲಕ ತೆಗೆದು ಬಾಗಿಲು ತೆರೆದಾಗ ಹೊಸ್ತಿಲ ಆ ಕಡೆ ನಿಂತಿರುವ ಮನೆಯ ನೂತನ ಮಾಲೀಕನ ಮೇಲೆ ದೃಷ್ಟಿ ಹೋಯಿತು.

ಹೊಸ್ತಿಲ ಆಚೆ ನಿಂತಿರುವ ಮನೆಯ ನೂತನ ಮಾಲಿಕ ಮೌನವಾಗಿರುವುದನ್ನು ಕಂಡು ನಾನು ಸಹ ಬಾಯಿ ತೆರೆಯಲಿಲ್ಲ. ಒಂದೆರಡು ಕ್ಷಣ ಯೋಚಿಸುತ್ತ ನಿಂತ ಬಳಿಕ ಮೌನವಾಗಿ ಹೊಸ್ತಿಲು ದಾಟದೆ-ನನ್ನ ಹೆಣವನ್ನು ನಾನೇ ಹೊತ್ತು ಕೊಂಡು.

●

ಫ್ರೀ ಟೌನ್

● ಅರಕಲಗೂಡು ನೀಲಕಂಠಮೂರ್ತಿ

- ೧ -

ಯಾವ ಲೆಕ್ಕದಲು ಭೂಮಂಡಲಕ್ಕುಡಿಸಿದ
ಪುಟ್ಟ ಪುಟಗೋಸಿ
ಈಗ ಕಿತ್ತಾಡಿ ಹರಿದು
ಇನ್ನೇನು ಛಿದ್ರ
ಈ ಸಿಯರಾ ಲಿಯೋನ್!
ಜಗತ್ತಿನೆಲ್ಲ ಜನಪ್ರಭುತ್ವಗಳಲು
ದೇಕಿ ತಡಕಾಡಿ ಹುಡುಕಿದರು
ಮತ್ತೊಂದು ಬಹುಷಃ ಸಿಗದು
ಪ್ರಬುದ್ಧ ವಿಪರ್ಯಾಸದ ಇಂಥ ಹೆಸರು
ಇಲ್ಲಿಯ ರಾಜಧಾನಿ ಫ್ರೀ ಟೌನ್....!

- ೨ -

ಮಕ್ಕಳಿಗಿಲ್ಲಿ ಕೈತುತ್ತಿನ ಬೋಧನೆಯ ಬದಲು
ಬಂದೂಕು ಮದ್ದುಗುಂಡುಗಳ ಗುರಿಕಾರ ಬಯಲಿನಮಲು
ಹತ್ತರೆತ್ತರದ ಹೊಸ್ತಿಲಿನಲ್ಲೆ
ಅವರೆಲ್ಲ ಬಂಡುಕೋರ ಯೋಧರು
ಎಲ್ಲ ತಲೆ ಕೂದಲಲ್ಲು ಹೇರಳ ಹರಿವ ಗಾಂಜಾ ತೈಲದೊತ್ತಾಯ!
ಸದ್ಯ ಗಾದಿ ಹಿಡಿದವರ ಸುತ್ತಲೂ ಅವರೇ
ಹೊರವಲಯಗಳಲವಿತು ಗಾದಿಯ ಕನಸಿನ ಸಂಚಲ್ಲಿ
ಹಲ್ಲು ಮಸೆವವರ ಪರ ಪಂಜಿನ ತುಕಡಿಯೂ ಅವರೇ....

- ೩ -

ಕತ್ತಲೆ ಮಾತ್ರ ಭೀತಿಯ ಭೀಷಣ ಶಿಶು ಹೆತ್ತೊಡಲೆ?
ನಗ್ನ ನೇಸರನ ಉರಿಗಣ್ಣೆದುರಲ್ಲೆ
ಕಪ್ಪು ಸೀರೆ ಕುಪ್ಪಸ ತೊಟ್ಟ ತಾಂಡವ ಸಂಚಾರದ ಮೋಹಿನಿ!

ಹಿಟ್ಲರನೊಬ್ಬನ ಸ್ವಾಮ್ಯವಲ್ಲ ನರಮೇಧದ ತೇಗು!
ವಿಚ್ಛಿದ್ರ ಛಾತಿಗಳ ರಾಶಿಗುಡ್ಡೆಗಳು
ರಸ್ತೆ ಬೀದಿ ಗಲ್ಲಿ ಗಟಾರಗಳಲ್ಲಿ
ಲಿಂಗ ವಯಸ್ಸು ಪಂಗಡಗಳ ಗೊಂದಲವಿಲ್ಲ
ನಾಯಿ ನರಿಗಳ ಹದ್ದುಗಳಟ್ಟಹಾಸದ ಬಿಚ್ಚು ಹಬ್ಬದಾಹಾರ
ಯಥೇಚ್ಛತೆಯ ಸಡಗರದಲ್ಲಿ ತಿನ್ನುವ ಬಾಯಿಗಳಿಗೂ ಬರ!
ಕಪ್ಪು ಕೆಂಪಾಗಿ ಭಯ ಕಕ್ಕುವ ದಾಂಬರು
ಎತ್ತ ತಿರುಗಿದರು ಶಿಸ್ತಿಲ್ಲದೆ ನಡೆವ ಬಂದೂಕು!

- ೪ -

ಊರೆಲ್ಲ ತಡಕುವ ಎದೆ ನಡುಗಿಸುವ ಗಸ್ತು
ಊಳಿಡುವ ಬೂಟುಗಳು
ಕತ್ತಲೆಯುದರ ಹೊಕ್ಕಿ ಹೊಂಚುವ ನೆರಳುಗಳು
ಕತ್ತೆಕಿರುಬಗಳ ಹಸಿ ಮಾಂಸದ ಹೆಬ್ಬಯಕೆ....
ಸಮರಾತ್ರಿ ಗುಡಿಸಲಲ್ಲಿ ಬುಡ್ಡಿ ಆರಿದ್ದರು
ಹೆತ್ತ ಕಣ್ಣಲ್ಲಿ ಬಡಿದೆಬ್ಬಿಸಿದೆಚ್ಚರ ತದೇಕ!
ಬಾಗಿಲು ಬಡಿವರು ಮೊದಲು ಧಬಧಬ
ಕ್ಷಣದಲ್ಲೆ ಒದ್ದುರುಳಿಸುವರು
ಸಹನೆ ತರಿದ ಹಪಾಪಿ ನರಮಂಡಲದ ತುರಿ!
ಕ್ಷಣದಲ್ಲಿ ಬಿಚ್ಚೆಸೆವ ದಿರಿಸಿಗೇಕೆ ಗುರುತಿನ ಛಾಪು?
ಒಡಲುರಿಸುವ ಹಸಿವ ಕೊಳ್ಳಿ ಎಲ್ಲರೊಲೆಯಲ್ಲು....

ನಸುಕಲ್ಲೆ ಬಾಗಿಲೆದುರು ಬೆಂಕಿಯಿಟ್ಟಂಥ ರೋದನ
ನಿಂತಿರುವಳು ಮಗಳು ಅರೆಬರೆ ಬಟ್ಟೆಯಲ್ಲೆದುರು
ಚಂಡಮಾರುತ ಬಡಿದ ಮರುದಿನದಂತೆ!
ಮೈಯ್ಯೆಲ್ಲ ವಿಧ್ವಂಸ
ಕಣ್ಣು ಕುಕ್ಕುವ ಗೀರುಗಳು ರಕ್ತಕಲೆಗಳು
ಕೆನ್ನೆ ಮೇಲೆ ಉಪ್ಪಾದ ಹನಿಗಳು
ಕ್ರೂರ ನಿಶಾನೆಗಳು....
ಒಂದಲ್ಲ, ನೂರಲ್ಲ
ಅಬಲ ಗೋಡೆಗಳ ಪ್ರತಿ ಮನೆಯಲ್ಲು
ಒಬ್ಬಿಬ್ಬರಾದರೂ ಇಂಥ ರುದ್ರ ಶರೀರದ ಕನ್ಯೆಯರು
ಬಾಲ-ಯುವಕರೆಲ್ಲ ಹೊಡೆದುಕೊಂಡು ಹೋದ ಯೋಧರು....!

- ೫ -

ಹೆಬ್ಬಾಗಿಲಲಿ ನೇತುಬಿದ್ದಿರುವ ಹಳೆಯ ಗಂಟೆಗೆ
ಮೊದಲು ಸಾಲುಗಟ್ಟಿದವರೀಗ ನೂಕು ನುಗ್ಗಲು
ಕೇಳುವ ಕಿವಿಗಳೆಲ್ಲಿ
ನಿರಂತರ ದಂಗೆಗಳ ರೂವಾರಿ ನೇತಾರ ಬಂಡೆತಲೆಗಳಲ್ಲಿ?
ಓ ಫ್ರೀ ಟೌನ್.... ಎಂದು ನೀ ನಿಜಕ್ಕೂ ಫ್ರೀ ಟೌನ್....?

ಊರು ಬಿಟ್ಟ ಹುಡುಗಿ ಮತ್ತು ನೀರಿತ್ತ ನರ

ಬಿ.ಎಂ. ಗುರುಸ್ವಾಮಿ

ಊರು ಬಿಟ್ಟ ಚೆಲುವೆಗೆ
ನೀರು ಕೊಟ್ಟ ಹುಡುಗ
ಕಡ ಕೊಟ್ಟರೂ ಮಿಕ್ಕುಳಿವುದು
ಅವಳೊಡಲ ಗುಡುಗು, ತೀಡಿ ಮಾಡಿದ
ತೊಡೆ, ಲಪ್ಪ ಮಾಡಿದ ಗೋಡೆಯಂತಾ
ಬೆನ್ನು,-ಹೊನ್ನಗೆನ್ನೆಯ ಚಿನ್ನ
ನಕ್ಕು ಬಿಟ್ಟರೆ ರೊಕ್ಕ ಘಳಗುಟ್ಟಿದಂತೆ.
ನಗಹೋಗಬೇಡ ಚೆಲುವೆ, ಧಗೆಗಿಟ್ಟಹುದು
ಹುಡುಗನ ಬದುಕು, ಬಗೆಯಾಗಲಾರನು
ಹೊಗೆಯ ಹುದಲಿನಲಿ, ಹದಗೆಟ್ಟ ಪದ
ಅವನು, ನೀ ದಕ್ಕಿದರೆ ಮಾತ್ರ ಪಲ್ಲವಿಸ
ಬಹುದು ಮೆಲ್ಲಗೆ, ಹಾಡು ಮಾಡು ಹುಡುಗನ
ನೀರಿತ್ತ ನರನವನು, ಉಣಿಸಿಬಿಡು ಮನಸಾರ,
ಉಂಡಾಡಿ ಬಿಡಲಿ ನಿನ್ನ ಮೈ ದೋಟದ
ಮೈ-ದಾನದಲಿ. ಬಾಗಿ ಬಿಡು ಅವನಾರ
ಅಳೆದು ಬಿಡಲಿ ನಿನ್ನಾಳದ ನಾಳಗಳ
ಕಂಡರಿಯದ ನಾಳೆಗಳ, ಬಿಚ್ಚಿಬಿಡು
ನಿನ್ನುಚ್ಚೆದೆಯ ಬಿಸಿಯ ಬೆಚ್ಚನೆ

ಭಾವಗಳ ಸ್ವಚ್ಛ ಪಚ್ಚೆಗಳ.
ಊರು ಬಿಟ್ಟ ಹುಡುಗಿ ನೀನು
ನೀರು ಕೊಟ್ಟ ಹುಡುಗ ಅವನು
ಕಲಿದು ಮಲೆಯಲಿ, ನಲಿದು
ಅಲೆಯಲಿ ಪ್ರೇಮ ಲೀಲೆಯಲಿ
ಎಂದಾದರೂ ಮುಂದೊಮ್ಮೆ
ಹುಟ್ಟಬಹುದು ಸದ್ದಿಲ್ಲವ ಹೀರಿ
ಸುದ್ದಿ ಮಾಡುವ ಮೌನ.

●

ಅಮೃತಮತಿ

● ಗುಂಡಣ್ಣ ಕಲಬುರ್ಗಿ

ಕಲೆಗೆ ಮರುಳಾದ ಮನಸ್ಸು ಮೈಮರೆತು ನಿಲ್ಲುವ ಕ್ಷಣ!
ನಿರೀಕ್ಷಣ : ತನ್ನೊಳಗನ್ನು ಕಳೆದು - ಉಳಿದದ್ದಕ್ಕೆ ಹಲುಬಿ,
ಹಾಡ ಜೀವಕ್ಕೆ ಹಂಬಲಿಸುವುದು. ಹೊಂಬೆಳಕಿಗೆ ಎದೆಯೊಡ್ಡಿ
ಮಲಗಿದ ಮಂದಾರ ಮರುಗಳಿಗೆಯಲ್ಲೇ ಮೌನಗೀತ!
ನೀರ ನಿಲುವನ್ನು ಭೇದಿಸಿ ಬಂದ ಕದಡುವಿಕೆಯ ಬಗ್ಗೆ ಏದುಸಿರು.
ಬೆಳಗಿನ ಜಾವಕ್ಕೆ, ತುಳುಕುವ ಜವ್ವನಕ್ಕೆ : ಮುನಿದು ನಿಂತ
ತಳಮಳ - ತಲ್ಲಣ! ಕನಸುಗಳ ಕನವರಿಸಿ, ಭಾವನೆಗಳ ಸಿಂಗರಿಸಿ
ಬೇಲೂರು ಬಾಲೆಯರಂತೆ ಮನವೆಲ್ಲ ಬರೀ ಬೆತ್ತಲೆ ಕಣ್ಣತುಂಬ ಕತ್ತಲೆ!

ಕಪ್ಪು ಪರದೆಯ ಓಸರಿಸಿ - ಓ! ಬೆಳ್ಳಿ-ಬೆಳಕಾಗಿ, ಬಳುಕುವ
ಬಳ್ಳಿಗೆ ಮಾತ್ರ ಭಾರವಾದ ಬದುಕು : ಎದುಕು? ಹಾವಸೆಯೆ
ಜಾರಿ ಹಂಸಪಕ್ಷಿ ಹಾರಿಹೋಯಿತು - ಎತ್ತಿಕೊಳ್ಳದ ಕೊಳದಲ್ಲಿ!
ಕೊಳಲ ನಾದಕ್ಕೆ ಗರಿಯೆ ತೆರೆದು ನಲಿಯುತ್ತಿತ್ತು. ಮೈ ಮನವೆಲ್ಲ
ಮರುಳಗೊಳಿಸಿತ್ತು! ಆದರೂ ಸತ್ಯ : ಯಶೋಧರನ
ಭಾವದ ನಿಲುವು - ಒಲವಿನ ಕನ್ನಡಿ ಒಡೆದು ಚೂರಾಯಿತು!

●

ಸೂರ್ಯಸ್ಖಲನ

ದಿನೇಶ್ ಮಾದೇನಹಳ್ಳಿ

ನಾವೆಲ್ಲ
ಬೆಳಗಿನ ಜಾವದ ಹೊತ್ತಿನಲ್ಲಿ
ಪ್ರೇಯಸಿಯ ತಬ್ಬಿ
ಮಂಚ ಮುರಿಯುವಂತೆ
ಕನಸು ಕಾಣುತ್ತಿದ್ದರೆ....

ಆ ಸೂರ್ಯ ಚಂದ್ರ
ಬೆಟ್ಟದ ಹಿಂದೆ
ಬೆತ್ತಲಾಗಿ
ಮಧುಚಂದ್ರದಲ್ಲಿರುತ್ತಾರೆ
ಏಳುಗಂಟೆವಷ್ಟೊತ್ತಿಗೆ
ಫ್ರೆಶ್ ಆಗಿ ಮುಖತೊಳೆದು
ಪೋಸು ಕೊಟ್ಟು ಉದಯಿಸುತ್ತಾರೆ.

ಒಂದು ಗಂಟೆ ಹೊತ್ತಿಗಾಗಲೇ
ಜಗಳದ ಗುದ್ದಾಟ
ಹೆಂಡತಿಯ ಮೇಲಿನ ಸಿಟ್ಟು
ರಣರಣ ಉರಿಬಿಸಿಲು

ಸಾಯಂಕಾಲದ ತಣ್ಣನೆಯಲ್ಲಿ
ಇಬ್ಬರ ಕಾಮೋತ್ಕಟತೆಯಿಂದ
ಸ್ಖಲನ
ಬಟ್ಟೆಯೆಲ್ಲಾ ಒದ್ದೆ
ಸ್ವಚ್ಛತೆಗಾಗಿ
ಸಮುದ್ರದಲ್ಲಿ ಮುಳುಗಿ
ಸ್ನಾನ.

ಪ್ರಾಯದ ಮುಂಗಾರು

ನಾಗವೇಂದ್ರ ಸ್ವಾಮಿ, ಚಿದರವಳ್ಳಿ

ಆಗಾಗ್ಗೆ ಕಾಣಿಸಿ
ಮಾಯವಾಗುವ ಮಿಂಚುಗಳು
ಸಿಡಿಲು ಗುಡುಗುಗಳ
ಆರ್ಭಟ ಕೇಕೆಗಳು
ಗಾಳಿ ಬೀಸಿದತ್ತಲೆ
ಓಲಾಡುತ್ತಿರುವ ವಿರಹ
ಒಡೆದು ಹನಿಗಳಾಗಲು
ತವಕಿಸುತ್ತಿರುವ ಮೋಡಗಳು

ಗಂಡ ಮಳೆಯಲಿ ಸಿಕ್ಕಿ
ನೆಂದಾನೆಂಬ ಆತಂಕ ಗೃಹಿಣಿಗೆ
ಮಳೆ ಬಂದರೆ ಇರುವುದೆಲ್ಲಿ?
ಹೊಟ್ಟೆಗೆ ಗತಿಯೇನು? ಎಂಬ
ಚಿಂತೆ ಬೀದಿವಾಸಿಗಳಿಗೆ
ಮಳೆಯಲಿ ನೆಂದಾದರೂ ಸರಿ
ಗೆಳೆಯ ಬರಲೆಂಬ ಕೋರಿಕೆ ಗೆಳತಿಗೆ

ಸೂರಿನ ನೀರನು ತುಂಬಿಡಲು
ಅಣಿಯಾಗುತ್ತಿರುವ ಮುದುಕಿ
ಸೋರುತ್ತಿರುವ ಕಿಂಡಿಗಳಿಗೆ ತೇಪೆ
ಹಾಕಲು ಯೋಚಿಸುತ್ತಿರುವ ಮುದುಕ
ಮಳೆಯೊಂದಿಗೆ ಪ್ರಣಯಕ್ಕಾಗಿ ಕಾಯುತ
ಹಾತೊರೆಯುತಿರುವ ವಿರಹಿ ಭೂಮಿ

ಸಿಡಿಲೊಡೆಯದಿರಲೆಂದು
ವಿಶಾಲ ತೊಟ್ಟಿಯಲಿ ಕಬ್ಬಿಣದ
ತುಂಡುಗಳನು ಇಡುತ್ತಿರುವ ಅಪ್ಪ
ಆದ ಲೆಕ್ಕಿಸದೆ ಮಳೆಯ ಹನಿಗಳಲಿ
ದೋಣಿ ಆಟ ಆಡಲು
ಯೋಚಿಸುತ್ತಿರುವ ಮಕ್ಕಳು

ಪರಕೀಯ ಪ್ರೇತ

● ತುರುವೇಕೆರೆ ಪ್ರಸಾದ್

ಪರದೇಶಕ್ಕೆ ಹೋಗಿ ಅಲ್ಲಿ ಅವರಿಂದ ನಮ್ಮವ ಎನಿಸಿಕೊಳ್ಳಲು ನಮಗೆ ಅಪಾರ ಹೆಮ್ಮೆ. ಹಾಗೆಯೇ ಅಲ್ಲಿಂದ ಬಂದು ಇಲ್ಲಿ ಪರಕೀಯರಾಗಿ ಉಳಿಯುವುದರಲ್ಲಿ ನಮಗೆ ಯಾವುದೇ ಸಂಕೋಚ, ನಾಚಿಕೆಯಿಲ್ಲ. ಆದರೆ ನಮ್ಮವರ ಮತ್ತು ನಮ್ಮವೆನಿಸಿದ ಅವಿನಾಭಾವ ಸಂಬಂಧಗಳ ನಡುವೆಯೇ ಪರಕೀಯರಾಗುವುದು ತೀರಾ ನಾಚಿಕೆಯ, ಮುಜುಗರದ ವಿಷಯವೇ ಸರಿ!

ಈ ಪರಕೀಯತೆಯ ಪ್ರೇತ ಬಾಲ್ಯದಲ್ಲೇ ಕಾಡಲಾರಂಭಿಸುತ್ತದೆ. ಅದೂ ಸ್ವಂತ ಮನೆಯಿಂದಲೇ ಇದು ಪ್ರಾರಂಭವಾಗುವುದು ತೀರಾ ವಿಪರ್ಯಾಸದ ವಿಷಯ. 'ಮಕ್ಕಳ ಸ್ಕೂಲ್ ಮನೇಲಲ್ವೇ....?' ಅಂತ ಮಕ್ಕಳನ್ನು ಖಾಲಿ ಭೂತಬಂಗಲೆಯಲ್ಲಿ ಹಿಡಂಬಿಯಂತಹ ಪಾಲಕಿಯ ವಶದಲ್ಲಿ ಕೂಡಿ ಹಾಕಿ ಅಪ್ಪ ಬಾರ್‌ಗೆ, ಅಮ್ಮ ಮಹಿಳಾಮಂಡಳಿಗೆ ಹೊರಡುವುದರಲ್ಲಿಂದಲೇ ಈ ಪ್ರೇತ ಮಕ್ಕಳ ಮುಗ್ಧ ಮನಸ್ಸನ್ನು ಹೊಕ್ಕಿಬಿಡುತ್ತದೆ. ಫ್ಯಾಮಿಲಿ ಪ್ಲಾನಿಂಗ್ ಪರಿಣಾಮ - ಮನೆಯಲ್ಲಿ ಆಡಲು ಮಕ್ಕಳಿಲ್ಲ. ಅಪ್ಪ, ಅಮ್ಮನ ಟೊಳ್ಳು ಪ್ರತಿಷ್ಠೆಯ ಗೆರದಾಟಿ ಪಕ್ಕದ ಮನೆಯ, ಹಿಂದಿನ ಮನೆಯ ಮಕ್ಕಳೊಂದಿಗೆ ಆಡುವಂತಿಲ್ಲ. ಅಥವಾ ಇದಕ್ಕೆ ತದ್ವಿರುದ್ಧದ ಅತಿರೇಕವೆಂಬಂತೆ ಮಕ್ಕಳಿರಲವ್ವ ಮನೆತುಂಬಾ... ಎಂಬಂತಾಗಿ ಪರಸ್ಪರ ಸೋದರರೇ Distant Relativeಗಳಾಗಿ ಪರಕೀಯ ಭಾವನೆ ಕಾಡುತ್ತದೆ. ಹೊಸ ಹೊಸ 'ಇಶ್ಯೂ'ಗಳಿಗೆ ಪ್ರೀತಿ, ವಾತ್ಸಲ್ಯದ ಕಂತು ದೊರಕಿ ಹಳೆಯವು ತಮಗೆ ಪ್ರೀತಿ ರಿನ್ಯೂ ಆಗದೆ ಪರಕೀಯ ಭಾವನೆಯಲ್ಲಿ ನರಳುತ್ತವೆ.

ಇನ್ನು ಶಾಲೆಗೆ ಬಂದರೆ ಅಲ್ಲೊಂದು ರೀತಿಯ ಧರ್ಮಸಂಕಟ. ಅದೂ ನನ್ನಂತಹ ಎಡಬಿಡಂಗಿ ವಿದ್ಯಾರ್ಥಿಗಳದಂತೂ ಹೇಳಿಕೊಳ್ಳಲಾಗದ ಗೋಳು. ಇತ್ತ ಮುಂದಿನ ಬೆಂಚಿನ ಕುಡುಮಿಗಳಾಗದೆ, ಅತ್ತ ಕಡೇ ಬೆಂಚಿನ ಡುಮುಕಿಗಳಾಗದೆ ತ್ರಿಶಂಕು ಸ್ವರ್ಗದಲ್ಲಿ ನರಳಬೇಕು. ಮಾಸ್ತರ ದೃಷ್ಟಿಯಲ್ಲಿ ಮುಂದಿನವರಂತೆ ಪುಸ್ತಕದ ಹುಳುವೂ ಆಗದೆ, ಹಿಂದಿನವರಂತೆ ಮಸ್ತಕದ ಹುಳು (ಹೇನು)ವೂ ಆಗದೆ ದ್ವಂದ್ವದಲ್ಲಿ ಪರಕೀಯವಾಗಿ ತೇಲಾಡಬೇಕಿತ್ತು. ಮುಂದಿನವರ ಯೋಗ್ಯತೆ, ಸಭ್ಯತೆ ತೀರಾ ಉರಿ ಉರಿ ಎನಿಸಿವರೆ ಹಿಂದಿನವರ ದಾರ್ಷ್ಟ್ಯತೆ, ಒರಟುತನ ತೀರಾ ಪಿರಿಪಿರಿ ಎನಿಸುತ್ತಿತ್ತು. ಕ್ರಿಕೆಟ್, ಕಬಡ್ಡಿ

ಎರಡಕ್ಕೂ ಅನರ್ಹರಾಗಿ 'ಐಸ್‌ಪೈಸ್' 'ಗುಲ್ಲೋರಿಯಾ' ಆಡುವಾಗ ಹುಡುಗಿಯರು ಸಹ ಅಪಾರ ಕರುಣೆಯಿಂದ ನಮ್ಮನ್ನು ನೋಡುವುದನ್ನು ಕಂಡು ಪರಕೀಯ ಭಾವನೆ ಹೆಡೆ ಎತ್ತಿ ನಿಲ್ಲುತ್ತಿತ್ತು.

ಕಾಲೇಜುಗಳಲ್ಲೂ ಅದರ ಮುಂದುವರಿದ ಕತೆ. ಆದರೆ ಈ ಹಂತದಲ್ಲಿ ನಮಗೆ ನಮ್ಮ ಸಮಾನ ಮನಸ್ಕ ಪರಕೀಯರನ್ನು ಹುಡುಕಿಕೊಳ್ಳುವ ವಿವೇಕ ಬೆಳೆದಿತ್ತು. ಆದರೂ ಇಂಗ್ಲೀಷ್ ವಿಷಯ ಬಂದಾಗ ಈ ಗುಂಪುಗಾರಿಕೆಯ ಮಧ್ಯದಲ್ಲೂ 'ಪರಕೀಯ' ಎನಿಸಿಬಿಡುತ್ತಿತ್ತು. ಕೇವಲ 'ಗೋಡಾ, ಕಮ್‌ಡಾ' ಇಂಗ್ಲೀಷ್ ಬಾರದು ಎಂಬ ಕಾರಣಕ್ಕೆ, ಸ್ಟಾರ್‌ವಾರ್‌ಸಿನಿಮಾ ಅರ್ಥವಾಗುವುದಿಲ್ಲ ಎಂಬ ಕಾರಣಕ್ಕೆ ಎಲ್ಲರಂತೆ ಬರ್ಮುಡಾ ಚಡ್ಡಿ ಹಾಕದೆ ಪ್ಯಾಂಟ್ ಹಾಕುತ್ತಿದ್ದೆವು ಎಂಬ ಕಾರಣಕ್ಕೆ ನಾವು ಹಳ್ಳಿಯ ಹುಡುಗರು 'ಏಕ್‌ಧಂ' ಪರಕೀಯರಾಗಿ ಬಿಡುತ್ತಿದ್ದೆವು. ಹಾಸ್ಟೆಲ್‌ಗಳಲ್ಲಿಂತೂ ಅಲ್ಲಿಯ ರೀತಿ, ರಿವಾಜು ತಿಳಿದುಕೊಳ್ಳುವ ತನಕ ಒಂದು ರೀತಿಯ ಪರಕೀಯತೆ. ಆ ನಂತರ ಅಂತಹ ಸಾಂವಿಧಾನಿಕ ರೀತಿ, ರಿವಾಜುಗಳನ್ನು ಹೇಗೆ ಅನುಕೂಲಸಿಂಧುವಾಗಿ ಬಳಸಿಕೊಳ್ಳಲಾಗುತ್ತದೆ ಎಂದು ತಿಳಿಯಲಾರದೆ ಪರಕೀಯತೆ! ಅಂತೂ ಉದ್ದಕ್ಕೂ ಪರಕೀಯ ಭಾವನೆ ಬೆನ್ನು ಬಿಟ್ಟದ್ದೇ ಅಲ್ಲ!

ಈ ಕಾಲೇಜು ಹಂತದಲ್ಲಿ ಯಾವುದೇ ನಿಘಂಟಿನ ಸಹಾಯವಿಲ್ಲದೆ ಕೆಲವೊಂದು ಅಪರಿಚಿತ ಶಬ್ದಗಳು ಬೆಚ್ಚನೆಯ ಭಾವನೆಗಳಾಗಿ ಅನುಭವಕ್ಕೆ ಬರುತ್ತವೆ. ಅವೇ ಹರೆಯ, ಪ್ರೀತಿ, ಪ್ರೇಮ.... ಇತ್ಯಾದಿ. ಇವುಗಳಿಗೆ ಅರ್ಥ ಹುಡುಕುತ್ತಾ ಅನುಭವಕ್ಕೆ ತೆರೆದುಕೊಳ್ಳುವ ಕಾತುರದಲ್ಲಿ ಎಷ್ಟೋ ಅನರ್ಥಗಳಾಗಿ ಪರಕೀಯರಾಗಿ ಉಳಿದುಬಿಡುತ್ತೇವೆ. ಅಂದದ ಚೆಂದದ ಚಿಟ್ಟೆ 'ಹುಡುಗಿಯರು ನಮ್ಮ ಕನಸಿನ ಸಾಮ್ರಾಜ್ಯದ ರಾಣಿಯರಾಗಿ ಮೆರೆಯುತ್ತಾರೆ. ನಮ್ಮ ಚಿಗುರೊಡೆದ ಯೌವ್ವನದ ಟಿಸಿಲುಗಳಲ್ಲಿ ಬಣ್ಣದ ಹಕ್ಕಿಗಳಾಗಿ ಕೂರುತ್ತಾರೆ. ಇಲ್ಲೇ ಹೀಗೇ ಗೂಡುಕಟ್ಟುತ್ತಾರೆಂಬ ಭ್ರಮೆಯಲ್ಲಿರುವಾಗಲೇ ಪರಕೀಯತೆಯ ಕೂಪಕ್ಕೆ ತಳ್ಳಿ ಪುರ್ರನೆ ಹಾರಿ ಹೋಗಿಬಿಡುತ್ತಾರೆ. ಹೀಗೆ ಕಣ್ಣೆವೆಯಲ್ಲಿ ಕಾಯ್ದಿಟ್ಟುಕೊಂಡಿದ್ದ ಹುಡುಗಿಯರೆಲ್ಲಾ ಒಬ್ಬೊಬ್ಬರಾಗಿ ನನಗೆ ಕೈಕೊಟ್ಟು ಬೇರಾರದೋ ಕೈ ಹಿಡಿದು ಓಡಾಡುವಾಗ ಪರಕೀಯನಾಗಿ ಒದ್ದಾಡಿದ್ದೇನೆ. ಈ ಪ್ರೀತಿಯನ್ನು ಕಳೆದುಕೊಳ್ಳುವ ಪರಿಯಂತೂ ಬದುಕಿನಲ್ಲಿ ಶೂನ್ಯವನ್ನೇ ಸೃಷ್ಟಿಸುತ್ತದೆ. 'ಎಲ್ಲಾ ಹುಡುಗಿಯರೂ ಇಷ್ಟೇ!' ಎಂಬ ಸಾರ್ವತ್ರಿಕ ಅಭಿಪ್ರಾಯಕ್ಕೆ ಬಂದು ಅವರೆಲ್ಲಾ ಒಟ್ಟಾಗಿ ಗೇಲಿ ಮಾಡಿ ನಗುತ್ತಿರುವಂತೆ ಭಾಸವಾದಾಗ ಪರಕೀಯತೆ ತನ್ನ ಅರ್ಥವ್ಯಾಪ್ತಿಯ ಗರಿಷ್ಠ ತೀವ್ರತೆಯಲ್ಲಿ ನನ್ನನ್ನು ದಹಿಸಿದ್ದಿದೆ.

ಎಷ್ಟೋ ಸಂದರ್ಭಗಳಲ್ಲಿ ನನ್ನ ಬಗ್ಗೆ ನನಗೇ ಬೇಸರ ಮೂಡಿದ್ದಿದೆ. ಹಾಯಲಾಗದ, ಒದೆಯಲಾಗದ, ಹಾಲೂ ಕೊಡದ ಎಂತಹ ಗೊಡ್ಡು ಜೀವಿಗಳು ನಾವು ಎನಿಸಿಬಿಟ್ಟಿದೆ.

ಬದಲಾವಣೆ ಜೀವಂತಿಕೆಯ ಮೂಲ ಸಂಕೇತ. ಅದನ್ನೇ ಧಿಕ್ಕರಿಸುವ ನಾವು ಎಲ್ಲೂ ಸಲ್ಲದವರೇ ಸರಿ! ಬದಲಾವಣೆಗಳಿಗೆ ಹೊಂದಿಕೊಳ್ಳಲಾಗದೆ ಪದೇ ಪದೇ ಕ್ಷಣಕ್ಷಣಕ್ಕೂ ಪರಕೀಯರಾಗುವ ಅವಸ್ಥೆಗೆ ಹಲವು ಬಾರಿ ಜಿಗುಪ್ಸೆಪಟ್ಟದ್ದಿದೆ. ಕನಿಷ್ಠ ಜೀರು ಕುಡಿಯಲಾಗದ, ಆಮ್ಲೆಟ್ ತಿನ್ನಲಾಗದ ಮಡಿವಂತಿಕೆ ಅಥವಾ ಶಿಷ್ಟಾಚಾರ, ಜುಟ್ಟು ಕತ್ತರಿಸಲಾಗದ ಸಂಪ್ರದಾಯ, ಹುಡುಗಿಯರ ಹಿಂದೆ ಸುತ್ತಲಾಗದ ನೈತಿಕ ಚೌಕಟ್ಟು, ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಿವೆ. ನಾನು ಕೃಷಿ ವಿಶ್ವವಿದ್ಯಾಲಯದಲ್ಲಿದ್ದಾಗ ಒಬ್ಬಳು ಹುಡುಗಿ ನನ್ನನ್ನು ತುಂಬಾ ಸೆಳೆದಿದ್ದಳು. ದಿನಾ ಕ್ಯಾಂಪಸ್‌ಗೆ ಬಂದಾಗ ಬಾಯಿತುಂಬಾ ಅಕ್ಕರೆಯ ಮಾತಾಡುತ್ತಿದ್ದಳು. ನಾನೆಂದರೆ ಅವಳಿಗೆ ಅಚ್ಚುಮೆಚ್ಚು! ಅವಳು ಕೇವಲ ನನ್ನೊಡನೆ ಮಾತ್ರ ಈ ಪರಿಯ ಸಲುಗೆಯಿಂದ ವರ್ತಿಸುತ್ತಾಳೆ ಎಂದು ಒಳಗೊಳಗೇ ಖುಷಿ ಪಡುತ್ತಿದ್ದೆ. ಒಂದಿನ ಅಕಸ್ಮಾತ್ ಸಿಟಿಯಲ್ಲಿ ಯಾವುದೋ ಐಸ್‌ಕ್ರೀಂ ಪಾರಲರ್‌ನಲ್ಲಿ ಅವಳು ಕಣ್ಣಿಗೆ ಬಿದ್ದಳು. ಅವಳೊಂದಿಗೆ ಇನ್ನಿಬ್ಬರು ಹುಡುಗಿಯರು, ನಾಲ್ಕಾರು ಹುಡುಗರು. ಅವರೆಲ್ಲಾ ಐಸ್‌ಕ್ರೀಂ ತಿನ್ನುತ್ತಿದ್ದರು. ವಿಧವಿಧದ ಫ್ಲೇವರ್‌ಗಳ ಐಸ್‌ಕ್ರೀಂ ಕೋನ್‌ಗಳನ್ನು ಬದಲಾಯಿಸಿಕೊಂಡು ಸರದಿಯಂತೆ ನೆಕ್ಕುತ್ತಾ ಖುಷಿಪಡುತ್ತಿದ್ದರು. ಒಬ್ಬ ಕುಡಿದ ಬಿಟ್ಟ ಎಂಜಲು ಜ್ಯೂಸನ್ನೇ ನನ್ನ ಕಾಲೇಜು ಗೆಳತಿಯೂ ಕುಡಿದಳು. ಇದು ಮುಂದುವರಿದ ನಾಗರಿಕತೆಯೋ, ಹಿಂದೆಬಿದ್ದ ಸಂಸ್ಕೃತಿಯೋ ಅಥವಾ ಸೋಶಿಯಲ್ ಕ್ರಾಂತಿಯೋ ತಿಳಿಯದೆ ಒದ್ದಾಡಿದೆ. ಮತ್ತೆ ಯಾವತ್ತಾದರೂ ನನಗೂ ಈ ರೀತಿಯ ಎಂಜಲು ಐಸ್‌ಕ್ರೀಂ ನೆಕ್ಕಿಸಿಯಾಳು ಎಂದು ಮೆಲ್ಲಗೆ ಅವಳಿಂದ ಜಾರಿಕೊಂಡೆ. ಹೀಗೆ ಯಾವುದಕ್ಕೂ ಹೊಂದಿಕೊಳ್ಳಲಾಗದೆ ಮತ್ತೆ ಮತ್ತೆ ಪರಕೀಯ ಭಾವನೆಯನ್ನು ದಟ್ಟವಾಗಿಸಿಕೊಳ್ಳುತ್ತಾ ಹೋದದ್ದು ಈಗ ನೆನಪಾಗುತ್ತದೆ.

ಹಲವಾರು ವರುಷ ಬೆಂಗಳೂರಿನಲ್ಲಿದ್ದಾಗಲಂತೂ ಈ ಪರಕೀಯ ಭಾವನೆಯ ನೆರಳಿನಿಂದ ಯಾವಾಗ ಓಡಿ ಹೋಗುತ್ತೇನೋ ಎಂದು ಕಾತರಿಸುತ್ತಿದ್ದೆ. ನಾಗರಿಕತೆಯ ನಾಗಾಲೋಟದ ಬೆನ್ನು ಹತ್ತಿದವರ ಮಧ್ಯೆ ಅಪರಿಚಿತನಾಗಿಯೇ ಉಳಿದಿದ್ದೆ. ಭಾಷೆ ಸಂಸ್ಕೃತಿ, ರೀತಿ, ರಿವಾಜು, ಧರ್ಮ-ಜಾತಿಗಳ ಸಂಕೀರ್ಣತೆಗಳು ನನ್ನನ್ನು ತಮ್ಮೊಳಕ್ಕೆ ಸೆಳೆದುಕೊಳ್ಳಲೇ ಇಲ್ಲ. ಕೇವಲ ಸ್ವಾರ್ಥವೊಂದೇ ಸಾಧನೆಯಾಗುಳ್ಳವರು ಯಾವುದೇ ಪರಕೀಯ ಭಾವನೆಗಳಿಗೆ ಒಳಗಾಗದೆ ಆರಾಮಾಗಿ ಬದುಕುವುದು ಕಂಡು ಅಚ್ಚರಿ ಎನಿಸುತ್ತಿತ್ತು. ವೃತ್ತಿಯಿಂದ ಪ್ರವೃತ್ತಿಯವರೆಗೆ ನಾನೇಕೆ ಅವರಂತಾಗುವುದಿಲ್ಲ? ಲಂಚ ಹೊಡೆಯುವುದಾಗಲೀ, ಲಂಚ್‌ಬಾಕ್ಸ್ ಶೇರ್ ಮಾಡುವುದಾಗಲೀ ಏಕೆ ನನ್ನಿಂದ ಸಾಧ್ಯವಾಗಬಾರದು? ಇವುಗಳ ಹೊರತಾಗಿ ನಾನು ಸಾಧಿಸಬೇಕೆಂದಿರುವುದೇನು? ಹರಿಯುವ ನೀರಿನೊಂದಿಗೆ ಬೆರೆತು ಗಮ್ಯ ಸೇರುವ ಸಾಧಾರಣ ಪ್ರವೃತ್ತಿ ಏಕೆ ನನ್ನಲ್ಲಿಲ್ಲ? ಸಿಕ್ಕಿದ್ದನ್ನು ತಟ್ಟನೆ ಒಪ್ಪಿಕೊಂಡು, ಅಪ್ಪಿಕೊಂಡು ಖುಷಿಪಡುವ ಜಾಯಮಾನವಿದ್ದಿದ್ದರೆ ಎಂತಹ ಸೊಗಸಿತ್ತು? ಎಂದೆಲ್ಲಾ ಯೋಚಿಸುತ್ತಿದ್ದೆ. ಆದರೂ ಆಗಾಗ್ಗೆ ವಿಜೃಂಭಿಸುತ್ತಿದ್ದ

ಹೊಂದಾಣಿಕೆಯ ವಿಕಾರ ಸ್ವರೂಪಗಳು, ಬದಲಾವಣೆಯ ಮೃಗೀಯ ವರ್ತನೆಗಳು ನಾನು ಪರಕೀಯನಾದದ್ದೇ ಒಳ್ಳೆಯದಾಯಿತು ಎಂಬ ಸಮಾಧಾನ ಮೂಡಿಸಿದ್ದಂತೂ ದಿಟ!

ನಾನು ನನ್ನ ಸ್ವಂತ ಊರಿಗೆ ಹಿಂದಿರುಗಿದಾಗಲಂತೂ ಬಸ್‌ಸ್ಟಾಂಡ್‌ನಿಂದ ಯಾವ ದಿಕ್ಕಿಗೆ ಹೋದರೆ ನಮ್ಮ ಮನೆ ಸಿಕ್ಕೀತು ಎಂಬ ಗುರುತು ಸಿಗದಷ್ಟೂ ಊರು ಬದಲಾಗಿ ಹೋಗಿತ್ತು. ನೆನಪನ್ನು ಕೆದಕುವ ನಾಡ ಹೆಂಚಿನ ಮನೆಗಳಾಗಲೀ, ಆ ಮನೆಗಳಲ್ಲಿ ಕೆಮ್ಮುತ್ತಾ, ಕ್ಯಾಕರಿಸುತ್ತಾ ಕಂಡಕಂಡವರ 'ಗತವೈಭವ' ಸಾರುವ ಮುದುಕರಾಗಲೀ ಕಾಣಲಿಲ್ಲ. ಎಲ್ಲ ಕಂತೆ ಒಗೆದು ಹೋಗಿದ್ದರು. ಉಳ್ಳಿ ಚಿಕ್ಕನ ಮಂಟಪವಿಲ್ಲ. ಪುಟ್ಟಸಾಲಮ್ಮನ ಕಲ್ಯಾಣಿ ಇಲ್ಲ, ಊರಿನ ಪಾರ್ಕ್ ಇಲ್ಲ, ರಸ್ತೆ ಬದಿಯ ನಂಜುಂಡಪ್ಪನ ತೋಟ ಇಲ್ಲ, ಮನೆ ಎದುರಿನ ಕೆರೆ, ಕುಂಟೆಯಿಲ್ಲ, 'ದಂದೋಟಿ'ನ ಗುಂಡಪ್ಪನಿಲ್ಲ, ಅವನ ಗಜಾನನ ಹೋಟೆಲಿಲ್ಲ. ಸಾಲು ಮರಗಳಿಲ್ಲ, ಆದರಾಚೆಯ ವಿಶಾಲ ಬಯಲುಗಳಿಲ್ಲ. ಎಲ್ಲಾ ಕಾಂಕ್ರೀಟ್‌ಮಯ. ಇಂತಹ ಭೌತಿಕ ಬದಲಾವಣೆಗಳನ್ನು ಅನಿವಾರ್ಯವಾಗಿ ಯಾವುದಕ್ಕೂ ಒಪ್ಪಲೇಬೇಕು. ಆದರೆ ಈ ಮಣ್ಣಿನಲ್ಲಿ ಹುಟ್ಟಿ, ಬೆಳೆದು, ನಕ್ಕು ನಲಿದು ಇಲ್ಲಿನ ಪ್ರತಿಯೊಂದು ಕಣದಲ್ಲಿಯೂ ಭಾವನೆಗಳ ಮೊಳಕೆ ಕಟ್ಟಿಟ್ಟದ್ದ ಈ ಊರಿನಲ್ಲಿ 'ಇವನು ನಮ್ಮವನು' ಎಂದು ಗುರುತಿಸುವ ಒಂದು ಪ್ರಾಣಿಯಾದರೂ ಬೇಡವೆ? ನಮ್ಮವರೊಂದಿಗೆ ಪರಕೀಯನಾಗುವುದರ ವ್ಯಥೆ ಎಂದರೆ ಇದೇನೇ! ಪ್ರಾಣಿ ಎಂದಾಗ ಈ ನಾಯಿಗಳ ಮೇಲೆ ಎಲ್ಲಿಲ್ಲದ ಕೋಪ ಉಕ್ಕುತ್ತದೆ. ಮುಖದ ಮೇಲೆ ಎರಡು ಬಾರಿಸಬೇಕು ಎನಿಸುತ್ತದೆ. ನಮ್ಮ ಮನೆಯ ದಾರಿಗುಂಟ ನಡೆಯುತ್ತಾ ಬಂದರೆ ಇವು ಮೇಲೆ ಬೀಳುವುದೇ? ಎಂತಹ ಅವಮಾನ! ಇವರ ತಾತಂದಿರು, ಮುತ್ತಾತಂದಿರನ್ನೂ ನಾನು ಸಾಕಿ, ಸಲಹಿದ ಕೃತಜ್ಞತೆ ಇವಕ್ಕೆಲ್ಲಿಂದ ಬರಬೇಕು? ಇವು ಸಾಲದೆಂಬಂತೆ ಮನೆ ಮನೆಯ ಹೈಬ್ರಿಡ್ ನಾಯಿಗಳೂ ಬೊಬ್ಬೆ ಹೊಡೆಯುವುದೆ? ಯಾವುದೋ ನಿರಾಶ್ರಿತನನ್ನು, ಕಳ್ಳನನ್ನು ನೋಡಿದಂತೆ ಎಲ್ಲಾ ಹೊರಗೆ ಬಂದು ನೋಡುವುದೆ? ಮನೆಯಲ್ಲಿರುವ ನಾಯಿಗಳದೇನೂ ತಪ್ಪಲ್ಲ. ಈ ಮನೆಗಳ ಹೊರಗೇ ಮೂರು ಹೊತ್ತೂ ನಾಯಿಯಂತೆ ಅಲೆಯುವವರು, ವರುಷಗಳಿಂದ ಇಲ್ಲೇ ಗೂಟ ಹೊಡೆದುಕೊಂಡಿರುವವರಿಗಾದರೂ ನನ್ನ ಪರಿಚಯ ಸಿಗಬಾರದೆ? ನನ್ನ ಬೀದಿಗೆ ವಲಸೆ ಬಂದವರಿಗೆ ನನ್ನನ್ನು ಮಾತಾಡಿಸುವ, ಪರಿಚಯ ಮಾಡಿಕೊಳ್ಳುವ ಸೌಜನ್ಯವಾದರೂ ಬೇಡವೆ? ಇವತ್ತಿಗೂ ಇವರ ದುರಭಿಮಾನ, ಅಹಮಿಕೆ ಕಿಂಚಿತ್ತೂ ಕಮ್ಮಿಯಾಗಿಲ್ಲ. ನೆರೆ-ಹೊರೆ, ವಿಶ್ವಾಸ, ಬಾಂಧವ್ಯ ಯಾವುದೂ ಬೇಕಿಲ್ಲ. 'ತಾವುಂಟು ಮೂರು ಲೋಕವುಂಟು' ಎಂಬ ಪಕ್ಕಾ ವ್ಯವಹಾರಸ್ಥರು! ಇವುರುಗಳಿಗಿಂತ ನಮ್ಮ ಹಳೇ ನಾಯಿಗಳೇ ವಾಸಿ. ಹತ್ತಾರು ವರುಷ ಯಾವುದೇ ಮುನಿಸಿಪಾಲಿಟಿಯ ಕಾಟವಿಲ್ಲದೆ ಬದುಕುತ್ತಿದ್ದ ಅವು ನಿಯತ್ತಾಗಿ ಊರಿಗೆ ಬಂದ ತಕ್ಷಣ ನನ್ನ ಗುರುತು ಹಿಡಿದು ಮೂಸುತ್ತಾ, ನೆಕ್ಕುತ್ತಾ, ತಮ್ಮವನು ಎಂಬ ಅಭಿಮಾನದಿಂದ ಬಾಲ ಎತ್ತಿ ಸಲಾಮು ಹೊಡೆದು ಮನೆಯ ತನಕ ಬಿಡುತ್ತಿದ್ದವು.

ಮುಂಬಯಿ, ಬೆಂಗಳೂರಿನಲ್ಲಿ ಪರಕೀಯ ಎನಿಸಿಕೊಳ್ಳುವುದಕ್ಕೂ, ಸ್ವಂತ ಊರಲ್ಲಿ ಅಂತಹ ಭಾವನೆಯಿಂದ ನರಳುವುದಕ್ಕೂ ತುಂಬಾ ವ್ಯತ್ಯಾಸವಿದೆ. ಅಲ್ಲಿ ನಾವು ಅದನ್ನು ಬೇಶರತ್ತಾಗಿ ಒಪ್ಪಿಕೊಂಡು ಬಿಡುತ್ತೇವೆ. ಆದರೆ ಇಲ್ಲಿಯ ವಿಷಯ ಹಾಗಲ್ಲ. ಇದೊಂದು ರೀತಿ ಬೇವರ್ಸಿ ಬದುಕು. ಗೆದ್ದಲು ಕಟ್ಟುವ ಹುತ್ತದಲ್ಲಿ ಹಾವುಗಳು ಸೇರಿಕೊಂಡಂತೆ! ನಮ್ಮ ನೆನಪುಗಳ ಮೇಲೆ, ನಮ್ಮ ಬದುಕಿನ ಪಳೆಯುಳಿಕೆಗಳ ಮೇಲೆ, ನಮ್ಮ ಅಭಿಜ್ಞಾನಗಳ ಮೇಲೆ ಇವರುಗಳು ಆಕ್ರಮಣ ಮಾಡುತ್ತಾರೆ. 'ನನ್ನದು' ಎನಿಸಿಕೊಂಡಿದ್ದ ಎಲ್ಲವುಗಳನ್ನೂ ನನ್ನಿಂದಾಚೆ ಸರಿಸುವ ಪ್ರಯತ್ನ ಮಾಡುತ್ತಾರೆ. ಮತ್ತೆ ಮತ್ತೆ ಪರಕೀಯ ಭಾವನೆಯಿಂದ ನರಳುವಂತೆ ಮಾಡುತ್ತಾರೆ. ನನ್ನನ್ನೂ ಒಪ್ಪಿಸಿಬಿಡುತ್ತಾರೆ.

ಇಷ್ಟಕ್ಕೇ ಇದು ನಿಂತರೆ ಪರವಾಗಿಲ್ಲ. ಆದರೆ ಈ 'ಪರಕೀಯ ಪ್ರೇತ' ನಮ್ಮ ಮನೆ ಬಾಗಿಲಿಗೂ ಬರುತ್ತದೆ. ಊರೆಲ್ಲಾ ಬೀಸುವ ಬದಲಾವಣೆಯ ಗಾಳಿ ನಮ್ಮ ಮನೆ ಕಿಟಕಿ, ಬಾಗಿಲಲ್ಲಿ ತೂರದಿದ್ದರೆ ಹೇಗೆ? ಅಮ್ಮ ಹೇಳುತ್ತಾಳೆ : ''ಮಗೂ, ನೀನು ಮೊದಲಿನಂತಿಲ್ಲ ಕಣೋ; ತುಂಬಾ ಬದಲಾಗಿದ್ದೀ''. ಹೆಂಡತಿಯೂ ಹಾಗೇ ಹೇಳಲಾರಂಭಿಸುತ್ತಾಳೆ : ''ರೀ! ನೀವು ಮೊದಲಿನಂತಿಲ್ಲ, ತುಂಬಾ ಬದಲಾಗಿದ್ದೀರಿ''. ಯಾವುದೇ ಬದಲಾವಣೆಗೆ ಹೊಂದಿಕೊಳ್ಳದೆ ಎಡಬಿಡಂಗಿಯಾಗದ್ದ ನಾನೆ ಬದಲಾಗಿದ್ದೇನೆಂದರೆ ಏನನ್ನುವುದು? ಅವರವರಿಗೆ ಮೀಸಲಾದ, ಅವರವರ ನಿರೀಕ್ಷೆಯ ಪ್ರೀತಿಯ ಅಭಿವ್ಯಕ್ತಿಯಲ್ಲಿನ ಮುಕ್ತತೆ ಮಾಯವಾಗಿರುವುದೇ ಈ ಒಂದು ಬದಲಾವಣೆಯಾಗಿರಬಹುದು. ಹಾಗೆಂದು ಅದನ್ನು ಯಾರಲ್ಲಿ ಹೇಳಿಕೊಳ್ಳುವುದು? ಮತ್ತೆ ಈ ಎಲ್ಲರಿಂದ ಪರಕೀಯನೆನಿಸಿ ಮಾವಿನ ವಾಟೆಯಾಗುವುದೇ ಗತಿ ತಾನೆ?

ಸದ್ಯ! ಒಂದು ರೀತಿಯಲ್ಲಿ ನಾನು ಭಾಗ್ಯವಂತ. ನಿವೃತ್ತನಾದ ಮೇಲೆ ಮನೆಯಲ್ಲಿ ದಿಢೀರನೆ ಪರಕೀಯನಾಗಿ ಆ ಮುದಿ ವಯಸ್ಸಲ್ಲಿ ಕೊರಗಬೇಕಾದ್ದಿಲ್ಲ. ಏಕೆಂದರೆ ನನಗೆ ನಿವೃತ್ತಿಯಾಗುವ ವೃತ್ತಿಯೇ ಇಲ್ಲ. ಪುಸ್ತಕ ಪ್ರಕಾಶಕ ಎಂದ ಮೇಲೆ ಸಾಯುವವರೆಗೂ ಮಾರುವ ವೃತ್ತಿಯೇ! ಮಕ್ಕಳಿಗೆ ಉದ್ಯೋಗ ಸಿಗದಿದ್ದರೆ ಅವರೂ ನನ್ನ (ಖರ್ಚಾಗದೆ ಉಳಿದ) ಪುಸ್ತಕಗಳನ್ನು ಮಾರಬಹುದು. ಅಲ್ಲದೆ ಈಗಾಗಲೇ ಹಂತ ಹಂತಗಳಲ್ಲಿ ಪರಕೀಯತೆಯ ಪ್ರಖರತೆ ಅನುಭವಕ್ಕೆ ಬಂದಿರುವುದರಿಂದ ಅದು ಯಾವುದೇ ಹಂತದಲ್ಲೂ ಸಹ್ಯವೇ ಆದೀತು! ಒಂದು ವೇಳೆ ಹಾಗಾಗದಿದ್ದರೂ ನನ್ನ ಪುಸ್ತಕಗಳಂತೂ ನನ್ನನ್ನು ತೊರೆದು ಪರಕೀಯನನ್ನಾಗಿ ಮಾಡುವುದಿಲ್ಲ ಎಂಬ ಸ್ಪಷ್ಟ ಭರವಸೆ ನನಗಿದೆ.

●

ಬದಲಾಗಿ ಬಿಟ್ಟಿದ್ದಾನೆ ಸೂರ್ಯ

● ಮಲ್ಲಿಕಾರ್ಜುನಗೌಡ ತೂಲಹಳ್ಳಿ

- ೧ -

ಎದ್ದವನೆ ಕಿಟಕಿಗೆ ಮುಖ ಮಾಡಿದಾಗ
ರಕ್ತಮುಖದ ಸೂರ್ಯ
ಮಾಂಸದ ತುಂಡುಗಳಂತೆ
ಆಗಸದ ತುಂಬೆಲ್ಲಾ ಹರಿದ ಮೋಡಗಳು,
ಮೆತ್ತಗೆ ಹರಡಿದ ಎಳೆಗರುಕೆಯ
ಕಣ್ಣುಗಳಲ್ಲೂ ನೆತ್ತರ ಹನಿಗಳು.

ಗಸ್ತು ಹೊಡೆಯುತಿದೆ ರಣಹದ್ದು
ಕಿವಿಪೂರೆ ಸಿಡಿದು ಹೋಗುವ ಎದೆ ಸದ್ದು.

ನಿನ್ನೆ ರಾತ್ರಿ ಬಿದ್ದ ಮಳೆಗೆ
ಬಯಲ ಗುಂಡಿಗಳಲಿ ನಿಂತ ನೀರು ರಕ್ತ.
ಹಿಂದೆ ಹೀಗಿರುತ್ತಿರಲಿಲ್ಲ, ಬಂಗಾರದ ರಸ.

ಎಲ್ಲೋ ಮಾಡುವ ನಮಾಜು
ಉಂಡು ಆರಾಮಾಗಿರುವವರ ಭಜನೆ ಹರಿಕಥೆ
ಇಲ್ಲಿ, ದುಡಿದರೂ ಅರೆಹೊಟ್ಟೆ ತುಂಬದ ಕ್ಯಾಂಪಿಗೂ
ಈಗೀಗ ಝುಂಡಾ ಹೊತ್ತು
ಮೆತ್ತಗೆ ಕಳ್ಳಬೆಕ್ಕಿನಂತೆ ನುಸುಳಿ
ಚಕಮಕಿಯಾಟವಾಡಿ ಕಿಚ್ಚೊತ್ತಿಸಿವೆ.
ಮರಳ ದಿಣ್ಣೆಯಲಿ ಚಂದದ ಮನೆಕಟ್ಟಿ
ಆಟವಾಡುತ್ತಿದ್ದ ಗುರುಸಿದ್ದ ಕಾಸೀಮನ ಕಣ್ಣಲ್ಲಿ
ಗುಂಪುಕಟ್ಟಿ ಗುಸುಗುಡುವ ಕಿಡಿಗೇಡಿಗಳ ಮಾತು
ಮನೆ ಬಿದ್ದೀತೆಂಬ ಭಯ ಹುಟ್ಟಿಸಿವೆ.

- ೨ -

ಮುಗಿದ ಮಹಾಭಾರತ ರಾಮಾಯಣಕ್ಕೀಗ ರಂಗು.
ಒಳಿತು ಕೆಡುಕಿನ ಮನುಜ ಸ್ಥಾಯಿಗೆ ಜಾತಿಬಣ್ಣ.

ಕುರ್ಚಿಗೆ ಥಕಧಿಮಿ ಕುಣಿಯುವರೋ ಅಣ್ಣ
ಬೇಕಾದರೆ ಶೀಟಿಹೊಡೆಯಿರಿ, ಗೇಲಿಮಾಡಿರಿ
ಅದಕ್ಕೂ ಹುರುಪೆದ್ದು ಉಡುಪು ಕಳಚುವ ಖಯಾಲಿ.

ಇಲ್ಲಿ ನೋಡಿ ಸ್ವಾಮಿ
ಓಣಿ ಓಣಿಗಳಲಿ
ಉಡಿತುಂಬಿಸುವವರ ಮೆರವಣಿಗೆ
ಕೈಬೀಸುವವರ ಸರ್ಕಸ್ಸು
ಒಟ್ಟಿಗೆ ಬ್ಯಾಡ್ಜ್ ಬ್ಯಾನರ್‌ಗಳ
ಬಣ್ಣದ ವಾಸನೆಗೆ ಖುಷಿಪಡುವ ಮನಸ್ಸು.

ಓಟಿಗೆ ಹೊರಟಿದ್ದಾವೆ
ಇದ್ದು ಹೋಗುವ ಬಿದ್ದು ಹೋಗುವ
ಮೋಟಾರು ಕಾರು ಪಯಣ.
ನಾನು ನನ್ನದೆನ್ನದ ಬಾಂಧವ್ಯಕ್ಕೆ
ಮೂರು ದಿನ ಕಂಕಣ.

-೩-

ಅರೆರೆ! ಬಂತೋ ಜನಗಳ ಸರ್ಕಾರ
ಬಯಲು ಜೈಲು, ಬಾಯಿ ಬೀಗ
ದಿನಾಲೂ ಲಾಠಿ ದಂಡಗಳ ವ್ಯಾಪಾರ.

ಉರುಳುತ್ತಿದೆ ನೋಡಿರೀಗ ಪ್ರಗತಿಯ ಚಕ್ರ
ತುಳಸಿ ವೃಂದಾವನದ ಸುತ್ತ
ಬರ್‍ರ್ರೋ ಬುರ್‍ರ್ರೋ ಪುರ್‍ರ್ರೋ ಪುರ್‍ರ್ರೋ
ಹಾರ್‍ನೋ ಹಾರ್‍ನು
ಗದ್ದೆಯ ಒಳಗೆ ಸೈರನ್ನು ಕೆಳಗೆ
ನಡುಬಾಗಿಸಿ ದುಡಿವ ಹೊಟ್ಟೆಯಲಿ
ಗಾಳಿ ಹೊಕ್ಕು ಕಚಗುಳಿ ಇಟ್ಟ ಹಾಗೆ.

ಮೈಲುದ್ದ ಮೆರವಣಿಗೆ ಮುಂದೆ ಸುತ್ತಿ ತಲೆಗೆ ಮಕಮಲ್ಲು ಪೇಟ
ತಿಂದುಂಡು ದೇಶದ ದಿನಸಿ ಊಟ ನಡುಗುವ ಕಾಲಲ್ಲೂ ಎದೆಸೆಟೆಸಿ
ನಡೆಯುತ್ತಿದ್ದಾನೊಬ್ಬ ಮುದುಕ.
ಅವನ ಕಣ್ಣಿಗೆ ಶಿಲುಬೆ ಕಂಡರೆ ಆಗುವುದಿಲ್ಲ
ನಮಾಜು ಕೇಳುವುದಿಲ್ಲ
ಬೊಚ್ಚು ಬಾಯಲ್ಲೇ ಒಸಡು ಕಡಿವ ತವಕ.

ಕೈ ಬೀಸುತ್ತಾ ಕಾಲೊಸೆಯುತ್ತಾ
ಆ ಮುದುಕ
ಮೂಡಣ ಗುಡ್ಡವನೇರಿ
ಪುಟ್ಟಗಾಜಿನ ಪೆಟ್ಟಿಗೆಯಲಿ ನಿಂತು
ದಂಡ-ದಂಡಿಗೆ ದಿಟ್ಟ ಮಾತುಗಳನ್ನಾಡುವಾಗ
ಮುಂಜಾನೆಯಂತೆಯೇ ಇದ್ದ
ರಕ್ತವರ್ಣದ ಸೂರ್ಯ
ಗಾಜಿನಲ್ಲಿ ಪ್ರತಿಫಲಿಸಿ
ಅವನ ಹಣೆಗೆ ತಿಲಕವಾಗಿದ್ದಾನೆ.

ನಿಜ ಹೇಳಬೇಕೆಂದರೆ
ಚಿಕ್ಕವನಿದ್ದಾಗ
ನನ್ನಪ್ಪ ತೋರಿಸುತ್ತಿದ್ದ ಸೂರ್ಯ
ಹೀಗಿರಲಿಲ್ಲ.
ಚೆನ್ನ ಚೆಂಡಾಗಿ ಖುಷಿ ಕೊಡುತ್ತಿದ್ದವನು
ಗ್ರಹಣವಿಡಿದಾಗಿನಿಂದ ಬದಲಾಗಿ ಬಿಟ್ಟಿದ್ದಾನೆ!
ಭಯಗೊಳಿಸುತ್ತಾನೆ
ಆಗಸದ ತುಂಬೆಲ್ಲಾ ಕಾವಿ ಧ್ವಜಗಳ ಹರಡಿ.

ಈ ಸ್ಥಿತಿ ಬರುತ್ತಿರಲಿಲ್ಲ

ಮಾಧವಿ ಭಂಡಾರಿ, ಕೆರೆಕೋಣ

ಈ ಸ್ಥಿತಿ ಬರುತ್ತಿರಲಿಲ್ಲ
ದ್ರೌಪದಿ ನಿನಗೆ.

ಹೆಸರಿಗೈವರು ಗಂಡಂದಿರು
ಮನ ಕುಣಿಸಿದವರೆಷ್ಟು?
ತನು ತಣಿಸಿದವರೆಷ್ಟು?

ಸಿಗುವ ಒಂದೊಂದು ರಾತ್ರಿಯ
ಕ್ಷಣವೂ ಸೋರದಂತ

ತೊಡೆಯೇರಿ ಬರುವ ಒಬ್ಬೊಬ್ಬರ ಸವಾರಿ
ಕಳೆದ ರಾತ್ರಿಯ ಜೊಂಪು
ಹರಿಯುವದರೊಳಗೆ ಹೊಸ ರಾತ್ರಿಯ
ಸಿದ್ಧತೆಯ ಅನಿವಾರ್ಯತೆಯ

ಈ ಸ್ಥಿತಿ ಬರುತ್ತಿರಲಿಲ್ಲ
ದ್ರೌಪದಿ ನಿನಗೆ.

ಬಿಗಿತೋಳ ಬಂಧನದಿ
ಉಸಿರ ಕಟ್ಟಿಸಿ ಬೆವರಿಳಿಸಿ
ಅಗ್ನಿ ಕನ್ನೆಯ ಕಿಚ್ಚಡಗಿಸಿದ
ಅರ್ಜುನನ ಪಾಳಿಗಾಗಿ
ಕಾದು ಚಡಪಡಿಸಿದ್ದು
ಪಕ್ಕದಲ್ಲಿಯ ನರಳುವಿಕೆಗೆ
ಹಾಸಿಗೆಯಲ್ಲೆ ನಲುಗಿದ್ದು ನಿನಗಲ್ಲದೆ
ಸುಭದ್ರೆಯ ಹೊತ್ತು ತಂದ ಅರ್ಜುನನಿಗೆ ತಿಳಿಯದೇ ಇರುವ

ಈ ಸ್ಥಿತಿ ಬರುತ್ತಿರಲಿಲ್ಲ
ದ್ರೌಪದಿ ನಿನಗೆ.

ಕತ್ತಲಲ್ಲಿ ಬೆತ್ತಲಾಗಿ
ಚಿತ್ತೆ ಒಲೈಸಿದ ಸತಿಯ
ಬೆಳಕಲ್ಲೆ ಬತ್ತಲಾಗಿಸುವಾಗಲೂ
ತುಟಿ ಬಿಚ್ಚದೆ ಕುಳಿತ
ಪತಿಯರ ಸಾಲುಸಾಲಿನೆದುರು ನಿಂತು
ಮಾನ ಮುಚ್ಚಲು
ಸೀರೆ ಕದ್ದವನಲ್ಲೆ ಸೀರೆ ಯಾಚಿಸುವ

ಈ ಸ್ಥಿತಿ ಬರುತ್ತಿರಲಿಲ್ಲ
ದ್ರೌಪದಿ ನಿನಗೆ.

ರಕ್ತ ಮಾಂಸವ ಹಂಚಿ
ಬಸಿವ ಮೊಲೆಯೊತ್ತಿ ಬೆಳೆಸಿದ
ಎಳೆಯ ಮಕ್ಕಳ
ಎದುರಲ್ಲೆ ಚೆಲ್ಲಿದ ರಕ್ತವ ನೋಡಿ
ನೀನೊಬ್ಬಳೆ ರೋದಿಸಬೇಕಾದ

ಈ ಸ್ಥಿತಿ ಬರುತ್ತಿರಲಿಲ್ಲ
ದ್ರೌಪದಿ ನಿನಗೆ.

ಕಣ್ಣರಸಾಯನಕ್ಕೆ
ತುಪ್ಪದ ಸವಿಯಾಗಬಹುದಿತ್ತು
ದಾನಶೂರನ
ಹೊನ್ನಾಡನಾಳಬಹುದಿತ್ತು
ಅಂದು ಸ್ವಯಂವರದಿ
ಬೇರ್ಬಿಟ್ಟ ಭಾವಕ್ಕೆ ಒಳಗೊಳಗೆ ಕುಸಿಯದೆ
ವರ್ಣ ವರ್ಣದ ಪೊರೆ ಕಳಚಿದ್ದರೆ
ಕಿತ್ತು ಕಳೆಯಬಹುದಿತ್ತು
ಸೂತ ಪುತ್ರನ ಸೂತಕವ
ದ್ರೌಪದಿ ನೀನು
ಸೂತ ಪುತ್ರನ ಸೂತಕವ
ಕಿತ್ತು ಕಳೆಯಬಹುದಿತ್ತು.

●

ಮಲೆನಾಡಲ್ಲಿ ಮಳೆ ಬಿದ್ದರೆ....

● ವಿಜಯಕಾಂತ ಪಾಟೀಲ

ಮಲೆನಾಡಲ್ಲಿ ಬಿದ್ದ ಭಾರೀ ಮಳೆಗೆ ನನ್ನೆದೆಯ ಹೊಳೆಗೆ ತುಂಬು ನೆರೆ;
ಒಂದು ಹಾನಿಯೂ ಇಲ್ಲ!

ಅಲ್ಲಿ ಶುರುವಾದರೆ ಹನಿಹನಿ ಮಳೆ
ಇಲ್ಲಿ ನಳನಳಿಸುವ ಇಳೆ;
ಎಲ್ಲೆಲ್ಲು ನನೆವ ಹಸಿರ ಕಳೆ.
ಹಾಡು ಹಗಲಲು ಇರುಳ ಹಳವಂಡದುಬ್ಬರ!

ಜಡಿಮಳೆಯು ಬಿದ್ದರೆ ಅಲ್ಲಿ
ಹಾಡು ಹಕ್ಕಿಗಳ ವಲಸೆಗಿಲ್ಲಿ ತೆರೆದ ಪಕ್ಷಿಧಾಮ;
ಎದೆಯಿಂದೆದೆಗೆ ಉಲಿವ ಥರಥರದ ಗಾನ!

ಅಲ್ಲಿ ಬೀಳುವ ಮಳೆಗೆ ಉದುರಿದ
ಹೂ-ಹಸಿರೆಲೆಗಳ ರಾಶಿಗೆ
ನನ್ನೆದೆಯ ಮುಡಿಯಲ್ಲಿ ತುಂಬು ಶೃಂಗಾರ;
ಎದೆಯ ಸೂರಿಗಿದೋ ನಿತ್ಯ ತಳಿರ ತೋರಣ!

ಅಲ್ಲಿ ಬೀಸುವ ಮಳೆಗಾಳಿಗೆ
ಇಲ್ಲಿ ಮತ್ತ ಭರಿಸುವ ಕೌದಿಯ ಕಾವು;
ಆ ಲೋಕ ಈ ಲೋಕ ಎಲ್ಲ ಲೋಕಗಳ
ಚಿತ್ತಚಿತ್ತಾರದ ಕನಸ ಒನಪು!

ಅಲ್ಲಿ ನಿಂತರೆ.... ಮಳೆ....
ಎದೆ ತುಂಬಿ ಹರಿವ ನೀರು
ಮನಬಿಚ್ಚಿ ಅಲೆವ ಲಹರಿ
ಉಲಿವ ಚಿಲಿಪಿಲಿ ನಿನಾದ
ಪಲ್ಲವಿಸುವ ಗಿಡ ಬಳ್ಳಿ ಹೂ ಹೀಚು
....
ಒಟ್ಟಾರೆ ಇಲ್ಲಿ ಎಲ್ಲ ಎಲ್ಲ
ಸ್ತಬ್ಧ, ನಿಶ್ಯಬ್ದ!

ಕಲ್ಲುಗಳೊಂದಿಗೆ ನಾ

ವೇದಾರಾಣಿ ಸೊಲಬಕ್ಕನವರ

ಮೊದಲಿನಿಂದಲೂ ನನಗೆ
ಕಲ್ಲುಗಳೆಂದರೆ ಪ್ರಾಣ
ಎಲ್ಲ ಜಾತಿ, ಬಣ್ಣ
ಆಕಾರಗಳ ಕಲ್ಲುಗಳನ್ನು
ಪ್ರೀತಿಸುತ್ತಲೇ ಬಂದಿದ್ದೇನೆ.

ಸಣ್ಣವಳಿದ್ದಾಗ
ಎಲ್ಲೆಲ್ಲಿಯವೊ

ಪುಟ್ಟ ಕಲ್ಲುಗಳನ್ನಾಯ್ದು
ಅಂಗೆಯಿಂದ ಮುಂಗೈಗೆ
ಮುಂಗೈಯಿಂದ ಅಂಗೈಗೆ
ಕಲ್ಲುಗಳನ್ನು ಹಾಕುತ್ತಾ
ಆಣೆಕಲ್ಲು ಆಡಿದ್ದೇನೆ.

ಕಲ್ಲುಗಳೊಂದಿಗೇನೇ
ಕುಂಟುತ್ತಾ, ಜಿಗಿಯುತ್ತಾ
ಮೆತ್ತಗೆ ಹೆಜ್ಜೆ ಇಕ್ಕುತ್ತಾ
ಹಾಕಿದ ಗೆರೆಯ ಮೇಲೆ
ಕಾಲಿಡದೆ, ಅಲುಕಿಸದೆ
ಸಂಪ್ರದಾಯದ ರೂಢಿಯಂತೆ
ಆಡಿದ್ದೇನೆ. ಬೆಳೆದಿದ್ದೇನೆ.

ದೊಡ್ಡವಳಾದ ಮೇಲೆ
ಕಲ್ಲುಗಳೊಂದಿಗಿನ ಒಡನಾಟ
ಬದಲಾಗಿದೆ.
ಈಗ ಹೊರಗಿನ
ಕಲ್ಲುಗಳನ್ನಾಯುವುದ ಬಿಟ್ಟು
ಸೀಮಿತ ಸೌಧದೊಳಗಿನ
ಕಲ್ಲುಗಳೊಡನೆ ಬೆರೆತಿದ್ದರೂ
ದೂರದಲ್ಲಿ ಕಲ್ಲುಗಳ ಕಟೆದು
ಕಲ್ಲೊಳಗೆ ಕಲ್ಲಾದ
ಕರಿ ಕೈಗಳು
ಕಣ್ಣಿಗೆ ಕಟ್ಟುತ್ತವೆ.

ಕಲ್ಲುಗಳ ಪದರಂತೆ
ಇತಿಹಾಸ ಬಿಚ್ಚಿದಾಗ
ಕಟೆದ ಕಲ್ಲುಗಳಿಂದಲೇ ಉಳಿದು,
ಅಮರರಾದ ಅರಸುಗಳ
ಅರಸೊತ್ತಿಗೆ ನೆನಪಾಗುತ್ತದೆ.

ಹೀಗೆ ಕಲ್ಲುಗಳೊಂದಿಗೆ
ಆಡಿದ್ದೇನೆ, ಬೆರತಿದ್ದೇನೆ
ಕಲ್ಲುಗಳ ಅರಿಯುತ್ತ
ಪ್ರೀತಿಸುತ್ತ ಬೆಳೆಯುತ್ತಿದ್ದೇನೆ.

ಸೂತಪುತ್ರ

ಸಿ. ಪಿ. ಸಿದ್ಧಾಶ್ರಮ

ಕಿವಿ ಯೋನಿಯಾಗುವುದೊಂದು
ವಿಚಿತ್ರ ಪವಾಡ
ಅಂಥ ಪವಾಡದಲಿ ಜನಿಸಿದವ
ನೀನು
ಹೆತ್ತವ್ವನ ಮಾನ ಕಾಪಾಡಿ
ಹುಟ್ಟುತ್ತಲೇ ಪರದೇಶಿಯಾದೆ
ಸಾಕಿದಳು ನೀರು ಕಸುಬಿನ ತಾಯಿ
ಮಮತೆಯ ಹಾಲುಣಿಸಿ
ಹೆತ್ತ ಕರುಳಿಗೂ ಮಿಗಿಲಾಗಿ

ಕಲಿತೆ
ಹುಟ್ಟು ಹಾಕಿ ಬಲೆ ಬೀಸುವುದನು
ಈಜು ನೀರಾಟ ಜೊತೆಗೆ ಬಿಲ್ಲು ವಿದ್ಯೆ
ಮಹಾವೀರ ಶೂರ ಧೀರ
ಗುರುಭಕ್ತಿಯ ಶಾಪವಾಗಿ
ಕುಲಕೆ ಬಡಿದ ಸಿಡಿಲು
ಸಮಯಕೆ ಬಾರದ ವಿದ್ಯೆ
ಇದ್ದೂ ಇಲ್ಲದವ
ಮರುಗಿದ ಏಕಲವ್ಯ
ನೋವ ಮರೆತು

ಎಂಥ ಗೆಳೆಯ ಸುಯೋಧನ
ಎಲ್ಲ ತಿಳಿದಿದ್ದರೂ ಗೆಳೆತನದ ನಾಟಕ

ಅಣ್ಣನಿಂದಲೇ ತಮ್ಮಂದಿರ ನಾಶದ ಸಂಚು
ಸ್ವಾರ್ಥದ ಕೊಚ್ಚೆಯಲಿ ಗೆಳೆತನದ ಮೀನಬೇಟೆ
ಅಧಿಕಾರಶವದ ಎಲುಬು ರುಚಿಯ ತವಕ
ಸಿಂಸಾಸನದಡಿಯಲಿ ಗೋರಿ ತೋಡಿಕೊಳ್ಳುವ ಚಪಲ

ಚಿಕ್ಕವರು ದೊಡ್ಡವರು
ಕರಿಮೀಸೆ ಬಿಳಿಕೂದಲಿನವರು
ಎಲ್ಲರೂ ನಿಂದಿಸುವವರೆ
ಸೂತಪುತ್ರ ಸೂತಪುತ್ರ!
ಎಲ್ಲ ಅವಮಾನಗಳ ನುಂಗಿ
ಗೆಳೆಯನುದ್ಧಾರಕೆ ಮುಡಿಪಾದ ಜೀವ

ಕರುಣಾ ಸಾಗರ ಭಗವಂತ
ಎಂಥ ತಂತ್ರ!
ಕರ್ಣಕುಂಡಲ ಅದು ಇದು
ಒಂದೊಂದೆ ಬೇಡಿ
ನೀನಾದೆ ಖಾಲಿ ಖಜಾನೆ

ಹೆತ್ತವ್ವನ ಕೋರಿಕೆ
ಮಗನ ಮರಣಕೆ ನಾಂದಿ
ತಮ್ಮಂದಿರ ಬದುಕಿಗೆ ಅಣ್ಣನ ಬಲಿ
ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದಕೆ ಸುಣ್ಣ
ಮಾತೃವಾತ್ಸಲ್ಯದ ವಿಚಿತ್ರ ಬಗೆ
ರಾಜನಾಗಬೇಕಿದ್ದವ ಹೆಣವಾದೆ
ರಣರಂಗದಲಿ

ಸಾಕವ್ವನ ಕಣ್ಣಲಿ ಹರಿಯಿತು ರಕ್ತ
ಕರುಳು ಕತ್ತರಿಸಿ ಎದೆಯೊಡೆದ ರೋದನ
ತಲುಪಿತು
ಆಕಾಶದ ಕಿವಿಗೆ ಗಾಳಿಯ ಹೃದಯಕೆ
ಸುಖವನನುಭವಿಸಿದರೆ ಗೆದ್ದವರು?
ಇದು ವಿಚಿತ್ರ ಭಾರತ!

ಬಲೆ

ಗೀತಾ ಹೆಗಡೆ

ಕತೆಗಳಲ್ಲಿ ಎಷ್ಟೋ ವಿಧಗಳಿವೆಯಲ್ಲ - ಅವುಗಳಲ್ಲಿ ತನ್ನ ಕತೆ ಮಾತ್ರ ಯಾವ ಪ್ರಕಾರಕ್ಕೆ ಸೇರಿದ್ದು ಎಂದು ಅವನಿಗೆ ಖಂಡಿತ ಗೊತ್ತಿಲ್ಲ. ಕತೆಗೊಬ್ಬ 'ಹೀರೋ' ಅಂದುಕೊಂಡೇ ನಿಮಗೆ ಅಭ್ಯಾಸವಾಗಿಹೋಗಿದ್ದರೆ, 'ಅವನೇ' ಎಂದುಕೊಳ್ಳಿ. ಅವನಿಗಂತೂ ತಾನೊಬ್ಬ ಉಸಿರಾಡುವ ಮನುಷ್ಯ ಎಂಬುದಷ್ಟೇ ಖಚಿತ. ಅವನಿಗೊಂದು ಹೆಸರನ್ನು ಕೂಡ ನಿಮ್ಮಿಷ್ಟದಂತೆ ಇಟ್ಟುಕೊಳ್ಳಬಹುದು. ಏಕೆಂದರೆ ಕೆಲವರಿಗೆ ಹೆಸರಿನಿಂದಲೇ ತಾನೇ ಜಾತಿ-ನೀತಿ ಸೃಷ್ಟಿಯಾಗುವುದು? ಆದರೆ ನಿಮ್ಮ ಕಲ್ಪನೆಯ 'ಹೀರೋ' ಹೀಗೆಯೇ ಇರಬೇಕು, ಇಂತಹ ಸಾಹಸಗಳನ್ನೇ ಮಾಡಬೇಕು ಎಂದೆಲ್ಲ ಮುಂತಾಗಿ ನಿರೀಕ್ಷೆ ಇಟ್ಟುಕೊಳ್ಳಬೇಡಿ! ಸ್ವತಃ ಆತನಿಗೇ ಅಂಥ ನಿರೀಕ್ಷೆಗಳಿಲ್ಲ!? ಹೇಳಿ ಕೇಳಿ ಅವನೊಬ್ಬ ಅಲೆಮಾರಿ. ಸ್ಫೋಟಿಸುವ ಹಿನ್ನಲೆ ಸಂಗೀತದೊಂದಿಗೆ ಓಡುತ್ತಲೇ ಬೆಳೆಯುವ ಕಾಲುಗಳಲ್ಲ ಅವನವು. ಪ್ರಜ್ಞಾಪರಿಧಿಯ ಮಂಕು ವಿಸ್ತಾರವಾಗುತ್ತಿದೆ ಎಂದಂದುಕೊಳ್ಳವಾಗೆಲ್ಲ ಪ್ರಪಂಚದ ಎಷ್ಟೋ ವಸ್ತುಗಳ ಘಟನೆಗಳ ಬಗೆಗೆ 'ಅದು ಹೀಗೇ' ಎಂಬ ಪರಿಕಲ್ಪನೆಯನ್ನು ಕಟ್ಟಿಕೊಳ್ಳುತ್ತಿರುತ್ತೇವೆ. ಅಥವಾ ಎಷ್ಟೋ ಸಲ 'ಅದು ಹೀಗೇಕಲ್ಲ?' ಎಂದೋ, 'ಹೀಗೆ ಅಲ್ಲವೇ ಅಲ್ಲ' ಎಂದೂ ಇರಬಹುದು.

ಪ್ರತಿಯೊಂದು ಜೀವಕ್ಕೂ, ಅದು ಸಸ್ಯತಗಣೆಯೇ ಇರಲಿ ಅಥವ ಸ್ಟೇಗೊಸಾರಸ್ಸೇ ಇರಲಿ, ಅದರದ್ದೇ ಆತ ಕತೆ ಇದ್ದೇ ಇದೆ - ನೀವು ಒಪ್ಪುತ್ತೀರಲ್ಲ? ಒಮ್ಮೊಮ್ಮೆ ಅದು ಕಾವ್ಯ ರೂಪದಲ್ಲಿರಬಹುದು ಇಲ್ಲ ಹನಿಗವನ, ಚುಟುಕು, ವಿಡಂಬನೆ, ನಗೆನಾಟಕ, ದುರಂತ ಅಥವ ಇನ್ನಾವುದೋ ಹೆಸರಿರದ ಪ್ರಕಾರದ್ದಿರಬಹುದು. ಎಲ್ಲೋ ಅಪರೂಪಕ್ಕೆ ಕಾದಂಬರಿ, ಮಹಾಕಾವ್ಯ ಕೂಡ ಆಗುವುದುಂಟು! ಹುಟ್ಟುತ್ತ ಹಸುಗೂಸು ಹುದುಗಿ, ಹನಿಗವನವಾಗಿದ್ದು ಬೆಳೆಯುತ್ತ ಕವನವಾಗಿ, ಗಹನವಾಗಿ ಕಾವ್ಯವಾಗಿ, ನಿಗೂಢವಾಗಿ ಪ್ರೌಢೆಯಾಗಿ ಕಾವ್ಯಾತ್ಮಕ ಮಹಾ ಕಾದಂಬರಿಯಾಗುವಳಲ್ಲ - ಅಂತಹ ಬೆರಗು, ಬೆಡಗು ಹೊತ್ತಂಥ ಕೃತಿಗಳಿರುತ್ತವೆ. ಅಂದಹಾಗೆ.... ಅದರ ಅರಿವು ಸ್ವತಃ ಅವನಿಗೇ ಗೊತ್ತಿಲ್ಲದಿರುವ ಸಾಧ್ಯತೆಯೂ ಇದೆ. ಪ್ಯಾರಡೈಸ್ ಹಕ್ಕಿಗೆ ಸ್ವರ್ಗವೇನೆಂಬುದು ಬೇಕಾಗದ ಹಾಗೆ, ಕೋಗಿಲೆಗೆ ಟಿ.ಪಿ.ಎಸ್. ಸಾರೇಗಾಮಾ ಅಜ್ಞಾನದ ಹಾಗೆ ಹೂವಿಗೊಂದು ಮೃದುತ್ವ ತಿಳಿಗಂಧ ಪರಿವೆಯಿಲ್ಲದ ಹಾಗೆ. ಹಾಗೆಯೇ ತಾನೊಬ್ಬ ಋಷಿ ಇದ್ದಿರಬಹುದೇ

ಎಂಬ ಗುಮಾನಿ ಕೂಡ ಅವನಿಗೆಂದೂ ಬರಲಾರದು-ಏಕೆಂದರೆ....

ಹ್ಞಾ! ಆತ ಅಂಥವನೇ. ಪುಟಪುಟಯುವ ಗುಬ್ಬೀ ಮರಿಯನ್ನು ನೋಡಿದಾಗ ಅದರ ಲವಲವಿಕೆ - ಜೀವಂತಿಕೆಯನ್ನು ಅರಳಿದ ಕಣ್ಣಿಂದ ನೋಡುವುದೇ ಬೇರೆ; ಅದರ ಮಾಂಸ ಹಿಡಿಯಲ್ಲಿ ಎಷ್ಟು ಪಾಲು ಇದ್ದೀತು ಎಂದು ನೋಡುವ ಕಣ್ಣೇ ಬೇರೆ.

ಹಕ್ಕಿ ಹಿಡಿದು ಮಾರುವ ಒಬ್ಬ ಬಲೆಗಾರ. ದಿನವಿಡೀ ಅಲೆದು, ಬಲೆ ಬೀಸಿ ಕಾದು, ಸಿಕ್ಕ ಹಕ್ಕಿಗಳನ್ನು ದೊಡ್ಡ ವ್ಯಾಪಾರಿಗೆ ಮಾರಿ ತುತ್ತಿನ ಚೀಲವನ್ನು ಅಂದಿನ ಮಟ್ಟಿಗೆ ತುಂಬಿಸಿದರಾಯಿತು. ನಿನ್ನೆಯ ಗುಂಗಿಲ್ಲ; ನಾಳೆಯ ಹಂಗಿಲ್ಲ. ತಾನು ಮಾರಿದ ಹಕ್ಕಿ ಇನ್ನೊಬ್ಬನ ಅಂಗೈ ಮುತ್ತಾಯಿತೇ ಅಥವಾ ಹೊಟ್ಟೆಗೆ ತುತ್ತಾಯಿತೇ ಗೋಜಿಲ್ಲದ ನಿಶ್ಚಿಂತೆ ಅವನದು.

ಇಂಥವನು ನೆಲದಳತೆ ಮಾಡುವ ಬಿರುಬಿಸಿಲಿನ ಹೊತ್ತು. ಉರಿನೆತ್ತಿಯ ಸುಡುತಾಪಕೆ ಬಳಲಿ, ವಿಶಾಲವಾದ ಹಸುರಿನ ಕೊಡೆಯೊಂದರ ಕೆಳಗೆ ನಿಂತ. ಕರುಣಾಮಯಿ, ನಿಸರ್ಗದ ಪಚ್ಚೆ ಬೆಡಗಿ. ತನ್ನ ನೆರಳಿಗೆ ಬಂದ ದೇವದಾನವರಿಗೆಲ್ಲ ಸಮನಾಗಿ ಆಶ್ರಯ ಕೊಡುವವಳಲ್ಲವೆ? ತುಂಬಿದ ಮಡಿಲಲ್ಲಿ ಸಾವಿರ ಹಕ್ಕಿಗಳನ್ನು ಸೈರಿಸಿಕೊಂಡಾಕೆ. ಇವನಿಗೂ ತಣ್ಣೆಳಲು ಕೊಟ್ಟಳು. ಆಹಾ! ಅದೇನು ತಣ್ಪು. ಬತ್ತಿದ ಜೀವಕಳೆ ಉಕ್ಕಲು ಹೊಸ ಗುಕ್ಕೊಂದು ದಕ್ಕಿದಂತೆ, ಬಲೆಗಾರ ನಿಂತವನು ಕುಳಿತ. ಹಾಗೆಯೇ ಹಾಯಾಗಿ ಅಡ್ಡವಾದ. ಕಣ್ಣು ತುಂಬುವ ಹಸಿರಿಗೆ ದನಿ ಬಂದಂತೆ, ಚಿಲಿ-ಪಿಲಿಯೆನುವ, ಅರಚುವ-ಕಿರುಚುವ, ಮೊರೆಯುವ-ಗುನುಗುವ ನೂರೆಂಟು ವಿಧ ಪಕ್ಷಿಗಳು. ಗರತಿ ಗಂಗಮ್ಮನಂತೆ ಮೈತುಂಬ ಮುಡಿತುಂಬ ಹಸಿರು ಹೊದ್ದು, ಆದರಿಸುವ ಮಾತಾಯಿಯಂತೆ ಮಹಾವೃಕ್ಷ ಮನ ತುಂಬುವಳು.

ನಿದ್ರೆ ಮುಗಿದೆದ್ದ ಬಲೆಗಾರ ಕಣ್ಣಿಟ್ಟಾಗ, ಹದಿನಾರು ಹರದಾರಿ ಕಾಲೆಳೆದು ಬಂದ ಆಯಾಸ ಮಾಯವಾಗಿತ್ತು. ಸಂಜೆಯ ಸೂರ್ಯ ಮರದ ನೊಸಲಿಗೆ ತುಂಬು ತಿಲಕವನ್ನಿಕ್ಕಿದ್ದ. ಗೂಡು ಬಾಯ್ತುಂಬಲು ಕರೆದಂತೆ, ತಹತಹಿಸುವ ಜೀವಗಳಿಂದ ಜಿಗಿ ಜಿಗಿಯುವ ಕೊಂಬೆಗಳು. ಅವು ಬಲೆಗಾರನಿಗೆ ದರ್ಶನವಾದದ್ದು ಬದುಕಿನ ಬುತ್ತಿಯಾಗಿ.

'ನೋಡಿಲ್ಲಿ ನಿನ್ನ ಜೀವಮಾನವಿಡೀ ಬಲೆ ತುಂಬುವಷ್ಟು, ಒಡಲು ಬಿರಿಯುವಷ್ಟು ಸರಕು! ಮೂರ್ಖ, ಮಳೆ-ಬಿಸಿಲೆನ್ನದೆ ಅಲೆಮಾರಿಯಾಗಿ ತಿರುಗುವುದಕ್ಕಿಂತ, ಒಂದೊಂದು ಋತುವಿನಲ್ಲಿಯೂ ಹತ್ತಾರು ವಿಧ ಹಕ್ಕಿಗಳನ್ನು ಬಿತ್ತಿ ಬೆಳೆಯುವ ನನ್ನತ್ತ ನೋಡು!' ಎಂದಂತಾಯಿತು. ಸರಿ, ತಳ ಊರಿಯೇ ಬಿಟ್ಟ.

ದಿನದಿನವೂ ಹೊಕ್ಕರೆ ಹೂದಲು; ಹೊರಬಿದ್ದರೆ ಬಯಲು! ಹೂಡಿದ ಹಂಚಿಕೆಗೆ

ಹಾರಿಕೊಳ್ಳುವ ಹಕ್ಕಿಗಳ ಹರಾಕಿರಿಯೇನು? ಹುಟ್ಟಿದ್ದೇ ಈ ಬಲೆಯಲ್ಲಿ ಜೀಳಲೆಂಬಂತೆ ಹಾರಿಬಿದ್ದೋ, ಜಾರಿಬಿದ್ದೋ ಒದ್ದಾಡುವುದೇನು! ಅರಿವಿನ ಅಂಚಿಗೆ ಬರಲಾರದೆ, ಮಿತಿಯಿರಿಸುವ ಮುಗ್ಧತೆಗೆ ಮುಗ್ಗರಿಸುವ ಹಕ್ಕಿಗಳೇನು!.... ಅಂತೂ ದೊಡ್ಡ ವ್ಯಾಪಾರಿಗೇನೇ ಲಾಭವಾಗಲಿ, ಇವನ ಪಾಲೂ ಭರ್ಜರಿ.

.... ಋತುಮಾನದ ಗಾಲಿಯುರುಳಿ.... ವಾರಗಳು ಪಕ್ಷಗಳಾಗಿ, ತಿಂಗಳುಗಳಾಗಿ, ವರ್ಷಗಳಾದವು; ದಶಕಗಳಾದವು. ಹಕ್ಕಿಗಳ ತಲೆಮಾರುಗಳು ಇಮ್ಮಡಿ - ಮುಮ್ಮಡಿಯಾಗಿ ಸೂರೆಯಾದಂತೆ, ಬಲೆಗಾರನ ಕಣ್ಣು ಮಂಜಾಗುತ್ತ ಬಂದಿತು. ಕಾಲುಗಳು ಶಕ್ತಿಗುಂದಿದವು. ಹಕ್ಕಿಗಳಿಗೆ ಉರುಳಾಗಿದ್ದ ಬಲೆಯ ಕೊರಳು ಜಗ್ಗಿಹೋಯಿತು, ಮೂಲೆಗುಂಪಾಯಿತು,.... ಚಿರಯೌವನೆ ಹಸಿರನ ನೆರಿಮರ ಕೂಡ ಅದೆಷ್ಟೋ ಸಂವತ್ಸರಗಳನ್ನು ದಾಟುತ್ತಲೇ, ಮುಪ್ಪಿನ ಬಲೆಯಲ್ಲಿ ಸಿಕ್ಕ ಮುದುಕ ಬಲೆಗಾರನನ್ನು ನೋಡುತ್ತಲೇ ಇತ್ತು.

ಹೀಗಿರುವಾಗ, ನಾಲ್ಕೆಂಟು ದಿನಗಳಾದರೂ, ಒಂದೂ ಹಕ್ಕಿ ಸಿಗದಿದ್ದುದೂ, ಮುಪ್ಪಿನ ಅಸಹಾಯಕತೆಗೆ ಕನಿಕರ ತೋರದ ಅನಾರೋಗ್ಯವೂ ಕಾಡಿದಾಗ ಆತ ಕಂಗೆಟ್ಟ. ದೇಹದಲ್ಲಿ ತ್ರಾಣವಿದ್ದಾಗ ಆಟವಾದ ಉಪವಾಸ ಈಗ ತನ್ನ ಸಂಕಟಕಾರೀ ಶಕ್ತಿಯನ್ನು ಹೊರಗೆಡವಿತು. ಚಿಂತಿಸಲು ಕೂಡ ಬಲವಿಲ್ಲ - ಎಂದೆನಿಸುತ್ತಿದ್ದಂತೆಯೇ ಸ್ವಲ್ಪ ದೂರದಲ್ಲಿ ಏನೋ ಸದ್ದು ಕ್ಷೀಣವಾಗಿ, ಮಂದಕಿವಿಗೆ ಬಿತ್ತು. ಚಿಕ್ಕದಾಗಿ ರೆಕ್ಕೆಯೊದರುವ ಪಟಪಟ ಸದ್ದು. ಹತ್ತಿರ ಹೋಗಿ ನೋಡಿದಾಗ, ... ಅದೊಂದು ಅರಗಿಣಿ.... ಕಾಲು ಮುರಿಯಿತೋ. ಜೀವ ಮುರಿಯಿತೋ - ಎಂಬ ಯಮಯಾತನೆಯಲ್ಲಿ, ಮೇಲೇಳಲು ಪಡುವ ವ್ಯರ್ಥ ಪ್ರಯತ್ನ. ನೀಳವಾದ ಹಸಿರು-ನೀಲ ಗರಿಗಳು, ಕೆಂಪನೆ ಕೊಕ್ಕು, ಬೆಡಗಿಗೆ ಕಿರೀಟವಿಟ್ಟಂತೆ ಕಡುಗೆಂಪು ಜುಟ್ಟು. ಈವರೆಗೆ ಲೆಕ್ಕವಿಲ್ಲದ ಅದೆಷ್ಟೋ ಅಂದದ ಅರಗಿಣಿಗಳನ್ನು ನೋಡಿದ್ದಿದ್ದರೂ, ಬಲೆಗಾರನಿಗೆ ಪುಟ್ಟ ಹಕ್ಕಿಮರಿಯ ದೈನ್ಯದ ಕಣ್ಣಿನಲ್ಲಿ ತನ್ನ ದೈನ್ಯವೇ ಕಂಡಿತೇನೋ.... ಏನೋ ಸ್ಪಂದನ-ಪ್ರತಿಸ್ಪಂದನ.

..ಬಾಗಿ, ಮೃದುವಾಗಿ ಹಕ್ಕಿಯನ್ನೆತ್ತಿಕೊಂಡ. ನಿರುಕಿಸಿದ; ಒಳಗೇ ಜೀವನಪರ್ಯಂತ ತನಗೆ ರೂಢಿಯಾದ ಪ್ರವೃತ್ತಿ ಕುಸಿಯುತ್ತಿದ್ದುದು ಕೊಚ್ಚಿಕೊಂಡೇ ಹೋಯಿತೆನ್ನಬೇಕು. ಹಕ್ಕಿ ಕೂಡ ಅವನ ಬೆಚ್ಚನ ಕರುಣೆಯನ್ನು ನೆಚ್ಚಿಕೊಂಡಿತು. ಆರೈಕೆ ಮಾಡಿದರೆ ತಿಂಗಳೊಪ್ಪತ್ತಲ್ಲಿ ಸರಿಯಾದೀತು - ಎಂಬ ಆಸೆ ಅವನಿಗೂ. ಅಲ್ಲೆಲ್ಲ ತಿರುಗಾಡಿ, 'ಎಲಗುರಿಗೆ' ಸೊಪ್ಪಿಗೆ ತಡಕಾಡಿದ. ಸಿಕ್ಕಷ್ಟೇ ತಂದು, ತನ್ನ ಗಾಯಕ್ಕೆ ಮಾಡಿಕೊಳ್ಳುತ್ತಿದ್ದ ವೈದ್ಯವನ್ನೇ ಮಾಡಿದ. ಹಕ್ಕಿಯ ಕಾಲಿಗೆ ಸೊಪ್ಪಿನ ರಸ ಹಿಂಡಿ, ಕಟ್ಟುಪಟ್ಟಿ ಬಿಗಿದದ್ದೇ, ಇನ್ನು ಈ ಹಕ್ಕಿ ಹಾರುವಂತೆ ಮಾಡುವುದೇ ತನ್ನ ಗುರಿ - ಎಂದುಕೊಂಡುಬಿಟ್ಟ.

ತನ್ನ ಕಾಯಿಲೆ, ಹಸಿವು ಬಳಲಿಕೆ ಎಲ್ಲವನ್ನು ಅವಹಣಿಸಿ ಅಲ್ಲ ಅಲ್ಲ ಮರೆತು ಶುಶ್ರೂಷೆ ಮಾಡಿದ. ರಾತ್ರಿ ಹೊತ್ತಿನಲ್ಲಿ ಇತರ ಕ್ರಿಮಿ-ಕ್ರೀಟಗಳಿಂದ ಹಕ್ಕಿಮರಿಗೆ ತೊಂದರೆಯಾಗದಿರಲೆಂದು ಅದರ ಕಣ್ಗಾವಲಾಗಿ ಕಾದು, ಹಗುರವಾದೊಂದು ಪಂಜರವನ್ನು ತಾನೇ ಕಟ್ಟಿ, ರಕ್ಷಣೆಯ ಕೋಟೆಯಲ್ಲಿಟ್ಟ.... ಕೆಲವು ದಿನಗಳಲ್ಲೇ ಗಿಣಿ ಚುರುಕಾಗಿ, ಚೇತರಿಸಿಕೊಳ್ಳತೊಡಗಿತು. ಆದರೆ ಇತ್ತ ಎಡೆಬಿಡದ ಕಾಳಜಿಗೆ ತನ್ನನ್ನು ತೆತ್ತುಕೊಂಡ ವೃದ್ಧ ಶುಶ್ರೂಷಕನ ಸ್ಥಿತಿ ಗಂಭೀರವಾಗತೊಡಗಿತು. ಉಲ್ಬಣಿಸಿದ ಹಸಿವು-ಬಳಲಿಕೆಗಳಿಂದ ಮುದುಕ ಈಗಲೋ-ಆಗಲೋ-ಎನ್ನುವಂತಾದ.

ತುಂಬ ದಿನಗಳಿಂದ ಇವನ ಸುಳಿವೇ ಇಲ್ಲದ್ದರಿಂದ, ಆ ದಾರಿಯಾಗಿ ಪ್ರಯಾಣ ಮಾಡುತ್ತಿದ್ದ ವ್ಯಾಪಾರಿಗೆ, ಒಂದು ಘಳಿಗೆಯಲ್ಲಿ, ಈ ಮುದುಕನ ನೆನಪಾಯಿತು. ಬಲೆಗಾರನ ವಸತಿ ಇಲ್ಲಿಯೇ ಎಂದು ತಿಳಿಯುವುದರ ಜೊತೆಗೇ ವ್ಯಾಪಾರಿಯ ಕಣ್ಣಿಗೆ ಅಲ್ಲೊಂದು ಅತಿ ಸುಂದರ ಅರಗಿಣಿ ಇದ್ದುದೂ ಕಂಡಿತು. ಸಾಯುತ್ತಿರುವ ಬಲೆಗಾರನ ಕೈಯಿಂದ ಬಲು ಸುಲಭವಾಗಿ ಅರಗಿಣಿಯನ್ನು ಹೊಂದುವೆನೆಂಬ ಭರವಸೆಯಿಂದ ಆ ಹಕ್ಕಿಯನ್ನು ಕೊಡುವಂತೆ ಕೇಳಿದ. ''ಇದನ್ನಂತೂ ಖಂಡಿತ ಕೊಡಲಾರೆ. ಈ ಗಿಣಿ, ನಾನು ಸಾಕಿದ, ನನ್ನ ಜೀವಮಾನದಲ್ಲೇ ಮಮತೆಯಿಂದ ಪೋಷಿಸಿದ ಒಂದೇ ಒಂದು ಜೀವ. ದಯವಿಟ್ಟು ಹಕ್ಕಿಯನ್ನು ಕೇಳಬೇಡ, ನಾನೀಗ ಮೊದಲಿನ ಹಕ್ಕಿ ವ್ಯಾಪಾರಿಯಲ್ಲ'' ಆತಂಕದಿಂದ ಬಲೆಗಾರ ವಿರೋಧಿಸಿದ.

ಆಶ್ಚರ್ಯದಿಂದ ವ್ಯಾಪಾರಿ ಅಸಮಾಧಾನಕ್ಕೇರಿದ. ''ಇದಕ್ಕೋಸ್ಕರ ಎಷ್ಟು ಹಣ ಬೇಕಾದರೂ ತೆಗೆದುಕೋ. ಆದರೆ ಈ ಸೊಗಸಿನ ಹಕ್ಕಿ ಮಾತ್ರ ನನಗೆ ಬೇಕು.''

ವ್ಯಾಪಾರಿಗೆ ಗೊತ್ತು. ಈ ಮುದುಕನಿಗೆ ಹಕ್ಕಿಗಾಗಿ ತಾನು ಕೊಡುವ ಬೆಲೆ, ನಂತರ ಅದರಿಂದ ಗಳಿಸುವ ಲಾಭದೆದುರಿಗೆ ಏನೂ ಅಲ್ಲ ಎಂದು.

ಏನೂ ಅರಿಯದ ಹಕ್ಕಿ ಚಿಕ್ಕ ಪಂಜರದೊಳಗಿಂದ ಪಿಳಿ ಪಿಳಿ ನೋಡುತ್ತಿತ್ತು. ಹೊಳೆದಾಸವಾಳದ ಹಣ್ಣಿನಂತಹ ಕಣ್ಣುಗಳು! ಕಿನ್ನರಿ ಹೂವಿನಂತಸ ಜುಟ್ಟು! ಪುಕ್ಕವನ್ನು ಒಪ್ಪವಾಗಿಸುವ ಜಿನ್ನಾಣ! ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಖಡಾಖಂಡಿತವಾದ ಮುದುಕನನ್ನು ನೋಡಿ ಈ ಬಾರಿ ವ್ಯಾಪಾರಿ ಬೇಸರಿಸಲಿಲ್ಲ. ಅವನ ಆಯುಷ್ಯವನ್ನು ಅಳೆಯುವವನಂತೆ, ''ನಾಳೆ ಬರುವೆ, ಯೋಚಿಸು. ನಿನ್ನ ನಂತರವಾದರೂ ಹಕ್ಕಿಗೊಂದು ದಿಕ್ಕು ಬೇಡವೇ?'' ಎಂದು ಸೂಚಿಸಿ ಹೊರಟುಹೋದ....

ಒಳ್ಳೆಯದು.... ಪ್ರಿಯ ಓದುಗ, ಈ ಕತೆಗೆ ಅಂತ್ಯ ಏನಾಗಿರಬಹುದು? ನಾಳೆಯ ಒಳಗೆ ಸಂಭವಿಸಬಹುದಾದ ಸಾಧ್ಯತೆಗಳೆಷ್ಟು! 'ಹಾಗಾಗಬಹುದು' - 'ಹೀಗಾಗಬಹುದು' ಎಂದುಕೊಳ್ಳಲು ಸಕಾಲವೀಗ.

ಸಂಕ್ರಮಣ ೩೨೭-೩೨೮/ನವೆಂಬರ್-ಡಿಸೆಂಬರ್ ೧೯೯೯

ನೀವೊಬ್ಬ ಆಶಾವಾದಿಯಾಗಿದ್ದರೆ, ಹೀಗೆನ್ನಬಹುದು; ''ಮರುದಿನ ವ್ಯಾಪಾರಿ ಹಕ್ಕಿಗಾಗಿ ಬರುವುದೇ ಇಲ್ಲ. ಬಂದರೂ ಯೋಗಕ್ಷೇಮ ವಿಚಾರಿಸಲು ಮಾತ್ರ''. ನೀವೊಬ್ಬ ಕನಸುಗಾರನಾಗಿದ್ದರೆ, ''ಮರುದಿನ ಆ ವ್ಯಾಪಾರಿ, ಮುದುಕನ ಶುಶ್ರೂಷೆಗೆ ಸಕಲ ವ್ಯವಸ್ಥೆ ಮಾಡಿ, ಹಕ್ಕಿಯ ಕುರಿತಾದ ಅವನ ಮಮತೆಯನ್ನು ಶ್ಲಾಘಿಸಿ, ತನ್ನ ವೃತ್ತಿಯ ಬಗೆಗೆ ನಾಚಿಕೊಳ್ಳುವನು''-ಎನ್ನಬಹುದು. ಅಥವ ನೀವು ಪಕ್ಕಾ ವ್ಯಾಪಾರೀ ಮನೋಭಾವದವರಾದರೆ ''ಸಾಯಲಿಕ್ಕೆ ಬಂದಿರುವ ಈ ಬಲೆಗಾರನಿಗಾದರೂ ಅಷ್ಟು ಹಣ ಯಾಕೆ? ಮೋಹದಿಂದ ಹಕ್ಕಿಯನ್ನಿಟ್ಟುಕೊಂಡು ಆತ ಮಾಡುವುದಾರೂ ಏನು? ಕೇಳಿದಷ್ಟು ಬೆಲೆ ಸಿಗುವಾಗ ಕೊಟ್ಟು ಬಿಡಬಾರದೆ?'' ಎಂದೇ ಕೇಳಬಹುದು.

ಇಲ್ಲ, ನೀವೊಬ್ಬ ಹುಚ್ಚ ಸಾಹಸಿಯಾಗಿದ್ದರೆ, 'ಅಷ್ಟು ಪ್ರೀತಿಯಿದ್ದಾಗ, ಆ ಹಕ್ಕಿಯನ್ನು ಕಟ್ಟಿಕೊಂಡು ನಾಳೆ ಬೆಳಿಗ್ಗೆಯೊಳಗೆ ಆತ ಎಲ್ಲಾದರೂ ದೂರ ಓಡಿಹೋಗಬಾರದೇ (?!)' ಎಂದು ವಾದಿಸಬಹುದು.

ನಿರಾಶಾವಾದವೇ ನಿಮ್ಮ ನಿಲುವಾಗಿದ್ದರೆ ''ಇನ್ನೇನು ತಾನೇ ಹಕ್ಕಿಗೂ, ಮುದುಕನಿಗೂ ಮಾಡಲಾದೀತು! ಉಪವಾಸದಿಂದ ಮುದುಕ ಸತ್ತ ಮೇಲೆ ಪಕ್ಷಿ ವ್ಯಾಪಾರಿಗಲ್ಲದೆ ಇನ್ನಾರಿಗೆ?'' ಅನ್ನುತ್ತೀರಿ. ಹೀಗೇ, ವೇದಾಂತಿಯಾಗಿದ್ದರೆ, ಪಕ್ಷಿಪ್ರೇಮಿಯಾಗಿದ್ದರೆ, ಸಲೀಂ-ಅಲಿ ಆಗಿದ್ದರೆ, ಮದರ್ ಥೆರೇಸಾ ಆಗಿದ್ದದ್ದರೆ, ಆದಾಗಿದ್ದರೆ ಇದಾಗಿದ್ದರೆ, ಈ ಊಹಾಪೋಹಗಳ ಬಲೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿದ್ದಿದ್ದರೆ....

ಆದರೆ ಕತೆ ನಮಗೆ ಕೊಡುವ ಸ್ವಾತಂತ್ರ್ಯ ಎಂದರೆ ಅದರ ಬೆಳವಣಿಗೆಯನ್ನು ನೋಡುವ ಅವಕಾಶ ಮಾತ್ರ. ಮುಕ್ತಾಯವನ್ನು ಅದು ತಾನೇ ಇಟ್ಟುಕೊಳ್ಳುತ್ತದೆ. ಆಗಿದ್ದೇನೆಂದರೆ....

ಗತದ ಹುತ್ತದ ಮೇಲೆ ಅರಳಿನಿಂತ ಕಕ್ಕುಲಾತಿಯ ಹೂವಿಗೆ ಮನಸೋತ ಮುದುಕ, ಇರುಳನ್ನು ಕಳೆದು ಬೆಳಗಿಗೆ, ಅನಿಶ್ಚತತೆಯ ಸೆಳವಿಗೆ ಕಾಯಲಾರದ ಮುದುಕ, ತನ್ನ ನಿರ್ಮಿತಿಯಾದ ಪಂಜರವನ್ನು ತಾನೇ ಮುರಿದು ಹಾಕಿದ. ವ್ಯಾಮೋಹದ ಗೂಡಿನಿಂದ ಹಾರಿ ಬಿದ್ದರೂ ಹಕ್ಕಿ ಮತ್ತೆ ಸೇರಿಕೊಳ್ಳದಿರಲಿ - ಎಂದು. ಬಲಿತ ರೆಕ್ಕೆಯಮರಿ ನೀಲಾಕಾಶಕ್ಕೆ ಸೇರಲು ನೆಗೆಯಿತು. ಅರಗಿಣಿಯನ್ನು ಹಾರುವ ಛಂದದಲ್ಲಿ ನೋಡಲು ಕಣ್ಣು ಅಗಲಿಸಿದಷ್ಟೂ ಸಾಲದಾಯಿತು.... ಬರಿ ಬೆಳಗಲ್ಲದ ಬೆಳಗು ಮೂಡುವಷ್ಟರಲ್ಲಿ....

ಮಣ್ಣಿನದು ಮಣ್ಣಿಗೆ ಇಳಿಯಿತು,
ಆಕಾಶದ್ದು ಆಕಾಶಕ್ಕೆ ಹಾರಿಹೋಯಿತು.

ಜಾತ್ಯತೀತ

ಅಶೋಕ ಜೋಶಿ

ಮಾಡಿಕೊಂಡಿವಿ ನಾವು
ಲೆಕ್ಕವಿಲ್ಲದಷ್ಟು ಜಾತಿ ಉಪಜಾತಿ.
ಸಾಲದ್ದಕ್ಕೆ ತರಹೆವಾರಿ
ಮೀಸಲಾತಿ.
ಮರತಬಿಟ್ಟೇವಿ ನಾವು :
ನಾವು ಮೊದಲು ಇದ್ದದ್ದು
ಶುದ್ಧ 'ಕೋತಿ'.

ಅಪೇಕ್ಷೆ

ಎಫ್. ಅಸದುಲ್ಲಾ ಬೇಗ್

ಆಪ್ತರ ಅವಿಶ್ವಾಸದಿಂದ
ಆಗುವ ನೋವು
ಶತ್ರುವಿನ ತಿಪಿತದಿಂದ ಆಗುವುದಿಲ್ಲ.
ಮನುಷ್ಯ ಬೆಳೆಯಲು
'ಶತ್ರು' ಬೇಕು, ನಿಜ.
'ಮಿತ್ರ'ನ ವೇಷದಲ್ಲಲ್ಲ.

ಕವಿತೆ

ಜಿ.ಎಸ್. ಉಬರಡ್ಕ

ಚಿಗುರಿದಂತೆ ಕವಿತೆ
ಚಿಗುರಿನಂತೆ ಕಪಿತೆ
ಅರಳಿದಂತೆ ಕಪಿತೆ

ಹೂವಿನಂತೆ ಕವಿತೆ
ಮಾಗಿದಂತೆ ಕವಿತೆ
ಹಣ್ಣನಂತೆ ಕವಿತೆ
ಹಣ್ಣು ಹಣ್ಣು ಕವಿತೆ
ಬೀಜದಲ್ಲಿ ಅವಿತೆ

ನುಂಗಣ್ಣ ಹೇಳಿದ್ದು

ಸಿ.ಎಸ್.ಗೋವಿಂದರಾವ

ಸ್ವಾಮಿ, ನೀವು ಮಾಡುವಿರೇಕೆ
ತಕರಾರು?
ದಿಟ: ಕೊಂಡಿಹೆ ಬಂಗಲೆ ನಾಕು,
ಎರಡು ಮೂರು ಕಾರು.
ನುಂಗಿದೆನೆ ನಾನು? ಸುಳ್ಳಿದು
ಕೇಳಿ ದೇವರು.
ಬೇಕಿದ್ದರೆ ಕೊಟ್ಟು ನೋಡಿ
ಜಾಪಾಳ ಎರಡು ಮೂರು.

ಪ್ರಮಾದ

ದೀಪಾ ಹಿರೇಗುತ್ತಿ

ಕಡಲಿನ ಕಿರು ಅಲೆಗಳು
ಪಾದ ತೋಯಿಸಿ
ಕಚಗುಳಿಯಿಟ್ಟವು.
ಮುಂದಡಿ ಇಟ್ಟಳಾಕೆ
ಹಿರಿಯಲೆಗಳೆದ್ದು ಮೈ ಪೂರ ಒದ್ದೆ.
ದಡಕೆ ಬರಲೀಗವಳಿಗೆ ಮುಜುಗರ.
ಮುಂದೆ ಅನಂತ ಸಾಗರ.

ಸ್ಲಮ್ ಹೆಂಗಸರು

ಕೆ.ಆರ್.ಪ್ರೇಮಲೀಲಾ

ಮನಬಿಚ್ಚಿ ಮಾತಾಡುವಾ
ಹೊರಬನ್ನಿ - ಎನಲು
ಸಮಾಜಸೇವಾ ಕಾರ್ಯಕರ್ತೆಯರು
ಎದೆ ಮುಚ್ಚಲು ಬಟ್ಟೆ ಇದ್ದರೆ
ಕೊಡಲು ಒಳಬನ್ನಿ -
ಎಂದರು ಸ್ಲಮ್ ಹೆಂಗಸರು

ಮೌನ-ಕಾವ್ಯ

ಯು.ಎನ್.ಬಾಲಕೃಷ್ಣ

ಕೈಯಲ್ಲಿನ ಶಿಶುವನ್ನು
ಚುಂಬಿಸುವ ಹುಡುಗಿ;
ಎವೆಯಿಕ್ಕದೇ ನೋಡುವ
ಹುಡುಗ.
ಇಬ್ಬರ ನಡುವಿನ
ಮೌನಕ್ಕೆ
ಕಾವ್ಯ ಕಳೆ ಕಟ್ಟುತ್ತದೆ.

ಕನ್ನಡಿತಿ

ಬಾಲಶೇಖರ ಬಂದಿ

ನನ್ನ ಒಡತಿ
ಅಚ್ಚ ಕನ್ನಡಿತಿ.
ಹೇಗೆಂದರೆ
ಅವಳಿಗೆ
ಕನ್ನಡಿ ಎಂದರೆ ಬಲೂ ಪ್ರೀತಿ

ಅಶಾಂತಿ

ಕೆ. ಬಿ. ಬ್ಯಾಳಿ

ಶಾಂತಿಯ ತಲೆಗೆ
ಬೆಂಕಿ ಬಿದ್ದಿದೆ.
ಫೈರ್ ಬ್ರಿಗೇಡಿಗೆ ಫೋನು ಮಾಡಲು
ಎಲ್ಲಾ ಫೋನಿನಲ್ಲಿ ಅಳುವ ಧ್ವನಿ.
ಎಲ್ಲಾ ಲೈನ್
ಎಂಗೇಜ್!

ಮಹಿಮೆ

ಬಿಮೆಲ್ ಕಂಪಲಪ್ಪ

ಬಿನ್ನಹಕ್ಕೆಂದು
ಕರೆಯಲು ಹೋದಾಗ
ಬರಲೊಲ್ಲದ
ಐನೋರು
ಆ ಮೇಲೆ ಬಂದರಂತೆ
ಅಪ್ಪ
ಅವರ ಜೇಬಿನಲ್ಲಿಟ್ಟಾಗ
ಐನೂರು.

ಹೊಟ್ಟೇಬಾಕ

ಎಸ್. ಟಿ. ಭಾಗ್ಯಲಕ್ಷ್ಮಿ

ಭೂಮಿಯ ಮೇಲಿರುವ
ಪ್ರಾಣಿಗಳನ್ನೆಲ್ಲಾ ತಿಂದು ತೇಗಿರುವ
ಹೊಟ್ಟೇಬಾಕ ಮನುಷ್ಯ
ಬರೆಯಲು ಹೊರಟಿದ್ದಾನೆ
ಬೇರೆ ಗ್ರಹಗಳಲ್ಲಿನ
ಜೀವ ರಾಶಿಗಳ ಭವಿಷ್ಯ

ಉಡುಗೊರೆ

ಭಾರತಿ ಪಾಟೀಲ

ಮೂರನೆಯ ಹೆಂಡತಿಯ
ಮದುವೆಯಾದ ಮುದುಕಪ್ಪನಿಗೆ
ಬಂದ ಉಡುಗೊರೆಗಳೋ
ಲೆಖ್ಖವಿಲ್ಲದಷ್ಟು.
ಉಪಯೋಗಕ್ಕೆ ಬಂದದ್ದು
ಬರೀ ಹಲ್ಲು ಸೆಟ್ಟು.

ವಿಮರ್ಶೆ

ಎ.ಎಸ್.ಮಕಾನದಾರ

ನಿಮ್ಮ ಕಾವ್ಯ
ಪರಿಪಕ್ವವಾಗಿ ಬೆಂದಿಲ್ಲ
ಎಂದ ವಿಮರ್ಶಕ.
ಕಾವ್ಯಕ್ಕೆ
ಕಡ್ಡಿ ಗೀರಿ ಕಾವು ನೀಡಿದ
ಸಾಹಿತಿ.

ಕರುಣೆ

ಹಾ.ರಾ.ರಂಗನಾಥ

ಗಿಡವ ನೆಟ್ಟೆ
ನೀರು ಗೊಬ್ಬರ ಕೊಟ್ಟೆ
ಹೆಮ್ಮರವಾಗಿ ನೀ ನಮಗೆ
ನೆರಳು ಕೊಟ್ಟೆ
ಪ್ರತಿ
ಫಲವೂ ಕೊಟ್ಟೆ. ಅಯ್ಯೋ
ಹಣೆಬರಹವೇ.
ನಮ್ಮಿಂದಲೇ ನಿನಗೆ
ಕೊನೆಗೂ ಕೊಡಲಿ ಪೆಟ್ಟೇ?

ಕನ್ನಡ ಅಂಕಿ

ಜಿ.ಕೆ.ಎಲ್. ರಾಜನ್

ನಮಗೆ ಸೀಮೆ ಎಣ್ಣೆ ಕೊಡುವ
ವ್ಯಾಪಾರಿ ಮೋಸಗಾರ ಗೊತ್ತಾ?
ಅಳತೆಯಲ್ಲಿ ಮೋಸ
ಚಿಲ್ಲರೆಯಲ್ಲಿ ಖೋತಾ.
ಆದರೆ ಒಂದರಲ್ಲಿ ಅವನ ಬಗ್ಗೆ ಗೌರವ.
ಕಾರಣ: ಲೆಕ್ಕ ಬರೆಯುವಾಗ ಅವನು
ಕನ್ನಡ ಅಂಕಿ ಬಳಸುತ್ತಾನೆ!

ತಪ್ಪುಗಳು

ರೂಪ ಹಾಸನ

ಬಾಲ್ಯದಲ್ಲಿ ಅರಿಯದೇ
ಮಾಡಿದ ತಪ್ಪುಗಳು
ಯೌವನದಲ್ಲಿ ಅರಿತೂ
ಮಾಡಿದ ತಪ್ಪುಗಳು
ಮಧ್ಯ ವಯಸ್ಸಿನಲ್ಲಿ
ಮಾಡಲೇಬೇಕಾದ ತಪ್ಪುಗಳು
ವೃದ್ಧಾಪ್ಯದ ಕೊನೆಗಳಿಗೆಯಲ್ಲಿ
ಎಣಿಸಿ ಗುಣಿಸಲಿಕ್ಕೆ
ಎಷ್ಟೊಂದು ತಪ್ಪುಗಳು!

ಸಂಧಿ

ವೀರೇಶ ಎಸ್.ಸೊಪ್ಪಿಮಠ

ಗೆಳತಿ, ಭಾವನೆಗಳಲಿ ನಾ ಬಂಧಿ
ನಾಲ್ಕು ಗೋಡೆಗಳ ಮಧ್ಯೆ ನೀ ಬಂಧಿ
ಸೇರಲು ನಮಗಿಲ್ಲ, ಸಂಧಿ

ಮದುವೆಗೆ ಮುಂಚೆ ಸೇರಿದರೆ
ಏನೆಂದಾರು ಮಂದಿ?

ಭಯಾ-ಗ್ರಫಿ

ಎಸ್. ಜಿ. ಶಿವಶಂಕರ

ಹತ್ತಕ್ಕೆ ಸುತ್ತ
ಆಟ- ಊಟ- ಒಟ
ಇಪ್ಪತ್ತರ ಗರಿ!
ಅಳಿದ ಪರಿ.
ಮೂವತ್ತರ ಸುರಗಿ ನಲವತ್ತರಲಿ ನಲುಗಿ
ಐವತ್ತರಲಿ ಬಾನೆತ್ತರ!
ಅರವತ್ತೂ ಹರಿ... ದಿತ್ತು!
ವಿದೇಶ ರವಾನೆ ಸ್ವದೇಶದ ನಿಶಾನೆ
.... ಮುಂದಿನದು
ದಾಖಲೆಗೆ ಯೋಗ್ಯವೆ?

ಬಿಗಿದ ಭಾಷಣ

ಶಿವಾಜಿ ಜಿ. ಕಾಂಬಳೆ

ನೆರೆದ ಜನರಲ್ಲಿ ತೆರೆದ ಮನದಿಂದ
'ಮನುಷ್ಯನಿಗಿಂತ ಪ್ರಾಣಿಯೇ ಶ್ರೇಷ್ಠ'-
ಎಂದು ಭಾಷಣ ಬಿಗಿದು
ಬೆನ್ನು ತಟ್ಟಿಸಿಕೊಂಡ ಗೆಳೆಯನಿಗೆ
'ಲೇ ಕತ್ತೆ' - ಎಂದು ಬೈದರೆ
ನನ್ನನ್ನೇ ಒದೆಯಬೇಕೆ?

ಮೇರಾ ಭಾರತ್ ಮಹಾನ್(?)

ಶ್ರೀನಿವಾಸ್ ವಿ. ಸುತ್ರಾವೆ

ನಮ್ಮ ಜನರಿಗೆ
ಬೇಕು
ಸಾವಿರಾರು ದೇಗುಲಗಳು
ಮರೆತರೇಕೆ ಇವರು
ಬಡವರ ಹಸಿದ ಹೊಟ್ಟೆಗಳು?
ನಮ್ಮ ದೇಶಕ್ಕಿರುವುದು ಎರಡು ಶಾಪ:
ಒಂದು ಭ್ರಷ್ಟಾಚಾರದ ಪಾಪ
ಇನ್ನೊಂದು ಕಸದ ಕೂಪ.

ಅಂತರ - ದೇಶಾಂತರ

ಸತೀಶಾರಾಧ್ಯ ಕೂನೂರು

ಒಂದು ಮಗುವಿಗೂ ಇನ್ನೊಂದಕ್ಕೂ
ಇರಬೇಕಂತೆ
ಅಂತರ.
ಅದಕ್ಕೆಂದೇ
ಎರಡು ವರ್ಷಕೊಮ್ಮೆ ಹೋಗುತ್ತಾರೆ
ನನ್ನವರು
ದೇಶಾಂತರ.

ಸ್ವಾತಿ ಮುತ್ತು

ಸರ್ವಮಂಗಳ ಜಿ.

ನನ್ನ ಮೈಬಣ್ಣ ಕಪ್ಪು
ಆದರೂ ನಿನ್ನ ಪ್ರೀತಿಯ ಮಳೆಯಲ್ಲಿ ಮಿಂದು
ಸ್ವಾತಿ ಮುತ್ತಾಗಬಯಸಿದವಳಿಗೆ
ಸಿಕ್ಕಿದ್ದು ನಿನ್ನ
ತೆರೆದ ತೋಳಿನ ಕಪ್ಪೆ ಚಿಪ್ಪು

ಚೈತ್ರದಂತೆ

ಎಚ್.ಕೆ.ಬಿ.ಸ್ವಾಮಿ, ಸೊರಬ

ಹುಡುಗಿ, ನಿನ್ನ ಆಗಮನ
ಗ್ರೀಷ್ಮದ ಉರಿಗೆ ಒಣಗಿ
ಬಾಯ್ದೆರೆದು
ಮುಗಿಲಿಗೆ ನೆಟ್ಟ ಕೆಂಗಣ್ಣಿಗೆ
ತಂಪೆರೆಯಲು ಬರುವ
ಚೈತ್ರದಂತೆ

ಪತಿವ್ರತೆ

ಸುನಂದಾ ಹಾಲಭಾವಿ

ನಮ್ಮ ಸ್ತ್ರೀವಾದಿ ನಾರಿ
ಸೀತೆಗಿಂತಲೂ ಒಂದು ಹೆಜ್ಜೆ ಮುಂದು.

ಅಗ್ನಿ ಪರೀಕ್ಷೆಗೆ ನೂಕಿದಾಗ
ಅವನನ್ನೇ ತಬ್ಬಿದಳು
ಬಿಟ್ಟು ಹೋಗೆನೆಂದು.

ಗೆಳೆತನ

ಹಿನ್ನಕ್ಕಿ ಚಂದ್ರಶೇಖರ

ಝುಳ ಝುಳನೆ ಹರಿಯುವ ನದಿ
ಪಿಳಪಿಳನೆ ಹೊಳೆಯುವ ಕಣ್ಣು
ಒಲುಮೆಯ ಗೆಳೆತನ ಕಂಡಾಗ
ಮನ ಹರಿದಿತ್ತು
ಬೆಟ್ಟದ ಸೋಪಾನದ ಕಡೆಗೆ

ಬಹುಮಾನಿತರ ವಿಳಾಸಗಳು

ಅದೀಬ್ ಅಖ್ತರ್	- ಕೇರಾಫ್ ಖಾನ್ ಮೊಹಮ್ಮದ, ಬನ್ನೂರು (ಮೈಸೂರು) ೫೭೧ ೧೦೧.
ಗೀತಾ ಹೆಗಡೆ	- ಇ/ಮ ಜಿ.ಎನ್.ಹೆಗಡೆ, ಮುಖ್ಯ ರಸ್ತೆ, ಸಿದ್ದಾಪುರ (ಉ.ಕ) ೫೮೧ ೩೫೫.
ತುರುವೇಕೆರೆ ಪ್ರಸಾದ	- ಪಂಚವಟಿ, ೭೦೦, ೩ನೇ ವಿಭಾಗ, ಗಾಂಧಿನಗರ, ತುರುವೇಕೆರೆ (ತುಮಕೂರು) ೫೭೨ ೨೨೭
ಡಾ.ಅರಕಲಗೂಡು ನೀಲಕಂಠಮೂರ್ತಿ	- ನಂ.೪೨೮, ದಿ ಸರ್ಚ್, ವಿಶ್ವೇಶ್ವರ ನಗರ, ಮೈಸೂರು-೫೭೦ ೦೦೮
ಬಿ.ಎಂ.ಗುರುಸ್ವಾಮಿ	- ಆಂಗ್ಲ ಉಪನ್ಯಾಸಕ, ೪೨೩, ೬ನೇ ವಾರ್ಡ್, ಸರಕಾರಿ ಆಸ್ಪತ್ರೆ ಸಿಂಭಾಗ, ಕೊಟ್ಟೂರು (ಬಳ್ಳಾರಿ) ೫೮೩ ೧೩೪
ಡಾ.ಗುಂಡಣ್ಣ ಕಲಬುರ್ಗಿ	- ಕನ್ನಡ ಉಪನ್ಯಾಸಕ, ಕಲಾ ಮತ್ತು ವಾಣಿಜ್ಯ ಕಾಲೇಜ, ಮೂಡಲಗಿ (ಬೆಳಗಾವಿ) ೫೯೧ ೩೧೨
ದಿನೇಶ ಮಾದೇನಹಳ್ಳಿ	- ಸಮುದಾಯ ಸಂಘಟಕರು, ಎಚ್‌ಜಿಎಸ್ ಆರ್‌ವೈ, ಬೆಂ.ಮ.ಪಾಲಿಕೆ, ಕ್ರಾಂತಿ ಕವಿ ಸರ್ವಜ್ಞ ರಸ್ತೆ, ಶ್ರೀರಾಮಪುರಂ, ಬೆಂಗಳೂರು-೫೬೦ ೦೨೧.
ನಾಗವೇಂದ್ರ ಸ್ವಾಮಿ ಚಿದರವಳ್ಳಿ	- ೨೩೫, ಇಡಬ್ಲ್ಯೂಎಸ್, ೨ನೇ ಹಂತ, ೨ನೇ ಮೇನ್, ಬಸವೇಶ್ವರ ನಗರ, ಬೆಂಗಳೂರು-೫೬೦ ೦೭೯.
ಮಲ್ಲಿಕಾರ್ಜುನಗೌಡ ತೂಲಹಳ್ಳಿ	- ತೂಲಹಳ್ಳಿ (ಕೂಡ್ಲಿಗಿ-ಬಳ್ಳಾರಿ) ೫೮೩ ೧೩೬
ಮಾಧವಿ ಭಂಡಾರಿ ಕೆರೆಕೋಣ	- ಕೆರೆಕೋಣ, ಅರೆ ಅಂಗಡಿ (ಉ.ಕ) ೫೮೧ ೪೩೦
ವಿಜಯಕಾಂತ ಪಾಟೀಲ	- ವಕೀಲರು, ಕ್ಯಾಸನೂರು, ಚಿ.ಹೊಸೂರು (ಹಾವೇರಿ) ೫೮೧ ೧೦೪
ವೇದಾರಾಣಿ ಸೊಲಬಕ್ಕನವರ	- ಇಂಗ್ಲಿಷ್ ಉಪನ್ಯಾಸಕಿ, ಕಲಾನಗರಿ, ಹುಲಸೋಗಿ (ಶಿಗ್ಗಾವಿ-ಹಾವೇರಿ)

ಡಾ.ಸಿ.ಪಿ.ಸಿದ್ಧಾಶ್ರಮ - ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬.

ಅಶೋಕ ಜೋಶಿ - ವ್ಯಂಗ್ಯ ಚಿತ್ರಕಾರ, ಸಂತೋಷ, ಬಿ-೧೩೬, ತೇಜಸ್ವಿನಗರ, ಧಾರವಾಡ ೫೮೦ ೦೦೨

ಎಫ್. ಅಸದುಲ್ಲಾ ಬೇಗ್ - ಫರೀದ ಮಂಜಿಲ್, ಗಾಂಧಿ ಬಜಾರ, ಶಿವಮೊಗ್ಗ ೫೭೭ ೨೦೨

ಜಿ.ಎಸ್.ಉಬರಡ್ಕ - ಕಾರ್ತಿಕ, ದೊಡ್ಡತೋಟ (ಸುಳ್ಯ-ದ.ಕ) ೫೭೪ ೨೪೮

ಸಿ.ಎನ್.ಗೋವಿಂದರಾವ - ೧೫/೨, ೨ನೇ ಕ್ರಾಸ್, ಚಿಕ್ಕಣ್ಣ ಗಾರ್ಡನ್, ಚಾಮರಾಜ ಪೇಟೆ, ಬೆಂಗಳೂರು-೫೬೦ ೦೧೮.

ದೀಪಾ ಹಿರೇಗುತ್ತಿ - ಎಕ್ಕಂಬಿ (ಶಿರಸಿ-ಉ.ಕ) ೫೮೧ ೩೫೮

ಕೆ.ಆರ್.ಪ್ರೇಮಲೀಲಾ - ಹಂಸಧ್ವನಿ, ೩೯/ಎ, ೮ನೇ ಮೇನ್, ೫ನೇ ಕ್ರಾಸ್, ಕೆ.ಎಚ್.ರೋಡ, ಕುವೆಂಪು ನಗರ, ಮೈಸೂರು ೫೭೦ ೦೨೩

ಯು.ಎಸ್.ಬಾಲಕೃಷ್ಣ - ಹೊಸ ಬಾವಿ ಹತ್ತಿರ, ಹುಲಿಗೆಮ್ಮನ ಗುಡಿ, ಸುರಪುರ (ಗುಲಬರ್ಗಾ) ೫೮೫ ೨೨೪

ಬಾಲಶೇಖರ ಬಂದಿ - ಹಿರಿಯ ಗ್ರಂಥಪಾಲಕ, ಕಲಾ ಮತ್ತು ವಾಣಿಜ್ಯ ಕಾಲೇಜು, ಮೂಡಲಗಿ (ಬೆಳಗಾವಿ) ೫೯೧ ೩೧೨

ಕೆ.ಬಿ.ಬ್ಯಾಳಿ - ಮುಖ್ಯೋಪಾಧ್ಯಾಯರು, ಶ್ರೀ ಗವಿಸಿದ್ಧೇಶ್ವರ ಹೈಸ್ಕೂಲ, ಕುಕನೂರು (ರಾಯಚೂರು) ೫೮೩ ೨೩೨

ಬಿಮೆಲ್ ಕಂಪಲಪ್ಪ - ೨೨೬೬/೪, ೫ನೇ ಮೇನ್, ರಾಮಮಂದಿರ ರಸ್ತೆ, ವಿನಾಯಕ ನಗರ, ಮೈಸೂರು ೫೭೦ ೦೧೨.

ಎಸ್.ಟಿ.ಭಾಗ್ಯಲಕ್ಷ್ಮಿ - ೧೧೦೭, ೪ನೇ ಕ್ರಾಸ್, ೧೦ನೇ ಮೇನ್, ಆರ್.ಪಿ.ಸಿ. ಲೇಔಟ್, ಬೆಂಗಳೂರು ೫೬೦ ೦೪೦

ಭಾರತಿ ಪಾಟೀಲ - ಶ್ರೀಗಿರಿ, ಕಲ್ಯಾಣನಗರ, ಸಿಂದಗಿ (ಬಿಜಾಪುರ) ೫೮೬ ೧೨೮

ಎ.ಎಸ್.ಮಕಾನದಾರ - ನ್ಯಾಯಾಂಗ ಇಲಾಖೆ, ಸವಣೂರು (ಹಾವೇರಿ) ೫೮೧ ೧೧೮

ಹಾ.ರಾ.ರಂಗನಾಥ - ಅಂಚೆ ನೌಕರ, ಚಿನ್ನಿಕಟ್ಟೆ (ಹೊನ್ನಾಳಿ-ದಾವಣಗೆರೆ) ೫೭೭ ೨೨೫

ಜಿ.ಕೆ.ಎಲ್.ರಾಜನ್ - ಆರ್-೨೮, ೩ನೇ ಟೆಂಪಲ್ ರಸ್ತೆ, ೧೫ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು ೫೬೦ ೦೦೩.

ರೂಪ ಹಾಸನ - ಇ/ಮ, ಎಚ್.ವಿ.ನಾಗಚಂದ್ರ, ೩೫೮೬, ಈಶ್ವರ ಗುಡಿ ಬೀದಿ, ಹಾಸನ ೫೭೩ ೨೦೧

ವೀರೇಶ ಎಸ್.ಸೊಪ್ಪಿಮಠ - ಇ/ಗ, ವೈ.ಮಲ್ಲಪ್ಪ, ಮೇದಾರ ಓಣಿ, ಸುರಪುರ (ಗುಲಬರ್ಗಾ) ೫೮೫ ೨೨೪

ಎಸ್.ಜಿ.ಶಿವಶಂಕರ - ಶಿವಲತ, ೫೧೭೭, ಎಚ್.ಟಿ.ಜೋಡಿ ರಸ್ತೆ, ವಿಜಯನಗರ, ೨ನೇ ಹಂತ, ಮೈಸೂರು ೫೭೦ ೦೧೭.

ಶಿವಾಜಿ ಜಿ.ಕಾಂಬಳೆ - ೨೪, ಮಲಪ್ರಭಾ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩

ಶ್ರೀನಿವಾಸ ಎ. ಸುತ್ರಾವೆ - ೧೬೪೬/೧೮ (ಮಹಡಿ), ವಿದ್ಯಾನಗರ, ದಾವಣಗೆರೆ ೫೭೭ ೦೦೫.

ಸತೀಶಾರಾಧ್ಯ ಕೂನೂರು - ಮಂಗಳ ಕಲಾ ಸಾಹಿತ್ಯ ವೇದಿಕೆ, ನಿಡಗಲ್ಲು ಜನತಾ ಕಾಲನಿ, ಟಿ.ಬೇಕುಪ್ಪೆ (ಕನಕಪುರ-ಬೆಂಗ್ರಾ) ೫೬೨ ೧೧೩.

ಸರ್ವಮಂಗಳ ಜಿ. - ಔಟ್‌ಹೌಸ್, ಚಿತ್ರಕೂಟ, ಹೊಸಬೀದಿ, ಕೋಟೆ, ಕನಕಪುರ (ಬೆಂಗ್ರಾ) ೫೬೨ ೧೧೭

ಎಚ್.ಕೆ.ಬಿ.ಸ್ವಾಮಿ - ಶ್ರೀ ಗುರು ಪ್ರಿಂಟರ್ಸ್, ನಾಮದೇವಗಲ್ಲಿ, ಸೊರಬ (ಶಿವಮೊಗ್ಗ) ೫೭೭ ೪೨೯.

ಸುನಂದಾ ಹಾಲಭಾವಿ - ಹಟ್ಟೀಹೊಳಿಗಲ್ಲಿ, ಶಹಾಪುರ, ಬೆಳಗಾವಿ ೫೯೦ ೦೦೧

ಹಿನ್ನಕ್ಕಿ ಚಂದ್ರಶೇಖರ - ಇ/ಮ, ಬಸವಯ್ಯ, ಹೆನ್ನಾಗರ (ಬೆಂ.ನಗರ ಜಿಲ್ಲೆ) ೫೬೨ ೧೦೬.

ಮಧ್ಯಮ ವರ್ಗ : ಒಂದು ಚಿಂತನೆ

ಜಿ. ರಾಮಕೃಷ್ಣ

ಸಮಾಜವನ್ನು ಅರ್ಥಮಾಡಿಕೊಳ್ಳುವುದರಲ್ಲಿ, ಹೋರಾಟಗಳನ್ನು ರೂಪಿಸುವಲ್ಲಿ ಮತ್ತು ರಾಜ್ಯಪ್ರಭುತ್ವದ ಸ್ವರೂಪವನ್ನು ಗುರುತಿಸುವಲ್ಲಿ ವರ್ಗಗಳನ್ನು ಆಧರಿಸಿದ ವಿಶ್ಲೇಷಣೆಗೆ ಮಹತ್ವದ ಸ್ಥಾನವಿದೆ. ಮಾರ್ಕ್ಸ್‌ಗೂ ಆತನ ಬೇರೆ ಸಮಕಾಲೀನ ಸಮಾಜ ವಿಜ್ಞಾನಿಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಸಮಾಜ ವಿಕಾಸದ ಹಾದಿಯಲ್ಲಿ ವರ್ಗಹೋರಾಟದ ಪಾತ್ರವನ್ನು ಮಾರ್ಕ್ಸ್ ಗುರುತಿಸುವಂತೆ ಬೇರೆಯವರು ಗುರುತಿಸಿರುವುದಿಲ್ಲ. ಕಮ್ಯೂನಿಸ್ಟ್ ಪ್ರಣಾಳಿಕೆಯ ಮೊದಲ ವಾಕ್ಯದಲ್ಲೇ ಮಾರ್ಕ್ಸ್ ಮತ್ತು ಏಂಗಲ್ಸ್ ಚರಿತ್ರೆಯುದ್ದಕ್ಕೂ ವರ್ಗ ಹೋರಾಟಗಳು ನಿರಂತರವಾಗಿ ಹೇಗೆ ನಡೆಯುತ್ತಾ ಬಂದಿವೆಯೆಂಬುದನ್ನು ದಾಖಲು ಮಾಡಿದ್ದಾರೆ. ಇಂತಹ ಹೋರಾಟಗಳಿಂದಾಗಿಯೇ ಸಮಾಜವು ಗುಣಾತ್ಮಕವಾಗಿ ವಿಕಾಸ ಹೊಂದುತ್ತಾ ಹೋಗುತ್ತದೆ. ಆಗೊಂದು ಈಗೊಂದು ಸುಧಾರಣೆಯಾಗಿ ಸಮಾಜ ಬದಲಾಗುವುದಕ್ಕೂ ಸಮಾಜವು ಮೂಲಭೂತವಾಗಿ ಬೇರೊಂದು ಹಂತವನ್ನು ತಲುಪುವುದಕ್ಕೂ ವ್ಯತ್ಯಾಸವಿದೆ. ಇಂತಹ ಬದಲಾವಣೆಯನ್ನು ಕ್ರಾಂತಿಕಾರಕ ಎನ್ನುತ್ತೇವೆ. ಅಂದರೆ, ಸಮಾಜದಲ್ಲಿನ ವ್ಯಕ್ತಿಗಳ ನಡುವಣ ಸಂಬಂಧಗಳಲ್ಲಿ ತೀರಾ ಹೊಸದಾದ್ದು ಏನೋ ಜನ್ಮ ತಾಳಿದೆ, ಎಂದರ್ಥ. ಆದ್ದರಿಂದಲೇ ಅದು ಗುಣಾತ್ಮಕ ಬದಲಾವಣೆ ಎನಿಸಿಕೊಳ್ಳುವುದು. ಸಾವಿರ ಜನ ಗುಲಾಮರಿದ್ದ ಕಡೆ ಆ ಸಂಖ್ಯೆ ಐನೂರಕ್ಕೆ ಇಳಿಯುವಂತಹ ಬದಲಾವಣೆಯೂ ಬದಲಾವಣೆಯೇ. ಆದರೆ ಅಲ್ಲಿ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ ಉಂಟಾಗಿಲ್ಲ. ಸಂಖ್ಯೆ ಏರಿಳಿತಗಳು ಯಾವುದೋ ಒಂದು ಹಂತವನ್ನು ತಲುಪಿ ಅದನ್ನು ಮೀರಿದಾಗ ಮಾತ್ರವೇ ಗುಣಾತ್ಮಕ ಬದಲಾವಣೆ ಉಂಟಾಗಲು ಸಾಧ್ಯ. ನೀರನ್ನು ಬಿಸಿ ಮಾಡುತ್ತಾ ಹೋದಂತೆ ಅದು ನೂರು ಡಿಗ್ರಿ ಸೆಂಟಿಗ್ರೇಡ್ ತಾಪಮಾನವನ್ನು ಮುಟ್ಟಿದಾಗ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತದೆ. ಅಲ್ಲಿಯವರೆಗೆ ದ್ರವವಾಗಿದ್ದ ವಸ್ತುವು ಈಗ ಅನಿಲವಾಗಿ ಮಾರ್ಪಟ್ಟಿದೆ. ಇಂತಹ ಗುಣಾತ್ಮಕ ಬದಲಾವಣೆಯು ಮಾನವ ಸಮಾಜದಲ್ಲೂ ಆಗುತ್ತದೆ. ಇತಿಹಾಸದ ಅಧ್ಯಯನ ಮಾಡಿದರೆ ಯಾವ ಯಾವ ಹಂತಗಳಲ್ಲಿ ಎಂತೆಂತಹ ಗುಣಾತ್ಮಕ ಮಾರ್ಪಾಟುಗಳು ಉಂಟಾದುವೆಂದು ತಿಳಿಯಲು ಸಾಧ್ಯ.

ಮಾರ್ಕ್ಸ್ ಮತ್ತು ಏಂಗಲ್ಸ್ ಅವರ ಪ್ರಬುದ್ಧ ಚಿಂತನೆಯಲ್ಲಿ ಮೂಡಿಬಂದ ತಿಳಿವಳಿಕೆಗಳಲ್ಲಿ 'ವರ್ಗ' ಮತ್ತು 'ವರ್ಗ ಹೋರಾಟ' ಎಂಬುವು ಅಸಮಾನ್ಯವಾದವು- ಬೇರೆಯವರು ವರ್ಗ ಎಂಬ ಪದವನ್ನು ಬಳಸಿದಾಗ ಅದು ಕೇವಲ ಗುಂಪು ಎಂಬರ್ಥದಲ್ಲಿ ಬರಬಹುದು. ಆದರೆ ಮಾರ್ಕ್ಸ್‌ವಾದದಲ್ಲಿ ಅದಕ್ಕೆ ವಿಶಿಷ್ಟವಾದ ಅರ್ಥವೊಂದಿದೆ. ತರ್ಕಶಾಸ್ತ್ರದಲ್ಲಿ

ಪದಾರ್ಥಗಳನ್ನು ವಿಂಗಡಿಸುವಾಗ ಪದಾರ್ಥದ ವಿಶಿಷ್ಟ ಲಕ್ಷಣಗಳ ಆಧಾರವು ಪ್ರಮುಖವಾಗಿರುತ್ತದೆ. ಒಂದು ಗೋವಿನ 'ಗೋತ್ವ' ಅದನ್ನು ಬೇರೆಲ್ಲ ಪದಾರ್ಥಗಳಿಂದ ಭಿನ್ನೈಸುತ್ತದೆ. ಗೋತ್ವ ಲಕ್ಷಣವಿರುವುವೆಲ್ಲಾ 'ಗೋ' ಎಂಬ ಹೆಸರನ್ನು ಪಡೆಯುತ್ತವೆ. ಗೋವುಗಳು ಹತ್ತೇ ಇರಬಹುದು ಅಥವ ಅಸಂಖ್ಯವಾಗಿರಬಹುದು; ಆದರೆ ಲಕ್ಷಣದ ದೃಷ್ಟಿಯಿಂದ ಅವೆಲ್ಲಾ ಒಂದೇ ವರ್ಗದವು. ಹಾಗೆಯೇ ಮನುಷ್ಯ, ಮರ, ಮೇವು, ಯಾವುದನ್ನು ಬೇಕಾದರೂ ವರ್ಗೀಕರಿಸಬಹುದು. ವರ್ಗಗಳ ವ್ಯಾಖ್ಯಾನವನ್ನು ನೀಡುತ್ತಾ ಲೆನಿನ್ ಹೀಗೆನ್ನುತ್ತಾರೆ: ''ಅಧಿಕ ಪ್ರಮಾಣದ ವ್ಯಕ್ತಿಗಳನ್ನೊಳಗೊಂಡು ಗುಂಪು ಗಳಾಗಿರುವುದು ವರ್ಗ ಎನಿಸಿಕೊಳ್ಳುತ್ತದೆ. ಚಾರಿತ್ರಿಕವಾಗಿ ಸಾಮಾಜಿಕ ಉತ್ಪಾದನೆಯು ಒಂದೊಂದು ಹಂತದಲ್ಲಿ ಒಂದೊಂದು ರೀತಿಯಲ್ಲಿರುತ್ತದೆ. ಉತ್ಪಾದನಾ ಸಾಮಗ್ರಿ ಗಳೊಂದಿಗೆ ವ್ಯಕ್ತಿಯ ಸಂಬಂಧ ಎಂತಹುದು ಎಂಬುದನ್ನಾಧರಿಸಿ ವರ್ಗಗಳು ಭಿನ್ನವಾಗಿರುತ್ತವೆ. ಆ ಸಂಬಂಧಗಳು ಸ್ಥಿರವಾದುವಾಗಿರಬಹುದು, ಕಾನೂನಿನಿಂದ ನಿಗದಿತವಾಗಿರಬಹುದು. ದುಡಿಮೆಯು ಸಾಮಾಜಿಕವಾಗಿ ಸಂಘಟಿತವಾದಾಗ ವ್ಯಕ್ತಿಯ ಸ್ಥಾನ ಏನಾಗಿರುತ್ತದೋ ಅದು ಅವನ ವರ್ಗವನ್ನು ಸೂಚಿಸುತ್ತದೆ. ಸಹಜವಾಗಿಯೇ ಈ ಸಂಬಂಧಗಳ ಪರಿಣಾಮವಾಗಿ ವ್ಯಕ್ತಿಗೆ ಲಭ್ಯವಾಗುವ ಸಾಮಾಜಿಕ ಸಂಪತ್ತು ಎಷ್ಟೆಂಬದೂ ತೀರ್ಮಾನವಾಗುತ್ತದೆ; ಅಂತೆಯೇ, ಸಂಪತ್ತನ್ನು ಹೇಗೆ ಕೂಡಿಸಿಕೊಳ್ಳಬಹುದೆಂಬುದು ಕೂಡ ನಿರ್ಧಾರವಾಗುತ್ತದೆ. ಜನರ ಎರಡು ಗುಂಪುಗಳಿದ್ದರೆ, ಅದರಲ್ಲಿ ಒಂದು ಇನ್ನೊಂದರ ದುಡಿಮೆಯ ಫಲವನ್ನು ತನ್ನದಾಗಿಸಿಕೊಳ್ಳುವ ಸಾಧ್ಯತೆ ಇದ್ದರೆ, ಅವನ್ನು ವರ್ಗಗಳು ಎನ್ನಬಹುದು. ಹೀಗೆ ಮಾಡಲು ಸಾಧ್ಯವಾಗುವುದು ಹೇಗೆ? ಆಯಾ ಕಾಲದ ಸಾಮಾಜಿಕ ಆರ್ಥಿಕತೆಯು ಆ ಗುಂಪುಗಳಿಗೆ ಪ್ರತ್ಯೇಕ ಸ್ಥಾನಗಳನ್ನು ಗುರುತಿಸಿ ಕೊಟ್ಟಿರುತ್ತದೆ. ಅದೇ ಅವರ ವರ್ಗ ಪ್ರತ್ಯೇಕತೆ ಎನಿಸಿಕೊಳ್ಳುತ್ತದೆ.''

ತಾತ್ವಿಕವಾಗಿ ವರ್ಗಗಳ ಅಸ್ತಿತ್ವ ಮತ್ತು ಸ್ಥಾನವನ್ನು ತಿಳಿಯಲು ಲೆನಿನ್ ಅವರ ಈ ವಿಷದೀಕರಣ ಸಮಗ್ರವಾಗಿಯೇ ಇದೆ. ಅದನ್ನು ಅನ್ವಯಿಸಿ ವರ್ಗರಚನೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಪಡೆಯಬಹುದು. ಉದಾಹರಣೆಗೆ ಈಗ ಒಂದು ಶತಮಾನದ ಹಿಂದೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಕೂಲಿಯಾಳು ಯಾವ ವರ್ಗಕ್ಕೆ ಸೇರಿದ್ದನೋ ಅದೇ ವರ್ಗಕ್ಕೆ ಇಂದಿನ ಕಾರ್ಖಾನೆಯ ದುಡಿಮೆಗಾರ ಸೇರುತ್ತಾನೆಯೆ? ಇಂದಿನ ಕೆಲಸಗಾರರನ್ನು 'ಕೂಲಿಯಾಳು' ಎಂದು ಕರೆಯಲು ಸಹ ಸಾಧ್ಯವಿಲ್ಲವೆಂದು ಕೆಲವರ ಅಭಿಮತ. ಏಕೆಂದರೆ ಅವನಿಗೆ ಸಾವಿರಾರು ರೂಪಾಯಿಗಳ ವೇತನ ಇದೆ. ಬೇರೆ ಕೆಲವು ಸೌಲಭ್ಯಗಳಿವೆ. ಅವನು ಬಿಳಿಯ ಬಟ್ಟೆ ತೊಡುತ್ತಾನೆ, ಹೊಳಪಿನ ಪಾದರಕ್ಷೆ ಧರಿಸುತ್ತಾನೆ, ಸ್ಕೂಟರಿನಲ್ಲಿ ಕಾರ್ಖಾನೆಗೆ ಹೋಗುತ್ತಾನೆ, ಆದ್ದರಿಂದ ಅವನನ್ನು ದುಡಿಯುವ ವರ್ಗಕ್ಕೆ ಸೇರಿದವನು ಎನ್ನುವುದಕ್ಕಿಂತ ಹೆಚ್ಚಾಗಿ ಮಧ್ಯಮ ವರ್ಗದವನು ಎಂದು ವಿಂಗಡಿಸುವುದು ರೂಢಿಯಲ್ಲಿದೆ.

ಇದಕ್ಕೆಲ್ಲಾ ಲೆನಿನ್ನರ ಸಮಾಧಾನ ಒಂದೇ: ಎಷ್ಟು ಗಂಟೆ ದುಡಿಯುತ್ತಾನೆ, ಯಾವ ವಾಹನ ಬಳಸುತ್ತಾನೆ, ಎಂತಹ ಉಡುಪು ಧರಿಸುತ್ತಾನೆ, ಎಷ್ಟು ಅಧಿಕಾರ ಚಲಾಯಿಸುತ್ತಾನೆ, ಎಷ್ಟು ವೇತನ ಪಡೆಯುತ್ತಾನೆ, ಎಂಬಿತ್ಯಾದಿ ಅಂಶಗಳು ಗುಣಾತ್ಮಕವಾಗಿ ಅವನನ್ನು ಬೇರೆಯುವ ನನ್ನಾಗಿಸುವುದಿಲ್ಲ. ಕೂಲಿಯನ್ನು ವೇತನವೆಂದು ಕರೆದರೂ ಅದು ಕೂಲಿಯೇ! ಐವತ್ತು ರೂಪಾಯಿಯ ಬದಲು ಐನೂರೋ, ಐದು ಸಾವಿರವೋ ಇರಬಹುದು; ಆದರೆ ಉತ್ಪಾದನಾ ಸಂಬಂಧಗಳ ದೃಷ್ಟಿಯಿಂದ ಅವನು ಒಡೆಯನಲ್ಲ. ಅವನೂ ತನ್ನ ದುಡಿಮೆಯ ಶಕ್ತಿಯನ್ನು ಮಾರಿಕೊಂಡು ಜೀವಿಸುವವನೇ ಆಗಿದ್ದಾನೆ. ಆದರೆ ಮಾರುಕಟ್ಟೆಯಲ್ಲಿ ಆ ದುಡಿಮೆಯ ಬೆಲೆ ಜಾಸ್ತಿ, ಅಷ್ಟೆ. ಜೊತೆಗೆ ದುಡಿಮೆಯ ಸ್ವರೂಪದಲ್ಲಿಯೂ ವ್ಯತ್ಯಾಸವಿರಬಹುದು. ಕೈಗಳನ್ನು ಮತ್ತು ಯಂತ್ರಗಳನ್ನು ಬಳಸಿ ಸರಕುಗಳನ್ನು ಉತ್ಪಾದಿಸುವುದರ ಬದಲು ಮಿದುಳು ಮತ್ತು ಬೆರಳುಗಳನ್ನು ಹೆಚ್ಚಾಗಿ ಬಳಸುವ ಕೆಲಸಗಾರರು ಇರಲು ಸಾಧ್ಯ. ಯಾರದೋ ಪರವಾಗಿ ಕೆಲಸಗಾರರ ಮೇಲೆ ನಿಗಾ ಇಟ್ಟು ಉಸ್ತುವಾರಿ ನೋಡಿಕೊಳ್ಳುವ ಕೆಲಸಗಾರನೂ ಇರಬಹುದು. ಮೂಲತಃ ಇವರೆಲ್ಲರ ಲಕ್ಷಣವೂ ಒಂದೇ: ದುಡಿಮೆಯನ್ನು ಮಾರಿಕೊಂಡು ಜೀವನ ನಿರ್ವಹಿಸುವುದು.

ಒಬ್ಬ ಬಂಡವಳಿಗನಿಗೂ ಇನ್ನೊಬ್ಬ ಬಂಡವಳಿಗನಿಗೂ ಇರುವ ವ್ಯತ್ಯಾಸಕ್ಕಿಂತ ಬೇರೆಯದಲ್ಲ ಇದು. ಬಂಡವಾಳದ ಪ್ರಮಾಣದ ದೃಷ್ಟಿಯಿಂದ ಅವರು ಭಿನ್ನರಾಗುವಂತೆ ಕೂಲಿಯನ್ನು ಪಡೆಯುವ ಪ್ರಮಾಣದಲ್ಲಿ ಹೆಚ್ಚು-ಕಡಿಮೆ ಆಗಬಹುದು. ವರ್ಗದ ದೃಷ್ಟಿಯಿಂದ ಅವರೆಲ್ಲಾ ಒಂದೇ. ಆದಾಗ್ಯೂ ವೇತನದ ಆಧಾರದ ಮೇಲೆ ದುಡಿಯುವ ವರ್ಗದ ಕೆಲವರನ್ನು ''ಮಧ್ಯಮ ವರ್ಗ'' ಎಂದು ಪ್ರತ್ಯೇಕಿಸುವ ಪದ್ಧತಿ ಇದೆ. ವೇತನವಲ್ಲದೆ ಬೇರೆ ಕೆಲವು ಅಂಶಗಳಲ್ಲಿಯೂ ಸಾಮಾನ್ಯ ದುಡಿಮೆಗಾರರಿಗಿಂತ ಇವರು ಭಿನ್ನರಾಗಿರುವ ಸಂಭವವಿದೆ.

ಆದರೆ ಅತಿಮುಖ್ಯವಾದ ವಿಷಯವೆಂದರೆ ಉತ್ಪಾದನಾ ವಿಧಾನಗಳಿಗೂ ವರ್ಗಗಳಿಗೂ ನಿರಂತರ ಸಂಬಂಧವಿದೆಯೆಂಬುದು. ಎಂತಹ ಉತ್ಪಾದನಾ ಸಾಧನಗಳಿವೆಯೋ ಅದನ್ನವಲಂಬಿಸಿ ದುಡಿಮೆಯ ಸಾಮಾಜಿಕ ವಿಭಜನೆ ಉಂಟಾಗುತ್ತದೆ. ಒಂದು ಚಾರಿತ್ರಿಕ ಘಟ್ಟದಲ್ಲಿ ಲಭ್ಯವಿರುವ ಉಪಕರಣಗಳು ಒಬ್ಬ ಉತ್ಪಾದಕನಿಗೆ ಅಗತ್ಯವಿರುವ ಪೂರೈಕೆಗಳಿಗಿಂತಲೂ ಹೆಚ್ಚನ್ನು ಉತ್ಪಾದಿಸಲು ಅಸಮರ್ಥವಾದರೆ ಆ ಕಾಲದಲ್ಲಿ ಬೇರೆಯವರ ದುಡಿಮೆಯ ಫಲವನ್ನು ಕಬಳಿಸಿ ಸುಖಜೀವನ ನಡೆಸಲು ಯಾರಿಗೆ ತಾನೆ ಸಾಧ್ಯವಾದೀತು? ಆದ್ದರಿಂದ ಆ ಕಾಲ ಘಟ್ಟದಲ್ಲಿ ಎಲ್ಲರೂ ಅನಿವಾರ್ಯವಾಗಿ ದುಡಿಯಲೇ ಬೇಕು. ಬೇರೆಯವರಿಗೆ ಕೆಲಸ ಕೊಟ್ಟು ತಾನು ತೆಪ್ಪಗೆ ಕೂತು ಉಣ್ಣುವ ಸೌಭಾಗ್ಯ ಆ ಸನ್ನಿವೇಶದಲ್ಲಿ ಯಾರಿಗೂ ಇಲ್ಲ - ಅಂದರೆ, ಇಡೀ ಜನಸಮುದಾಯವು ಒಂದೇ ವರ್ಗಕ್ಕೆ ಸೇರಿದೆ ಎಂದರ್ಥ.

ಪ್ರಾಚೀನ ಭಾರತೀಯ ಸಮಾಜದಲ್ಲಿ ಪ್ರಾರಂಭಿಕ ಋಗ್ವೇದ ಕಾಲೀನ ಸಮಾಜವು ಅಂತಹುದಾಗಿತ್ತು. ವರ್ಗರಹಿತ ಜನಸಮುದಾಯಗಳನ್ನು ಆಗ್ಗೆ 'ಗಣಗಳು' ಎಂದು ಕರೆಯುತ್ತಿದ್ದರು. ಅಲ್ಲಿ ದೈಹಿಕ ಮತ್ತು ಬೌದ್ಧಿಕ ದುಡಿಮೆಗಳಲ್ಲಿ ಅಂತರವಿರಲಿಲ್ಲ - ಒಬ್ಬ ಕವಿ, ಇನ್ನೊಬ್ಬ ಬಡಿಗ - ಆದರೆ ಇಬ್ಬರೂ ಸಮಾನರು ಮತ್ತು ಅವರು ಕವಿತ್ವವನ್ನೂ ಮಾಡುತ್ತಾರೆ, ಬಡಗಿಯ ಕೆಲಸದಲ್ಲೂ ತೊಡಗುತ್ತಾರೆ. ಕೇವಲ ಕವಿತ್ವದಲ್ಲೇ ನಿರತನಾಗುವಂತಹ 'ಬುದ್ಧಿಜೀವಿ' ಅಲ್ಲಿಲ್ಲ. ಆದ್ದರಿಂದಲೇ ಅಲ್ಲಿ ಪ್ರಾರ್ಥನೆ ಮಾಡುವಾಗ ಕೂಡ ಒಬ್ಬನು ತನಗಾಗಿ ಮಾತ್ರವೆ ಏನನ್ನೂ ಬೇಡಿಕೊಳ್ಳುವುದಿಲ್ಲ. ಅವನು ಬೇಡಿಕೊಳ್ಳುವುದು ಯಾವಾಗಲೂ ಎಲ್ಲರಿಗಾಗಿ. ಅವನ ಮತ್ತು ದೇವತೆಯ ನಡುವೆ ಪುರೋಹಿತನೆಂಬ ದಳ್ಳಾಳಿಯೂ ಆ ಕಾಲಘಟ್ಟದಲ್ಲಿ ಇನ್ನೂ ಉದಯಿಸಿಲ್ಲದಿರುವುದು ಗಮನಾರ್ಹವಾಗಿದೆ. ಅವನು ಬರಬೇಕಾದರೆ ಅವನನ್ನು ಪೋಷಿಸುವ ಒಂದು ವರ್ಗ ಬಂದಿರಬೇಕು; ಅದಕ್ಕೆ ಪೂರ್ವಭಾವಿಯಾಗಿ ಉತ್ಪಾದನಾ ಸಾಧನೆಗಳು ಮತ್ತು ಸಂಬಂಧಗಳು ಬದಲಾಗಿರಬೇಕು.

ಈ ಸಾಧನೆಗಳು-ಸಂಬಂಧಗಳು ಸದಾ ವಿಕಸಿಸುತ್ತಲೇ ಇರುತ್ತವೆ. ಏಕೆಂದರೆ ಮನುಷ್ಯ ಸ್ವಭಾವತಃ ಹೊಸ ಹೊಸ ಆಯುಧಗಳ ನಿರ್ಮಾಪಕ. ಯಾವೊಂದು ಉಪಕರಣವೂ ಕೊನೆಯದು ಎಂಬ ಮಾತೇ ಮನುಷ್ಯನ ಅರ್ಥಕೋಶದಲ್ಲಿಲ್ಲ. ಒಂದು ಕೋಲು, ಒಂದು ಕಲ್ಲು, ಒಂದು ಖನಿಜ, - ಏನು ಸಿಕ್ಕಿದರೂ ಅದನ್ನು ಕ್ರಮೇಣ ಮಾರ್ಪಡಿಸುತ್ತಲೇ ಇರುತ್ತಾನೆ. ಅದರೊಂದಿಗೆ ಅದರ ಉತ್ಪಾದನಾ ಸಾಮರ್ಥ್ಯವೂ ಹೆಚ್ಚುತ್ತಾ ಹೋಗಬಹುದು. ಅಂದರೆ, ಉತ್ಪಾದನಾ ಸಲಕರಣೆಗಳು ಮನುಷ್ಯನಿಗೆ ತನ್ನ ಅಂಗಾಂಗಗಳನ್ನು ವೃದ್ಧಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ. ತನ್ನ ಅಂಗಾಂಗಗಳ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುತ್ತಾ ಹೋಗುತ್ತವೆ. ಆದರೆ ಉತ್ಪಾದನೆಗೆ ಉಪಕರಣಗಳು ಮಾತ್ರವೇ ಸಾಲದು - ಅದಕ್ಕೆ ಬೇರೆ ಸಾಮಗ್ರಿಯೂ ಬೇಕು. ಭತ್ತದ ಬೀಜ, ಗದ್ದೆ, ನೀರು, ಗೊಬ್ಬರ ಇವೆಲ್ಲಾ ಇದ್ದಾಗ ದುಡಿಯುವ ಕೈಗಳು ಮತ್ತು ನೇಗಿಲು ಉತ್ಪಾದನಾ ಸಾಮರ್ಥ್ಯವನ್ನು ಹೊಂದುತ್ತವೆ. ಅವಿಲ್ಲದಿದ್ದಾಗ ಇವು ನಿರುದ್ಯೋಗಿಗಳು.

ಹೀಗೆ ಉತ್ಪಾದನಾ ವಿಧಾನ ಮತ್ತು ಸಂಬಂಧಗಳು ಬೆಲೆಯುತ್ತಾ ಹೋದಂತೆ ಸಮಾಜ ರಚನೆಯಲ್ಲಿ ವೈವಿಧ್ಯಗಳು ಬೆಳೆಯುತ್ತಾ ಹೋದಂತೆ ಸಮಾಜ ರಚನೆಯಲ್ಲಿ ವೈವಿಧ್ಯಗಳು ಉಂಟಾಗುವುದು ಸ್ವಾಭಾವಿಕ. ತಾನೂ ಒಂದು ಸಲಕರಣೆ ಎಂಬ ರೀತಿಯಲ್ಲಿ ಜೀವಿಸುವ ಗುಲಾಮ, ಗುಲಾಮನಲ್ಲದಿದ್ದ ಒಡೆಯನ ಊಳಿಗದವನಾಗಿ ಹೊಟ್ಟೆ ಹೊರೆಯುವವನು, ಉತ್ಪಾದನಾ ಸಾಮಗ್ರಿಯ ರೂಪದ ಆಸ್ತಿ ಇಲ್ಲದಿದ್ದಾಗ ದುಡಿಮೆಯೊಂದೇ ಆಸ್ತಿಯಾಗಿದ್ದು ಅದನ್ನು ಕೂಲಿಗಾಗಿ ಮಾರಿ ಜೀವಿಸುವವನು,-ಇವರೆಲ್ಲಾ ಚಾರಿತ್ರಿಕವಾಗಿ ಬೇರೆಬೇರೆ ಹಂತಗಳಿಗೆ ಸೇರುತ್ತಾರೆ. ಅಂತೆಯೇ ಗುಲಾಮರ ಯಜಮಾನ, ಊಳಿಗದವರ ಪ್ರಭು

ಮತ್ತು ಕೂಲಿಯಾಳುಗಳ ಮಾಲೀಕ ಬೇರೆ ಬೇರೆ ಹಂತದವರು - ಅಂದರೆ ಚರಿತ್ರೆಯಲ್ಲಿ ಒಂದು ಗೀರು ಹಾಕಿ ಇಲ್ಲಿಗೆ ಹಳೆಯದು ಮುಗಿಯಿತು, ಹೊಸತು ಆರಂಭವಾಯಿತು ಎನ್ನಲು ಬರುವುದಿಲ್ಲ. ಒಂದು ಕೊನೆಯಾಗುತ್ತಿರುವಾಗಲೇ ಇನ್ನೊಂದು ಹುಟ್ಟಿಕೊಳ್ಳುತ್ತದೆ. ಬಹುಕಾಲ ಎರಡೂ ಒಟ್ಟೊಟ್ಟಿಗೆ ಇರುತ್ತವೆ. ಒಂದರ ಪ್ರಭಾವ-ಪ್ರಮಾಣ ಹೆಚ್ಚು, ಇನ್ನೊಂದರದು ಕಡಿಮೆ, ಅಷ್ಟೆ.

ಸ್ಥೂಲವಾಗಿ ವರ್ಗಗಳು ಹೀಗೆ ಹುಟ್ಟಿಕೊಂಡು ಸಂಕೀರ್ಣವಾಗಿ ಬೆಳೆಯುತ್ತವಾದರೂ ಆಯಾ ಕಾಲಘಟ್ಟಗಳಲ್ಲಿ ನೇರವಾಗಿ ವಿಭಜಿತ ವರ್ಗಗಳಿಗೆ ಸೇರದೆ ಅವನ್ನು ಮೀರಿ ನಿಲ್ಲುವ ಗುಂಪುಗಳು ಇರುತ್ತವೆ. ಉದಾಹರಣೆಗೆ, ಪುರೋಹಿತ-ಅವನು ಭೂಮಾಲೀಕನಂತೆ ಯಜಮಾನ ಆಗಲಾರ; ಊಳಿಗದವನೂ ಅಲ್ಲ. ಯಜಮಾನನ ಭದ್ರತೆಗೆ ಪುರೋಹಿತನ ಕಾಣಿಕೆ ಬಹಳ ಮಹತ್ವದ್ದು. ಅವನು ರಚಿಸಿಕೊಡುವ ಬೌದ್ಧಿಕ-ಸಾಂಸ್ಕೃತಿಕ ವಾತಾವರಣವು ಯಜಮಾನನಿಗೆ ಅನುಕೂಲಕರವಾದದ್ದು. ಒಂದು ರೀತಿಯಲ್ಲಿ ಅದು ಯಜಮಾನ ಪುರೋಹಿತರ ಸಮ್ಮಿಶ್ರ ಸರಕಾರ! ಅಂದಿನ ಪುರೋಹಿತನ ಜಾಗದಲ್ಲಿ ಇಂದು ನಮ್ಮ ಮಾಧ್ಯಮಗಳು, ಸರ್ಕಾರಿ ಪ್ರಚಾರ ಇಲಾಖೆಗಳು, ಶಿಕ್ಷಣ ವ್ಯವಸ್ಥೆಯ ಕೆಲವು ಅಂಗಗಳು, ಎಲ್ಲ ಕೆಲಸ ಮಾಡುತ್ತವೆ. ಅವುಗಳಲ್ಲಿ ಕಾರ್ಯನಿರತರಾಗಿರುವವರು ದುಡಿಮೆಯಿಂದ ಜೀವಿಸುತ್ತಾರೆ. ಆ ಅರ್ಥದಲ್ಲಿ ಅವರು ದುಡಿಯುವವರ ವರ್ಗಕ್ಕೆ ಸೇರುತ್ತಾರೆ. ಅವರ ದುಡಿಮೆಯ ಫಲದ ದೃಷ್ಟಿಯಿಂದ ನೋಡಿದರೆ ಅವರು ಆಳುವವರ ವರ್ಗದ ಕಾಲಾಳುಗಳು. ನಾವು ಮಧ್ಯಮ ವರ್ಗವೆಂದು ವರ್ಣಿಸುವ ಜನರಲ್ಲಿ ಇಂತಹ ಲಕ್ಷಣವನ್ನುಳ್ಳವರ ಸಂಖ್ಯೆ ಹಿಂದೆಂದಿಗಿಂತಲೂ ಈಗ ಜಾಸ್ತಿ ಇದೆ.

ನಮ್ಮ ಮುಂದಿರುವ ಗಂಭೀರ ಪ್ರಶ್ನೆ ಇದು : ಈವರೆಗೆ ಸಮಾಜದಲ್ಲಿ ಆಸ್ತಿಯುಳ್ಳವರು, ಆಸ್ತಿ ಇಲ್ಲದವರು ಎಂಬ ಯಾವ ವಿಭಜನೆಯ ವಸ್ತುಸ್ಥಿತಿಯನ್ನು ನಾವು ನೋಡುತ್ತಾ ಬಂದಿದ್ದೇವೋ ಅದು ಎಷ್ಟು ಕಾಲ ಹೀಗೆಯೇ ಮುಂದುವರಿಯಬೇಕು? ಇಲ್ಲಿ ಆಸ್ತಿಯೆಂದರೆ ಮನೆ, ಬಟ್ಟೆ, ವಾಹನ ಇತ್ಯಾದಿಗಳಲ್ಲ. ಅವು ಅಗತ್ಯ ವಸ್ತುಗಳು. ಅವುಗಳನ್ನು ಹೊಂದಿ ಬೇರೆಯವರ ದುಡಿಮೆಯ ಶಕ್ತಿಯನ್ನು ಸ್ವಂತಕ್ಕೆ ಖರೀದಿಸಲು ಹೊಂದಿ ಬೇರೆಯವರ ದುಡಿಮೆಯ ಶಕ್ತಿಯನ್ನು ಸ್ವಂತಕ್ಕೆ ಖರೀದಿಸಲು ಬರುವುದಿಲ್ಲ. ಈ ರೀತಿಯ ಆಸ್ತಿ ಎಲ್ಲರಿಗೂ ದಕ್ಕುವಂತೆ ಮಾಡಬೇಕಾದ್ದು ತುರ್ತಿನ ಅವಶ್ಯಕತೆ. ಯಾವ ಆಸ್ತಿಯನ್ನು ಹೊಂದಿರುವುದರಿಂದ ಇತರರ ದುಡಿಮೆಯ ಶಕ್ತಿಯನ್ನು ಕೊಂಡು ನಾವು ದುಡಿಯದೆ ಸುಖಜೀವನ ನಡೆಸಲು ಸಾಧ್ಯವೋ ಅಂತಹ ಆಸ್ತಿ ಯಾವುದು? ಉತ್ಪಾದನಾ ಸಾಮಗ್ರಿಗಳು: ಭೂಮಿ, ನೀರು, ಖನಿಜಗಳು, ಕಚ್ಚಾವಸ್ತುಗಳು. ಯಂತ್ರಗಳು, ಇತ್ಯಾದಿ.

ಈ ವಿಧದ ಆಸ್ತಿಯನ್ನು ಖಾಸಗಿಯಾಗಿ ಹೊಂದಿರುವುದು ಸಮಾಜದ ಎಲ್ಲರಿಗೂ ಸಾಧ್ಯವಿಲ್ಲವಾಗಿದೆ. ಅದು ಕೆಲವರಲ್ಲಿ ಅತಿಯಾಗಿ ಶೇಖರಣೆಯಾಗಿದೆ ಮತ್ತು ಬಹಳ

ಜನರಲ್ಲಿ ಇಲ್ಲವೇ ಇಲ್ಲ. ಇದಕ್ಕಿರುವ ಒಂದೇ ವೈಜ್ಞಾನಿಕ ಪರಿಹಾರವೆಂದರೆ ಉತ್ಪಾದನಾ ಸಾಮಗ್ರಿಗಳನ್ನು ಸಾಮುದಾಯಿಕ ಆಸ್ತಿಯನ್ನಾಗಿ ಪರಿವರ್ತಿಸುವುದು. ಅದು ಒಬ್ಬನ ಆಸ್ತಿಯಾಗಿರುವುದರ ಬದಲು ಇಡೀ ಸಮೂಹದ ಆಸ್ತಿಯಾಗಿರುತ್ತದೆ. ಸಮಾಜವಾದದ ಮೊದಲನೆಯ ಸೂತ್ರ ಇದು. ಸಮಾಜದ ಇನ್ನೊಂದು ಮಗ್ಗಲು ನೋಡಿದರೆ ರೈತಾಪಿ ಜನರಲ್ಲಿ ಅಗಧವಾದ ಏರುಪೇರುಗಳಿರುವುದು ಕಾಣುತ್ತದೆ. ಒಂದು ಸ್ತರದರಲ್ಲಿ ಪಾಳೆಗಾರಿಕೆಯ ಚಿಹ್ನೆಗಳು ಇನ್ನೂ ಜೀವಂತವಾಗಿದ್ದರೆ ಇನ್ನೊಂದೆಡೆ ಕೃಷಿಯನ್ನು ಆಧುನಿಕ ಉದ್ದಿಮೆಯ ರೀತಿಯಲ್ಲಿ ನಡೆಸುತ್ತಿರುವುದನ್ನು ನೋಡಬಹುದು. ಒಂದು ಕಡೆ ಜೀತದಾಳುಗಳು, ಇನ್ನೊಂದು ಕಡೆ ಕೃಷಿ ಕ್ಷೇತ್ರದ ಔದ್ಯಮಿಕ ಕೂಲಿಯಾಳುಗಳು. ಅಂದರೆ, ಅನಭಿವೃದ್ಧ ಮತ್ತು ಅತ್ಯಾಧುನಿಕ ಪದ್ಧತಿಗಳು ಪಕ್ಕಪಕ್ಕದಲ್ಲೇ ಅಸ್ತಿತ್ವದಲ್ಲಿವೆ. ಎರಡು ವಿಧಗಳಲ್ಲೂ ಉತ್ಪಾದನೆ ನಡೆಯುತ್ತಿರುವಾಗ ಯಾವುದು ಮೇಲುಗೈ ಸಾಧಿಸುತ್ತದೆಯೆಂಬುದು ಸ್ಪಷ್ಟವಾಗಿಯೇ ಇದೆ. ಕಡಿಮೆ ಭೂಮಿ ಹೊಂದಿರುವವರು ಮತ್ತು ಹಳೆಯ ಉಪಕರಣಗಳ ಬಳಕೆ ಮಾಡುವವರು ಕ್ರಮೇಣ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಾರೆ; ಪಟ್ಟಣಗಳಿಗೆ ಹೋಗಿ ಕೂಲಿ-ನಾಲಿ ಮಾಡಿ ಬದುಕುತ್ತಾರೆ. ಭಾರಿ ಭೂಮಾಲಿಕರು ಇತರರ ಭೂಮಿಯನ್ನು ಕಬಳಿಸುತ್ತಾ ಹೋಗುತ್ತಾರೆ. ಇದು ಹೀಗೇ ಮುಂದುವರಿಯಬೇಕೆ?

ಇದೆಲ್ಲದರ ಹಿನ್ನೆಲೆಯಲ್ಲಿ ನಮ್ಮ ಇಂದಿನ ದುಡಿಯುವ ಜನರ ವಿಭಾಗಗಳನ್ನು ಸ್ಥೂಲವಾಗಿ ಗಮನಿಸಬಹುದು. ಸ್ವಂತ ಉದ್ಯೋಗಗಳಲ್ಲಿ ಇರುವವರನ್ನು ಬಿಟ್ಟರೆ ರೈತರು, ಔದ್ಯಮಿಕ ಕೆಲಸಗಾರರು ಮತ್ತು ಬೇರೆಬೇರೆ ಸೇವೆಗಳಲ್ಲಿ ಕೆಲಸ ಮಾಡುತ್ತಿರುವವರು (ಆಸ್ಪತ್ರೆ, ಶಾಲಾಕಾಲೇಜುಗಳು, ಬ್ಯಾಂಕ್, ಇನ್ಸೂರೆನ್ಸ್, ಸರ್ಕಾರಿ ಕಚೇರಿ, ಇತ್ಯಾದಿ) ಮುಖ್ಯ ವಿಭಾಗಗಳವರು ಎನ್ನಬಹುದು. ಆಡಳಿತಾತ್ಮಕ ಕೆಲಸಗಳಲ್ಲಿರುವವರು, ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ತಂತ್ರಜ್ಞಾನದ ಕ್ಷೇತ್ರದಲ್ಲಿರುವವರು, ಇತ್ಯಾದಿಗಳೆಲ್ಲಾ ನೇರವಾಗಿ ಉತ್ಪಾದನೆಯಲ್ಲಿ ತೊಡಗಿಲ್ಲದಿದ್ದರೂ ಉತ್ಪಾದನಾ ವ್ಯವಸ್ಥೆಯು ಯಥಾವತ್ತಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತಾರೆ. ಮುಖ್ಯವಾಗಿ ಇಂಥವರನ್ನೇ ಮಧ್ಯಮ ವರ್ಗದವರು ಎಂದು ಗುರುತಿಸಲಾಗುತ್ತದೆ.

ಇಂದಿಗೂ ಹಳ್ಳಿ ಮತ್ತು ದಿಲ್ಲಿಗಳ ನಡುವೆ ಅಂತರವಿರುವುದು ಎಲ್ಲರಿಗೂ ತಿಳಿದಿದೆ. ನಗರ ಪ್ರದೇಶಗಳು ತಮ್ಮ ಸುಖಜೀವನಕ್ಕಾಗಿ ಹಳ್ಳಿಗಳನ್ನು ಹೊಸಕಿಹಾಕುತ್ತವೆಂಬ ಮಾತು ಆಗಾಗ್ಗೆ ಕೇಳಿಬರುತ್ತದೆ. ಈ ವಾದದ ಪ್ರಕಾರ ನಗರಗಳು ಹಳ್ಳಿಗಳನ್ನು ಶೋಷಿಸುತ್ತವಾದ್ದರಿಂದ ಮೊದಲು ಹಳ್ಳಿ-ದಿಲ್ಲಿಗಳ ನಡುವೆ ಹೋರಾಟವಾಗಬೇಕು; ಆಮೇಲೆ ಹಳ್ಳಿಗಳಲ್ಲಿ ಆಂತರಿಕ ಹೋರಾಟ ಬೇಕಾದರೆ ಮುಂದುವರಿಸಬಹುದು. ಇದು ತೋರಿಕೆಗೆ ಬಹಳ ರುಚಿಕರ ಮಾತೆಂದು ಕಾಣುತ್ತದೆ. ಆದರೆ ವಾಸ್ತವದಲ್ಲಿ ಹೋರಾಟಕ್ಕೆ

ಇವು ಕೇಂದ್ರಬಿಂದುಗಳಲ್ಲ. ನಗರಗಳಲ್ಲಿರುವವರೆಲ್ಲಾ ಶೋಷಕ ವರ್ಗಕ್ಕೆ ಸೇರುವುದಿಲ್ಲ ಮತ್ತು ಹಳ್ಳಿಯ ಜನರಲ್ಲಿ ಶೋಷಕ ವರ್ಗದವರಿಲ್ಲ ಎನ್ನುವಂತೆಯೂ ಇಲ್ಲ. ಹೇಗೆ ದೈಹಿಕ ಮತ್ತು ಬೌದ್ಧಿಕ ದುಡಿಮೆಗಳನ್ನು ಪರಸ್ಪರ ವಿರೋಧಿಗಳು ಎಂದು ಹೇಳಲಾಗುತ್ತಿತ್ತೋ ಹಾಗೆ ಇಂದು ಹಳ್ಳಿ-ದಿಲ್ಲಿಗಳ ಮಾತು ಬರುತ್ತಿದೆ. ಇದು ಕೃತ್ರಿಮವಾದ ವಿಭಜನೆ ಯೆಂಬುದು ಸ್ಪಷ್ಟವಾಗಿಯೇ ಇದೆ. ಆಯಾ ಗುಂಪುಗಳ ನಡುವಣ ಪ್ರಮುಖ ವ್ಯತ್ಯಾಸಗಳು ಕಡಿಮೆಯಾಗುತ್ತಿದ್ದಂತೆ ಅವುಗಳಲ್ಲಿ ಹೆಚ್ಚು ಏಕತೆ ಮೂಡುತ್ತದೆ ಮತ್ತು ತಮ್ಮ ಸಮಾನ ಸ್ವಭಾವಗಳನ್ನು ಆ ಗುಂಪುಗಳು ಗುರುತಿಸಿಕೊಳ್ಳುತ್ತವೆ.

ಬಹಳ ಸಾಧಾರಣೀಕರಿಸಿ ಹೇಳುವುದಾದರೆ ಒಟ್ಟಾರೆ ಇರುವುದು ಎರಡು ವರ್ಗಗಳು; ಲಾಭವನ್ನು ಹಾಯಾಗಿ ಹಿರಿದುಕೊಳ್ಳುವವರು ಮತ್ತು ಇತರರ ಲಾಭಕ್ಕಾಗಿ ದುಡಿಮೆಯನ್ನು ಮಾರಿಕೊಳ್ಳುವವರು. ಇತ್ತೀಚಿನ ದಶಕಗಳಲ್ಲಿ ವೈಜ್ಞಾನಿಕ-ತಾಂತ್ರಿಕ ಕ್ರಾಂತಿಯು ವ್ಯಾಪಕವಾಗಿ ಜರುಗಿ ವರ್ಗಗಳ ಇರುವನ್ನು ಮಸುಕುಮಾಡಿವೆಯೆಂಬ ಮಾತು ಕೇಳಿಬರುತ್ತದೆ. ಆದರೆ ಅಂತಹ ಬೆಳವಣಿಗೆಯು ಉತ್ಪಾದನೆಯ ವಿಧಾನ ಮತ್ತು ಮಟ್ಟವನ್ನು ಬದಲಾಯಿಸಬಹುದೇ ವಿನಾ ಉತ್ಪಾದನಾ ಸಂಬಂಧಗಳನ್ನು ಕಡಿದುಹಾಕುವುದಿಲ್ಲ. ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ತಾಂತ್ರಿಕ ಮುಖ್ಯಸ್ಥನಾಗಿದ್ದು ಕೊಂಡು ತಿಂಗಳಿಗೆ ಲಕ್ಷ ರೂಪಾಯಿ ವೇತನ ಪಡೆಯುವವನೊಬ್ಬ ''ದುಡಿಯುವ ವರ್ಗ'' ಕ್ಕೆ ಸೇರುತ್ತಾನೆಯೆ? ಅವನೂ ದಿನಗೂಲಿಯಲ್ಲಿ ತಿಂಗಳಿಗೆ ಒಂದು ಸಾವಿರ ರೂಪಾಯಿ ಪಡೆಯುವವನೂ ಒಂದೇ ವರ್ಗಕ್ಕೆ ಸೇರುತ್ತಾರೆಯೆ? ಇಂತಹ ಪ್ರಶ್ನೆಗಳನ್ನು ಹಾಕಿ ವರ್ಗಗಳು ಅಳಿಸಿ ಹೋಗಿವೆಯೆಂದು ಸೂಚಿಸುವುದು ಸುಲಭ. ಆದರೆ ಲೆನಿನ್ ಹೇಳಿದ್ದಂತೆ ಈಗಲೂ ಉತ್ಪಾದನಾ ಸಂಬಂಧಗಳೇ ವರ್ಗವಿಭಜನೆಗೆ ಮೂಲಸೂತ್ರವಾಗಿದೆ. ಆ ಇಬ್ಬರು ಒಂದೇ ವರ್ಗಕ್ಕೆ ಸೇರಿದ್ದರೂ ಮಾನಸಿಕವಾಗಿ ಬೇರೆ ಬೇರೆ ಆಯಾಮಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಸಾವಿರ ರೂಪಾಯಿ ಕೂಲಿ ಪಡೆಯುವವನ ಜೊತೆಯಲ್ಲಿ ಬಾವುಟ ಹಿಡಿದು ಮೆರವಣಿಗೆ ಹೋಗಲು ಲಕ್ಷ ರೂಪಾಯಿ ವೇತನ ಪಡೆಯುವವನು ಹಿಂಜರಿಯಬಹುದು. ಅದಕ್ಕೆ ಕಾರಣ ಅವನು ಆಳುವ ವರ್ಗಕ್ಕೆ ಹತ್ತಿರವಾಗಿರುವುದು, ನಾಳಿನ ದಿನಗಳಲ್ಲಿ ತಾನೂ ಆ ವರ್ಗಕ್ಕೆ ಸೇರಿಕೊಂಡು ಬಿಡುವೆನೆಂಬ ಭಾವನೆ ಇರುವುದು.

ಮಧ್ಯಮ ವರ್ಗವೆಂಬುದು ಪ್ರತ್ಯೇಕವಾದ ವರ್ಗವಾಗಲು ಅರ್ಹವಾಗಿಲ್ಲದಿದ್ದರೂ ತನ್ನದೇ ಆದ ಕೆಲವು ಭಾವನೆ ಮತ್ತು ಪ್ರತೀಕ್ಷೆಗಳನ್ನು ಅದು ಹೊಂದಿರುತ್ತದೆ. ಅಲ್ಲಿಯ ಜನಕ್ಕೆ ಎಂಥದೋ ಬಿಗುಮಾನ: ಅತ್ತ ಮೇಲಕ್ಕೆ ಹೋಗುವ ಹಂಬಲ, ಇತ್ತ ಕೆಳಕ್ಕೆ ಜಾರಿಬಿಡಬಹುದೆಂಬ ಭಯ. ಮುಖ್ಯವಾಗಿ ಈ ಗುಂಪಿನವರಲ್ಲಿ ಬಹುತೇಕ ಮಿದುಳಿನ ಕೆಲಸ ಮಾಡುವವರು. ಇದು ಸಂಪೂರ್ಣವಾಗಿ ಔದ್ಯೋಗಿಕ ಕ್ರಾಂತಿಯ ನಂತರದ ಕಾಲದಲ್ಲಿ ಹುಟ್ಟಿಕೊಂಡಿರುವುದಲ್ಲ. ಪ್ರಾಚೀನ ಗ್ರೀಸ್ ಮತ್ತು ರೋಮ್‌ಗಳಲ್ಲಿ ಸಹ ಈ

ಗುಂಪಿಗೆ ಸೇರುವಂಥವರು ಇದ್ದರು. ಈ ಬಣದ "ಬುದ್ಧಿಜೀವಿ"ಗಳು ತಲೆ ತಲಾಂತರಗಳಿಂದ ಆಳುವ ವರ್ಗಕ್ಕೆ ದಾಸೋಹ ಮಾಡಿಕೊಂಡು ಬಂದಿದ್ದಾರೆ; ಅಂತೆಯೇ ದುಡಿಯುವ ವರ್ಗದೊಡನೆ ಪೂರ್ಣವಾಗಿ ಸಮೀಕರಿಸಿಕೊಂಡು ಕ್ರಾಂತಿಕಾರಿ ಹೋರಾಟಗಳಿಗೆ ಬೆನ್ನೆಲುಬೂ ಆಗಿದ್ದಾರೆ. ಅರಿಸ್ಟಾಟಲ್‌ನಂತಹವರು ಅಂದಿನ ಗುಲಾಮಿ ಪದ್ಧತಿಯನ್ನು ತಾತ್ವಿಕವಾಗಿ ಸಮರ್ಥಿಸಿ ಆಳುವ ವರ್ಗದ ಬುನಾದಿಯನ್ನು ಭದ್ರಪಡಿಸಲು ಯತ್ನಿಸಿದ್ದರು; ಇಂದು ಅಂಥದೇ ಕೆಲಸವನ್ನು ಮಾಡಲು ವಿಶ್ವವಿದ್ಯಾನಿಲಯಗಳ ಒಳಗೆ-ಹೊರಗೆ ಮರಿ-ಅರಿಸ್ಟಾಟಲ್‌ಗಳು ತುಂಬಿ ತುಳುಕುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಚರಕ, ಚಾರ್ವಾಕ, ಮಾರ್ಕ್ಸ್‌ನಂತಹವರು ದುಡಿಯವ ವರ್ಗದ ತಾತ್ವಿಕ ಕಹಳೆಯನ್ನು ಅದ್ಭುತವಾಗಿ ಮೊಳಗಿಸಿದ್ದಾರೆ.

ಇಂದಿನ ಒಂದು ಉದಾಹರಣೆಯನ್ನು ನೋಡುವುದಾದರೆ ಜಾಗತೀಕರಣವೆಂಬ ಭಯಂಕರ ಪ್ರಕ್ರಿಯೆಯ ಪರ ಮತ್ತು ವಿರೋಧವಾಗಿ ಕ್ರಿಯಾಶೀಲರಾಗಿರುವವರ ಸೈದ್ಧಾಂತಿಕ ನಿಲುವುಗಳನ್ನು ಪರೀಕ್ಷಿಸಬಹುದು. ಭಾರತದಂತಹ ದೇಶಗಳಿಗೆ ಆರ್ಥಿಕ ಚೈತನ್ಯ ಮೂಡಿಸಲು ಭಗವಂತನೇ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ಬ್ಯಾಂಕ್ ಮತ್ತು ವಿಶ್ವ ವ್ಯಾಪಾರಿ ಸಂಸ್ಥೆಗಳನ್ನು ನಿಯಾಮಕಗೊಳಿಸಿದ್ದಾನೆಂಬಂತೆ ಚೀರಾಡುವ ಮಧ್ಯಮ ವರ್ಗದ ಬುದ್ಧಿಜೀವಿಗಳು ನಮ್ಮಲ್ಲಿದ್ದಾರೆ. ಆ ಭಗವಂತನೇ ಅಮೆರಿಕಾದ ಅಧ್ಯಕ್ಷನೆಂದು ಬಾಯಿಬಿಟ್ಟು ಅವರು ಹೇಳುವುದಿಲ್ಲ, ಅಷ್ಟೆ. ಆದರೆ ಈ ಭಗವಂತನು ಇತರರ ಭಾಗ (ಅಂದರೆ, ಸಂಪತ್ತು)ವನ್ನು ಹಾರಿಸಲು ಸದಾ ಚೇಷ್ಟೆ ಮಾಡುತ್ತಿರುವುದನ್ನು ಬಹಿರಂಗಗೊಳಿಸಿ ಅದನ್ನು ತಡೆಯಲು ಸಂಘಟಿತ ಪ್ರಯತ್ನದಲ್ಲಿ ತೊಡಗಿರುವ ಮಧ್ಯಮ ವರ್ಗದ ಬುದ್ಧಿಜೀವಿಗಳೂ ಇದ್ದಾರೆ. ಅಂದರೆ, ಈ ವರ್ಗಕ್ಕೆ ನಿರ್ದಿಷ್ಟವಾದ ಸ್ಥಿರ ಲಕ್ಷಣಗಳಿಲ್ಲ ಎಂದರ್ಥ. ಖಾಸಗೀಕರಣವನ್ನು ಹುಮ್ಮಸ್ಸಿನಿಂದ ಸ್ವಾಗತಿಸುವವರು ಈ ವರ್ಗದಲ್ಲಿದ್ದಾರೆ; ಆದರೆ ತಮ್ಮ ಮಕ್ಕಳನ್ನು ಶಾಲಾಕಾಲೇಜುಗಳಿಗೆ ಸೇರಿಸುವಾಗ ಖಾಸಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಅನ್ಯಾಯ ನಡೆಯುತ್ತಿದೆಯೆಂದು ಕೂಗೆಬ್ಬಿಸುತ್ತಾರೆ. ಆಗ ಅನ್ಯಾಯ ತಡೆಯಲು ಅವರೇ ಸ್ವತಃ ಮುಂದಾಗದೆ ಸರ್ಕಾರವು ಅದನ್ನು ಮಾಡಬೇಕೆಂದು ಗೋಗರೆಯುತ್ತಾರೆ. ಹಾಗಿದ್ದರೆ ಸರ್ಕಾರಿ ಸಂಸ್ಥೆಗಳಿಗೇ ಮಕ್ಕಳನ್ನು ಕಳಿಸಬಹುದಲ್ಲಾ ಎಂದರೆ ಅವರು ಒಪ್ಪುವುದಿಲ್ಲ. ಖಾಸಗಿ ಶಾಲೆ ಬೇಕು, ಆದರೆ ಖಾಸಗಿತನದ ಲಾಭಾಕಾಂಕ್ಷೆ ಇರಬಾರದು ಎಂಬುದು ಅವರ ಅಪೇಕ್ಷೆ. ಲಾಭವನ್ನು ದೂರವಿಟ್ಟು ವೈರಾಗ್ಯದಿಂದ ಕಾರ್ಯಪ್ರವೃತ್ತವಾಗುವ ಖಾಸಗಿತನ ಕೇವಲ ಕನಸಿನ ಮಾತೆಂಬುದು ಅವರಿಗೆ ಹಿಡಿಸುವುದಿಲ್ಲ. ಹೀಗೆ ಡೋಲಾಯಮಾನವಾದ ಮನಃಸ್ಥಿತಿ ಈ ಗುಂಪಿನಲ್ಲಿ ವಿಶೇಷವಾಗಿ ಕಾಣಬರುತ್ತದೆ. ಸಾರ್ವಜನಿಕ ವಲಯಗಳಲ್ಲಿ ಕ್ರಿಯಾಶೀಲರಾಗಿರುವ ಚಳುವಳಿಗಳ ನೇತಾರರು ಇವರ ಸಮಸ್ಯೆಗಳನ್ನು ಪರಿಹರಿಸಿಕೊಡಬೇಕು, ಸ್ವತಃ ಅವರೇ ಬೀದಿಗಿಳಿದು ಹೋರಾಟ ಮಾಡಲು ಅಷ್ಟು ಸಿದ್ಧರಿಲ್ಲ. ಚಳುವಳಿಗಳು ಇವರ

ಪರವಾಗಿ ಕಾದಾಡದಿದ್ದರೆ ಅವನ್ನು ಮೂದಲಿಸುವುದರಲ್ಲಿ ಇವರೇ ಮೊದಲಿಗರು ಕೂಡ. ಎಲ್ಲರೂ ಇವರ ಸೇವೆ ಮಾಡಿ ಸುಪ್ಪತ್ತಿಗೆಯಲ್ಲಿ ಇವರಿಗೆ ಅನುಕೂಲ ಮಾಡಿಕೊಡಬೇಕೆಂಬುದು ಈ ಗುಂಪಿನ ನಿರೀಕ್ಷೆ. ಆದ್ದರಿಂದಲೇ ಈ ಗುಂಪನ್ನು ''ಬಿಟ್ಟಿ ಸವಾರರು'' ಎಂದು ಕರೆಯುವುದು ವಾಡಿಕೆಯಲ್ಲಿದೆ. ಯಾವುದೋ ಸ್ಥಳ ತಲುಪಲು ಇವರಿಗೆ ವಾಹನಬೇಕು, ಆದರೆ ವಾಹನಕ್ಕೆ ಬಾಡಿಗೆ ತೆರಲು ಇವರು ಸಿದ್ಧರಿಲ್ಲ. ತಮಗಾಗಿ ಅಲ್ಲದಿದ್ದರೂ ಹೇಗೂ ವಾಹನ ಹೋಗುತ್ತಿದೆಯಲ್ಲಾ, ತಮ್ಮನ್ನು ಕೂಡಿಸಿಕೊಂಡು ಹೋಗಲಿ ಎಂಬುದು ಈ ಗುಂಪಿನ ತರ್ಕ. ಟಿಕೆಟ್‌ಕೊಳ್ಳದೆ ಪ್ರಯಾಣಿಸುವವನ ತರ್ಕವೂ ಅದೇ. ತಾನು ಟಿಕೆಟ್ ಕೊಳ್ಳದಿದ್ದರೂ ಬಸ್ಸು ಹೋಗುತ್ತದಲ್ಲಾ, ತನ್ನಿಂದಾಗಿ ಬಸ್ಸಿಗೇನೂ ನಷ್ಟವಿಲ್ಲವಲ್ಲಾ, ಎಂಬ ಬುದ್ಧಿವಂತ ತರ್ಕ ಅದು. ಬೇರೆಯವರ ಹೆಗಲೇರಿ ತನ್ನ ಗುರಿಯನ್ನು ಸಿದ್ಧಿಸಿಕೊಳ್ಳುವುದು ಈ ಗುಂಪು ಅಪೇಕ್ಷಿಸುವ ಸುಲಭ ಮಾರ್ಗ. ಆದ್ದರಿಂದಲೇ ದುಡಿಯುವ ವರ್ಗದ ಹೋರಾಟಗಾರರು ಈ ಗುಂಪನ್ನು ಎಚ್ಚರದಿಂದ ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಸಹನೆಯಿಂದ ಅದರೊಂದಿಗೆ ವ್ಯವಹರಿಸಬೇಕಾಗುತ್ತದೆ.

ಕೆಲವೊಮ್ಮೆ ಈ ಗುಂಪು ಅಸಾಧಾರಣ ಹುಮ್ಮಸ್ಸಿನಿಂದ ಯಾವುದಾದರೂ ಚಳುವಳಿಯಲ್ಲಿ ಭಾಗವಹಿಸುತ್ತದೆ ಮತ್ತು ಅಷ್ಟೇ ಬೇಗನೆ ನಿರಾಶೆ ಹೊಂದಿ ಸಿನಿಕತನದಲ್ಲಿ ಮುಳುಗಿ ಹೋಗುತ್ತದೆ. ಅದಕ್ಕೆ ಹೋರಾಟವೆಂದರೆ ಸರಳೀಕರಿಸಿದ ಮಧ್ಯಪ್ರವೇಶ; ಎಲ್ಲಾ ಒಮ್ಮೆಗೇ ಫಲ ದೊರೆಯಬೇಕು, ಇಲ್ಲದಿದ್ದರೆ ನಾಯಕತ್ವವನ್ನು ದೂಷಿಸಿ, ಮುಖ ದಪ್ಪ ಮಾಡಿಕೊಂಡು ಮೂಲೆಯಲ್ಲಿ ಕುಳಿತು ಬಿಡುತ್ತದೆ. ಉಗ್ರವಾದ ಒಂದು ಹೋರಾಟವು ಎಲ್ಲ ಬದಲಾವಣೆಗಳನ್ನು ತಂದು ಬಿಡುತ್ತದೆಂಬ ಭ್ರಮೆಯಿರುವ ಈ ಗುಂಪಿಗೆ ಆಳುವ ವರ್ಗದ ಭದ್ರಕೋಟೆಯ ನಿಜಸ್ವರೂಪದ ಪರಿಚಯ ಸಾಕಷ್ಟಿಲ್ಲ. ಜನರ ನಡುವೆ ಹೋಗಿ, ಅವರ ಪ್ರಜ್ಞೆಯ ಆಳವನ್ನು ಅರಿತು, ಅದನ್ನು ಹರಿತಗೊಳಿಸಿ, ಹೋರಾಟದಲ್ಲಿ ಧುಮುಕಿಸಿ, ಕ್ರಮೇಣ ಅವರನ್ನು ಕ್ರಾಂತಿಯ ಹಾದಿಗೆ ಕರೆದೊಯ್ಯುವ, ಅವರೊಡನೆ ಸಾಗುವ ಮನೋಭಾವ ಈ ಗುಂಪಿಗಿಲ್ಲ. ಜನರ ಪರವಾಗಿ ತಾನೊಮ್ಮೆ ಬಂದೂಕು ಹಿಡಿದುಬಿಟ್ಟರೆ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆಂಬ ಸ್ವ-ವೈಭವೀಕರಣದ ಗುಂಗಿನಲ್ಲಿ ಈ ಗುಂಪು ನಕ್ಸಲೀಯ ಬಣಕ್ಕೆ ನುಗ್ಗಬಹುದು, ಆರೆಸ್ಸೆಸ್ ಶಾಖೆಗೂ ಪದಾರ್ಪಣ ಮಾಡಬಹುದು. ಒಮ್ಮೆ ಭಾಗವಹಿಸಿ ಪೆಟ್ಟು ತಿಂದರೆ ಸಿನಿಕತನದಲ್ಲಿ ಮುಳುಗಿ ಮತ್ತೆ ಮೇಲೇಳದೇ ಕೇವಲ ಸ್ವಾರ್ಥದ ಮುದ್ದೆಯಾಗಿ ಬಿಡುವುದು ಈ ಗುಂಪಿನ ಸ್ವಭಾವ.

ಇಷ್ಟೆಲ್ಲಾ ಹೇಳಿದರೆ ಈ ಗುಂಪು ಯಾವುದೇ ಚಳುವಳಿಗೆ ಅನಗತ್ಯವಾದ ಭಾರವೆಂಬ ಭಾವನೆ ಬರಬಹುದು. ವಸ್ತುಸ್ಥಿತಿ ಹಾಗಿಲ್ಲ. ಯಾವ ವರ್ಗವನ್ನೂ ಹಾಗೆ ಏಕ ಪ್ರಕಾರವಾಗಿರುವ ಅಥವಾ ಸಮಗ್ರವಾಗಿ ಒಂದು ಗುಣವುಳ್ಳ ವಿಭಾಗವೆಂದು ಹೇಳಲಾಗುವುದಿಲ್ಲ.

ವೇದಾಂತದ ಬ್ರಹ್ಮನಿಗೆ ಮಾತ್ರ ಅಂತಹ ನಿರಪೇಕ್ಷ ಗುಣಗಳನ್ನು ಆರೋಪಿಸಬಹುದು. ಬೇರೆ ಕಡೆಗಳಲ್ಲಿ ಸಾಪೇಕ್ಷತ್ವವೇ ನಿಜವಾದ ಗುಣ. ಆದ್ದರಿಂದ ಮಧ್ಯಮ ವರ್ಗವು ಸರ್ವವಿಧಗಳಲ್ಲೂ ಭಾರವೇ ಎಂಬುದು ಸರಿಯಾದ ತಿಳಿವಳಿಕೆಯಲ್ಲ. ಅನುಭವವೂ ಇದನ್ನು ತೋರಿಸಿಕೊಡುತ್ತದೆ.

ಹೊಸ ವೈಜ್ಞಾನಿಕ-ತಾಂತ್ರಿಕ ಆವಿಷ್ಕಾರಗಳಿಗೆ ಈ ವರ್ಗದ ಕಾಣಿಕೆ ಅಮೂಲ್ಯವಾದ್ದು. ಅಂತೆಯೇ ಆರ್ಥಿಕತೆಯ ಅನಿಷ್ಟ ಉಪದ್ರವಗಳ ವಿರೋಧಕ್ಕೆ ಕೂಡ ಈ ವರ್ಗವು ಗಮನಾರ್ಹವಾದ ಕಾಣಿಕೆ ನೀಡುತ್ತದೆ. ಆದ್ದರಿಂದ ಸಮಾಜವು ಅಪೇಕ್ಷಿಸುವ ಸರ್ವಾಂಗೀಣ ಬದಲಾವಣೆಗೆ ಈ ವರ್ಗವೂ ಕೈಗೂಡಿಸಿದಾಗ ಮಾತ್ರ ಫಲ ದೊರೆಯಬಹುದು. ನೇರವಾಗಿ ಸಂಪತ್ತನ್ನು ಸೃಷ್ಟಿಸುವವರ ಜೊತೆ ಈ ವರ್ಗ ಸೇರಿಕೊಂಡಾಗ ಅದು ಅಜೇಯ ಸೈನ್ಯವಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಈ ಎರಡೂ ಬಣಗಳ ಪ್ರಜ್ಞಾವಂತಿಕೆಯಲ್ಲಿ ಮಾರ್ಪಾಟು ಅವಶ್ಯಕವಾಗಿರುತ್ತದೆ, ಅಷ್ಟೆ. ಈಗಂತೂ ವಿಶ್ವದ ಅನೇಕ ಮೂಲೆಗಳ ವಿದ್ಯಮಾನಗಳನ್ನು ನೋಡಿದರೆ ಅವುಗಳ ಹೊಡೆತವನ್ನು ಚೆನ್ನಾಗಿ ಅನುಭವಿಸಿರುವುದು ಮಧ್ಯಮ ವರ್ಗವೆಂಬುದು ತಿಳಿಯುತ್ತದೆ. ಆದ್ದರಿಂದ ದುಡಿಯುವ ಜನರ ವಿಶಿಷ್ಟ ಆಕಾಂಕ್ಷೆಗಳನ್ನು ಈ ವರ್ಗ ಮೂದಲಿಸಿ ತಳ್ಳಿ ಹಾಕುವಂತಿಲ್ಲ. ಉದಾಹರಣೆಗೆ ಪೂರ್ವ ಏಷ್ಯಾದಲ್ಲಿ (ಮಲಯೇಷ್ಯ, ಥೈಲೆಂಡ್, ಸಿಂಗಪುರ್ ಇತ್ಯಾದಿ) ಇತ್ತೀಚೆಗೆ ಹಣಕಾಸಿನ ಅವ್ಯವಸ್ಥೆಯಲ್ಲಿ ನಲುಗಿ ಹೋದ ಮಧ್ಯಮ ವರ್ಗ ಉದಾರೀಕರಣದ ವಿಷಫಲವನ್ನು ಉಂಡಿದೆ. ಅದಕ್ಕೆ ಅಮೆರಿಕಾ, ವಿಶ್ವ ವ್ಯಾಪಾರ ಸಂಸ್ಥೆ ಇತ್ಯಾದಿಗಳು ಎಷ್ಟು ಕಾರಣರೆಂದು ಈಗ ಈ ವರ್ಗಕ್ಕೆ ಅರಿವಾಗಿದೆ. ಮೆಕ್ಸಿಕೋ, ಬ್ರೆಜಿಲ್, ಮುಂತಾದೆಡೆಗಳಲ್ಲೂ ಇದೇ ಅನುಭವ. ನಾಳೆ ಭಾರತದಲ್ಲಿ ಅಂತಹುದೇ ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ. ವಾಜಪೇಯಿ-ಯಶವಂತ ಸಿನ್ಹಾ-ಜಸವಂತ ಸಿಂಗ್-ಮನಮೋಹನ ಸಿಂಗ್-ಚಿದಂಬರಂ ಮುಂತಾದವರ ದುಷ್ಟಕೂಟ ಭಾವನಾತ್ಮಕವಾಗಿ ಬೊಗಳೆ ಹೊಡೆಯುತ್ತಾ ದೇಶವನ್ನು ಅಮೆರಿಕದ ಅಡಿಯಾಳಾಗಿಸಲು ಎಲ್ಲ ಹೂಲಸು ಕಾರ್ಯಕ್ರಮಗಳನ್ನೂ ಜಾರಿಗೆ ತಂದಿದೆ. ಸಣ್ಣ ಉದ್ದಿಮೆಗಳು ಮುಚ್ಚಿಹೋಗುತ್ತಿವೆ. ಸಾರ್ವಜನಿಕ ವಲಯದ ದೊಡ್ಡ ಉದ್ದಿಮೆಗಳಿಗೆ ಉರುಲು ಹಾಕಲಾಗುತ್ತಿದೆ. ಸಾರ್ವಜನಿಕ ಖಜಾನೆಯನ್ನು ಲೂಟಿಮಾಡಿ ಸ್ವದೇಶಿ ಮತ್ತು ವಿದೇಶಿ ಖಾಸಗಿ ಮಾಲಿಕರನ್ನು ಕೊಬ್ಬಿಸಲಾಗುತ್ತಿದೆ. ಉದ್ಯೋಗಗಳು ಕಡಿಮೆಯಾಗುತ್ತಿವೆ, ಕೆಲಸಗಾರರ ಹಕ್ಕೊತ್ತಾಯಗಳನ್ನು ಮಾನ್ಯ ಮಾಡುತ್ತಿಲ್ಲ, ಪ್ರತಿಭಟಿಸಿದರೆ ಮನೆಗೆ ಕಳಿಸಲಾಗುತ್ತಿದೆ. ಇದೆಲ್ಲಾ ದುಡಿಯುವ ವರ್ಗಕ್ಕೆ ಮಾತ್ರವೇ ಪೆಟ್ಟು ತಿನ್ನಿಸುವುದಿಲ್ಲ. ಮಧ್ಯಮ ವರ್ಗವೂ ಅದರ ಪ್ರಭಾವಕ್ಕೆ ಸಿಲುಕಿ ಅದರಿಂದ ಹೊರಬರಲು ದುಡಿಯುವ ಜನರ ಜೊತೆ ನೇರ ಸಂಪರ್ಕ ಕಲ್ಪಿಸಿಕೊಳ್ಳಬೇಕಾಗುತ್ತದೆ. ಸುಳ್ಳು ಕನಸುಗಳ ತೆಕ್ಕೆಯಲ್ಲಿ ಬಿದ್ದು ಇದರ ಕಠೋರ ಪರಿಣಾಮಗಳನ್ನು ಮಧ್ಯಮ ವರ್ಗ ಇನ್ನೂ ಮನವಟ್ಟು ಮಾಡಿಕೊಂಡಿಲ್ಲ. ಇನ್ನೂ ಬಹುಕಾಲ ಅದೇ ಅವಸ್ಥೆಯಲ್ಲಿ ಉಳಿಯಲಾಗದು. ಆ ಸುಳ್ಳು

ಕನಸುಗಳನ್ನು ಸೃಷ್ಟಿಸಿಕೊಟ್ಟಿದ್ದು ಯಾರು? ಆಳುವ ವರ್ಗವು ಇದೇ ಮಧ್ಯಮ ವರ್ಗದ ಸಹಾಯದಿಂದ ಅದನ್ನು ಮಾಡಿದ್ದಲ್ಲವೆ? ಮಾಧ್ಯಮಗಳು, ಸಾಂಸ್ಕೃತಿಕ ಅಪರಚನೆಗಳು, ಕೊಳ್ಳುಬಾಕ ಪ್ರವೃತ್ತಿಯ ಪ್ರವರ್ಧಮಾನ, ಪೊಳ್ಳು ತತ್ತ್ವಶಾಸ್ತ್ರ ಇವೆಲ್ಲಾ ಆ ಕನಸಿಗೆ ಪೂರಕವಾದವು. ಇಂತಹ ರಟ್ಟಿನ ಮನೆ ಕುಸಿಯಲು ಎಷ್ಟು ಕಾಲ ಹಿಡಿಯುತ್ತದೆ? ಆದ್ದರಿಂದ ಮಧ್ಯಮ ವರ್ಗದೊಡನೆ ದುಡಿಯುವ ವರ್ಗ ಮತ್ತು ಅದರ ಪ್ರಾತಿನಿಧಿಕ ರಾಜಕೀಯ ಪಕ್ಷವಾದ ಕಮ್ಯೂನಿಸ್ಟ್ ಪಕ್ಷ ಕೂಡಲೆ ಸಂವಾದವನ್ನೇರ್ಪಡಿಸಿಕೊಂಡು ಸಹಕಾರ್ಯಾಚರಣೆಯ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಇನ್ನೊಂದಂಶವನ್ನು ನೆನಪಿನಲ್ಲಿಡಬೇಕು: ಅಗಾಧವಾದ ಮಧ್ಯಮ ವರ್ಗವನ್ನು ಬೆಳೆಸಿದರೆ ದುಡಿಯುವ ವರ್ಗದ ಆಕಾಂಕ್ಷೆಯಾದ ಕ್ರಾಂತಿಯನ್ನು ಹೊಸಕಿ ಹಾಕಿಬಿಡಬಹುದೆಂಬ ಭಾವನೆ ಈಗಾಗಲೇ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರಚಾರಕ್ಕೆ ಬಂದಿದೆ. ಅದೇ ಉದ್ದೇಶವೆಂದು ಘೋಷಿಸದಿದ್ದರೂ ಅಂತಹ ಪರಿಣಾಮಕ್ಕಾಗಿ ಬಂಡವಾಳಶಾಹಿಯು ಸದಾ ಕಾತುರವಾಗಿದೆ.

ನಮ್ಮಲ್ಲಿ ಹಬ್ಬಿರುವ ವಿದೇಶಿ ಕಂಪೆನಿಗಳು, ಹತ್ತಾರು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು, ಅಮೆರಿಕಾದ ಅಗತ್ಯವನ್ನು ಪೂರೈಸುತ್ತಿರುವ ಕಂಪ್ಯೂಟರ್ ಅಂಗಡಿಗಳು, ಇವು ಭಾಗಶಃ ಮಧ್ಯಮ ವರ್ಗದ ವಿಸ್ತರಣೆಗೆ ಇಂಬು ನೀಡಿವೆ. ಆದರೆ ಕ್ರಾಂತಿಯನ್ನು ದೂರಮಾಡುವ ಈ ಯೋಜನೆಯು ತಿರುಗೇಟು ಹೊಡೆಯಬಹುದು ಕೂಡ. ಏಕೆಂದರೆ ಈ ವರ್ಗದ ನಿರಾಶೆಗಳು ಫ್ಯಾಸಿಸ್ಟ್ ಶಕ್ತಿಯ ಬೆಳವಣಿಗೆಗೆ ಫಲವತ್ತಾದ ಭೂಮಿ. ಹಿಟ್ಲರನ ಚರಿತ್ರೆ ಇದನ್ನೇ ತೋರಿಸಿಕೊಡುತ್ತದೆ. ನಮ್ಮಲ್ಲಿಯೂ ಅನ್ಯಮತ ದ್ವೇಷ, ಇಟ್ಟಿಗೆ ಸಂಗ್ರಹ, ಧರ್ಮಸಂಸತ್ತು, ರಥಯಾತ್ರೆ, ಚರ್ಚುಗಳ ಧ್ವಂಸ, ಇವಕ್ಕೆಲ್ಲಾ ಮೂಲದ್ರವ್ಯ ಒದಗಿಸುವುದು ಈ ವರ್ಗದ ಮತಿಹೀನ ವಿಭಾಗವೇ ಆಗಿದೆ.

ಅಮೆರಿಕಾದ ಧೃತರಾಷ್ಟ್ರಾಲಿಂಗನಕ್ಕೆ ನಮ್ಮ ದೇಶವನ್ನು ಇಂದು ತಳ್ಳುತ್ತಿರುವ ವಾಜಪೇಯಿ-ಫರ್ನಾಂಡಿಸ್-ಜಸವಂತಸಿಂಗ್ ಮುಂತಾದವರು ಈ ಬೆಳವಣಿಗೆಯನ್ನು ತಿರಸ್ಕರಿಸುವುದಿಲ್ಲ, ತಡೆಯುವುದೂ ಇಲ್ಲ. ಅದನ್ನು ಮಾಡಬೇಕಾದ್ದು ದುಡಿಯುವ ವರ್ಗ ಮತ್ತು ಕಮ್ಯೂನಿಸ್ಟ್ ಪಕ್ಷ. ಮಧ್ಯಮ ವರ್ಗವೆಂದು ಒಂದು ಬೃಹತ್ ಜನಸ್ತೋಮವನ್ನು ಮೂಗುಮುರಿದು ದೂರವಿಡುವುದು ಸರ್ವಥಾ ಸಾಧ್ಯವಿಲ್ಲ. ಎಂದಿದ್ದರೂ ತಾಂತ್ರಿಕವಾಗಿ ಸಹ ಆ ವರ್ಗವೂ ದುಡಿಯುವ ವರ್ಗದ ಒಂದು ಭಾಗವೇ ಆಗಿದೆ. ಸಹಕಾರ್ಯಾಚರಣೆಯು ಇದನ್ನು ಗಟ್ಟಿಗೊಳಿಸಿ ನಮ್ಮ ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆ ಹಾದಿ ತೋರಿಸುತ್ತದೆ.

● ಸೌಜನ್ಯ : ಕೆಂಬಾವುಟ ವಿಶೇಷಾಂಕ, ೧೯೯೯

ಭಾನುಮತಿಯ ನೆತ್ತ : ಮತ್ತೆ ಪರಿಶೀಲನೆ

ಮಾಧವ ಪೆರಾಜೆ

ಭಾಗ-೧

ಪಂಪನ ವಾಗ್ವಿಲಾಸವೆಂದರೆ, ಸರಸ್ವತಿಗೆ ವಿಲಾಸವನ್ನೇ ಹೊಸತು ಮಾಡುವ ಪರಿಯದು. ಇದು ಕೇವಲ ಪಂಪನ ಕಾವ್ಯಕ್ಕೆ ಸಂಬಂಧಿಸಿದ ಮಾತಲ್ಲ. ಕಾವ್ಯದ ಎಲ್ಲೆ ಎಲ್ಲೆಲ್ಲ ಮುಟ್ಟುವುದೋ ಅಲ್ಲೆಲ್ಲ ಈ ಮಾತಿಗೆ ಮನ್ನಣೆ ಇರುತ್ತದೆ, ಇರಬೇಕು. ಏಕೆಂದರೆ ಯಾವುದೇ ಶ್ರೇಷ್ಠ ಕಾವ್ಯವು ಸರಸ್ವತಿಗೆ ಹೊಸ ವಿಲಾಸವನ್ನು ಉಂಟುಮಾಡಬೇಕು, ಇಲ್ಲದಿದ್ದರೆ ಅದು ಅನ್ಯರೊರೆದುದನೆ ಬರೆಬರೆದು ಭಿನ್ನವಾಗುವ ಜಡತ್ವದತ್ತ ಚಲಿಸುತ್ತಿರುತ್ತದೆ.

ಈ ವಾಗ್ವಿಲಾಸಕ್ಕೆ ಸಂಬಂಧಿಸಿದಂತೆ, ಸಹೃದಯರು ಅನೇಕ ಚರ್ಚೆಗಳನ್ನು ಮಾಡಿದ್ದಾರೆ. ನಾಗವರ್ಮ ಹೇಳಿರುವ 'ಪಸರಿಪ ಕನ್ನಡಕ್ಕೊಡೆಯನೋರ್ವನೇ ಸತ್ಕವಿ ಪಂಪನಾವಗಂ' ಎನ್ನುವ ಪ್ರಶಂಸಾ ವಾಕ್ಯವೂ ಕೂಡ ಅಂತಹದ್ದೇ. ಅದರೊಂದಿಗೆ ಆಗಾಗ ಈ ಕುರಿತು ನಡೆಯುವ ವಿದ್ವತ್ಪೂರ್ಣವಾದ ಚರ್ಚೆಯ ಕ್ರಮವೂ ಒಂದಿದೆ. ಸಾಮಾನ್ಯವಾಗಿ ಅಂತಹ ವಿದ್ವತ್ಪೂರ್ಣ ಚರ್ಚೆಗಳಲ್ಲಿ ಪಂಪನ ವಾಗ್ವಿಲಾಸವನ್ನು ಪದ್ಯಪಾಷಾಣಗಳೆಂಬ ದೃಷ್ಟಿಕೋನದಿಂದ ನೋಡಲಾಗುತ್ತದೆ. ಆಗ ಶಾಪ ವಿಮೋಚನೆಯ ರೀತಿಯಲ್ಲಿ ಕಾವ್ಯಕ್ಕೆ ಸ್ಪಂದಿಸಲಾಗುತ್ತದೆ. ಇದರಿಂದ ಬಹುಮುಖ್ಯವಾದ ಎರಡು ನೆಲೆಗಳಿಗೆ ನಾವೀಗ ತಲುಪಿದಂತಾಯಿತು. ಮೊದಲನೆಯದು ವಾಗ್ವಿಲಾಸವಾದರೆ, ಇನ್ನೊಂದು ಪಾಷಾಣ ಮೂಲವಾದ 'ಶಾಪ ವಿಮೋಚನೆ'. ಇದರಲ್ಲಿ ವಾಗ್ವಿಲಾಸವೆಂಬುದು ಕವಿಗಳು ತಮ್ಮ ಕಾವ್ಯವನ್ನು ಪರಿಭಾವಿಸುವ ದೃಷ್ಟಿಕೋನಕ್ಕೆ ಸಂಬಂಧಿಸಿದುದಾದರೆ, ಶಾಪ ವಿಮೋಚನೆಯು ಸಹೃದಯರ ಕಾವ್ಯಾಸ್ವಾದನಕ್ಕೆ ಸೇರಿದುದು. ಕಳೆದ ಅನೇಕ ವರ್ಷಗಳಿಂದ ಪಂಪನ ಪದ್ಯವೊಂದರ ಮೇಲೆ ನಡೆದ ಚರ್ಚೆಯನ್ನು ಈ ನೆಲೆಯಲ್ಲಿ ಪರಿಭಾವಿಸಿ ಅದಕ್ಕೊಂದು ತಿರುವನ್ನು ಕೊಡುವುದು ಈ ಲೇಖನದ ಉದ್ದೇಶವಾಗಿದೆ. ಅದರೊಂದಿಗೆ ಪಂಡಿತ ಮಂಡಳಿ ನಡೆಸಿದ ಚರ್ಚೆಯಲ್ಲಿ ಅದರ ಸಾತತ್ಯದ ಕಾರಣಕ್ಕಾಗಿ ಪ್ರವೇಶ ಮಾಡುವುದೂ ಯಥೋಚಿತವಾಗಬಲ್ಲುದೆನಿಸುತ್ತದೆ.

ವಾಗ್ವಾದಕ್ಕೆ ಎಡೆಕೊಟ್ಟ 'ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ' ಕಾವ್ಯದ ಪದ್ಯವನ್ನು ಈಗ ಗಮನಿಸಬಹುದು:

> **ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ**
> **ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ**

ಳ್ಕುತ್ತಿರೆಯೇವಮಿಲ್ಲ ದಿವನಾ(ಯ್ಯು) ದೋ ತಪ್ಪದೆ ಪೇಱಿಮೆಂಬ ಭೂ ।
ಪೋತ್ತಮನಂ ಬಿಸುಟ್ಟರದೆ ನಿಮ್ಮೊಳೆ ಪೊಕ್ಕಡೆ ಬೇಡನಲ್ಲನೇ ॥

ಈ ಪದ್ಯದ ಬಗೆಗೆ ನಡೆದ ವಾಗ್ವಾದಗಳನ್ನು ಹೀಗೆ ಸಂಗ್ರಹಿಸಲಾಗಿದೆ :

೧. ಜಯಕರ್ನಾಟಕದ ೧೩ನೆಯ ಸಂಪುಟದ ೯ನೆಯ ಸಂಚಿಕೆಯಲ್ಲಿ ಶ್ರೀ ಡಿ.ವಿ.ಎಸ್. ಬರೆದ 'ಪಂಪ ಭಾರತ (ಕರ್ಣನ ಪಾತ್ರ)' ಎಂಬ ಲೇಖನದಲ್ಲಿ -

ದುರ್ಯೋಧನನ ಹೆಂಡತಿಯಾದ ಭಾನುಮತಿಯಲ್ಲಿ, ದುರ್ಯೋಧನನ ಎದುರಿನಲ್ಲಿಯೇ ಕರ್ಣನು ಪಗಡೆಯಾಡುತ್ತಿರಲು, ಭಾನುಮತಿಯು ಸೋಲಲು, ಪಂಥದಂತೆ ಅವಳ ಮುತ್ತಿನ ಹಾರಕ್ಕೆ ಕೈಹಾಕಿ ಕೀಳಲು ಅದು ಹರಿದು ಹೋಯಿತು. ಎದುರಿಗೆ ಇದ್ದ ದುರ್ಯೋಧನನು ಈ ಪರಿಸ್ಥಿತಿಯನ್ನು ಸೌಮ್ಯದಿಂದ ನೋಡುತ್ತಿದ್ದನೇ ಹೊರತು ಕರ್ಣನನ್ನು ಆಕ್ಷೇಪಿಸಲಿಲ್ಲ, ಅಲ್ಲದೆ ಅವನ ಗಮನವು ಚೆಲ್ಲಿದ ಮುತ್ತುಗಳನ್ನಾರಿಸುವುದರಲ್ಲಿತ್ತು. ಪಟ್ಟದ ರಾಣಿಗಾದ ಅವಮಾನಕ್ಕಾಗಿ ಕರ್ಣನ ವರ್ತನವು ಸುಲಭವಾಗಿ ಆಕ್ಷೇಪಣೀಯವಾಗಬಹುದಿತ್ತು. ಉತ್ತರ ಕ್ಷಣದಲ್ಲಿ ಕರ್ಣನು ಏನು ಅಕಾರ್ಯಮಾಡಿದೆನೆಂದುಕೊಂಡಿರಬೇಕು. ಭಾನುಮತಿಯಲ್ಲಿ ಕರ್ಣನಿಗಿದ್ದ ಸಲುಗೆಯ ಗಾಢತೆಯಲ್ಲಿ ಕರ್ಣನ ವರ್ತನವು ತಪ್ಪಾಗಿ ಪರಿಣಮಿಸಲಿಲ್ಲ. ಭಾನುಮತಿಯಾಗಲಿ ದುರ್ಯೋಧನನಾಗಲಿ ಕರ್ಣನಲ್ಲಿ ದೋಷಾರೋಪಣೆ ಮಾಡಲಿಲ್ಲ. ಇಷ್ಟು ಸಲುಗೆಗೆ ಅವಕಾಶ ಕೊಟ್ಟಿದ್ದ ದುರ್ಯೋಧನನನ್ನೂ ಪರಿಗಣಿಸದೆ, ಅವನಲ್ಲಿ ಕೃತಘ್ನನಾಗಿ ಪಾಂಡವರ ಪಕ್ಷಪಾತಿಯಾಗುವುದು ತನಗೆ ಅಪಕೀರ್ತಿ ತರತಕ್ಕುದೆಂದು ಕರ್ಣನು ಬಲ್ಲನು.

೨. ಜಯಕರ್ನಾಟಕ ೧೩ನೆಯ ಸಂಪುಟದ ೧೧ನೆಯ ಸಂಚಿಕೆಯಲ್ಲಿ ಮಂಗಳೂರಿನ ಶ್ರೀ ಪದ್ಮನಾಭರು ಬರೆದ "ಪಂಪಭಾರತದ ಕರ್ಣನ ಪಾತ್ರ" ಒಂದು ಕಲಂಕದ ಮಾರ್ಜನ-ಎಂಬ ಲೇಖನದಲ್ಲಿ -

ಈ ಪದ್ಯದ ಯಥಾರ್ಥ ಅರ್ಥವಿವರಣೆ ಹೀಗೆ : (ರಾಜನು) ನೆತ್ತವನ್ನು ಆಡಿ ಭಾನುಮತಿ ಸೋಲಲು ಸೋಲವನ್ನು ಕೊಡಬೇಕೆಂದು ಪೀಡಿಸುತ್ತಿದ್ದಾಗ ಮುತ್ತಿನ ಲಂಬಣವು ಹರಿದು ಹೋಯಿತು. (ಆಗ ಭಾನುಮತಿ) ಸುರಿದು ಬಿದ್ದ ಮುತ್ತಿನ ಕೇಡನ್ನು ನೋಡಿ ಬಳುಕುತ್ತಿರಲು (ಅರಸನು) ವ್ಯಥೆಪಡದೆ ಇವುಗಳನ್ನು ಹೆಕ್ಕೋಣವೇ ಹೇಳೆಂದು (ಅಲ್ಲಿಂದ ನನ್ನೊಡನೆ) ಹೇಳುವಷ್ಟು ಅನ್ಯೋನ್ಯತೆಯುಳ್ಳ ಅರಸನನ್ನು ಬಿಟ್ಟು ನಿಮ್ಮೊಡನೆ ಸೇರಿದರೆ ನಾನು ಬೇಡನಲ್ಲವೆ?

೩. ಇದಕ್ಕೆ ಇದೇ ಸಂಚಿಕೆಯಲ್ಲಿ ಶ್ರೀ.ಡಿ.ವಿ.ಎಸ್. ಅವರ ಸಮಾಧಾನದಲ್ಲಿ ಕರ್ಣನು ಭಾನುಮತಿಯೊಡನೆ ನೆತ್ತಮನಾಡಿದುದು ಅಸಂಭಾವ್ಯವೆಂದಾಗಲಿ, ಆಕ್ಷೇಪಣೀಯವೆಂದಾಗಲಿ ಹೇಳುವ ಮುಂಚೆ ಕರ್ಣ ದುರ್ಯೋಧನರ ಸ್ನೇಹದ ಸ್ವರೂಪವೆಂತಹು

ದೆಂಬುದನ್ನು ಚೆನ್ನಾಗಿ ತಿಳಿಯಬೇಕು. ಅವರ ಸ್ನೇಹವು ಅವ್ಯಾಜವಾದುದು, ಅನುಪಮವಾದುದು. ಈ ಬಗೆಯ ಸ್ನೇಹವನ್ನು ನಮ್ಮಂಥವರ ಅನುಭವದಲ್ಲಿರುವ ಸ್ನೇಹದ ಪ್ರಮಾಣದಿಂದ ಅಳೆಯಬಾರದು. ದುರ್ಯೋಧನನು ರಾಜನೂ ಉತ್ತಮ ಕ್ಷತ್ರಿಯ ವಂಶೋತ್ಪನ್ನನೂ ಆಗಿದ್ದರೂ ಕರ್ಣನ ಪರಾಕ್ರಮಕ್ಕೆ ಮೆಚ್ಚಿ ಅಜ್ಞಾತ ಕುಲಗೋತ್ರನಾಗಿದ್ದವನನ್ನು ರಾಜ ಪದವೀಗೇರಿಸಿಬಿಟ್ಟನು. ಅಲ್ಲದೆ ಕರ್ಣನನ್ನು ತನ್ನ ಆಶ್ರಿತನೆಂದು ಭಾವಿಸದೆ ತನಗೆ ಸರಿಸಮಾನಾದ ಮಾನ್ಯತೆ ಪ್ರತಿಷ್ಠೆಗಳನ್ನು ಅವನಿಗೂ ಸಂಪಾದಿಸಿಕೊಟ್ಟನು. ಹೀಗೆ ಇವರಿಬ್ಬರಿಗೂ ಅನನ್ಯ ಸ್ನೇಹವಿರುವಾಗ ಭಾನುಮತಿಗೂ ಕರ್ಣನಲ್ಲಿ ವಿಶ್ವಾಸವೂ ಸಲುಗೆಯೂ ಹುಟ್ಟವುದರಲ್ಲಿ ಆಶ್ಚರ್ಯವೂ ತಪ್ಪೂ ಕಂಡುಬರದು. ಹೀಗಿರುವಲ್ಲಿ ಕರ್ಣನು ಆಕೆಯೊಡನೆ ನೆತ್ತವಾಡಿದರೆ ಹೇಗೆ ತಪ್ಪಾದೀತು.... ಕರ್ಣನು ಭಾನುಮತಿಯ ಕೊರಳಿನ ಮುತ್ತಿನ ಸರವನ್ನು ಕಿತ್ತುದು ಅಕಾರ್ಯವೆಂದು ಆಕೆಗಾಗಲಿ ದುರ್ಯೋಧನನಿಗಾಗಲಿ ತೋರಲಿಲ್ಲ. ಬಹುಶಃ ಕರ್ಣನಿಗೆ ಒಂದು ವೇಳೆ ಹಾಗೆ ತೋರಿದ್ದರೂ ತೋರಿರಬಹುದು. ಏಕೆಂದರೆ ತಾನು ಸಲುಗೆ ತೆಗೆದುಕೊಂಡಿರುವುದು ಪಟ್ಟದ ರಾಣಿಯಲ್ಲಿ, ಎಷ್ಟಾದರೂ ತಾನು ಆಶ್ರಿತನು. ತಾನು ಮಾಡಿದ್ದು ಸರಿಯೇ ಎಂದು ತನಗೆನಿಸಿದ್ದರೂ ಎನಿಸಿರಬಹುದು. ಈ ವರ್ತನವು ಇತರರಲ್ಲಿ ಮಹಾಪರಾಧ ವಾಗುತ್ತಿದ್ದಿತೆಂಬುದರಲ್ಲಿ ಸಂಶಯವೇ ಇಲ್ಲ.... ಕರ್ಣನು ಉದ್ಧತನಾಗಿ ತನಗೆ ಲಭಿಸಿದ್ದ ಸಲುಗೆಯನ್ನು ದುರುಪಯೋಗಡಿಸಲು ಯೋಚಿಸಿದ್ದರೆ ಅದು ದೋಷವಾಗುತ್ತಿದ್ದಿ ತೆಂಬುದರಲ್ಲಿ ಸಂದೇಹವಿಲ್ಲ. ಆದರೆ ಕರ್ಣನಿಗೆ ಆ ಬಗೆಯ ಭಾವನೆಗಳಿರಲಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ನಾವು ಕಲ್ಪಿಸಿಕೊಂಡಿರುವ ಲೋಕರೀತಿಗೆ ಈ ಬಗೆಯ ಸಲುಗೆಯು ವಿರುದ್ಧವಾದುದರಿಂದ ಕರ್ಣನ ವರ್ತನೆಯು ಅಸಭ್ಯವಾಗಿಯೂ ಆಕ್ಷೇಪಣೀಯ ವಾಗಿಯೂ ತೋರಬಹುದು.

೪.ಜಯಕರ್ನಾಟಕದ ೧೪ನೆಯ ಸಂಪುಟದ ೧ನೆಯ ಸಂಚಿಕೆಯಲ್ಲಿ. ಮುಳಿಯ ತಿಮ್ಮಪ್ಪಯ್ಯನವರ 'ನೆತ್ತವನ್ನಾಡಿದವರಾರು?' ಎಂಬ ಲೇಖನದಲ್ಲಿ ಬಹುಮಟ್ಟಿಗೆ ಶ್ರೀ ಪದ್ಮನಾಭರ ಅಭಿಪ್ರಾಯವನ್ನು ಸಮರ್ಥಿಸಿದಂತೆ ಇದೆ.

೫.ಜಯಕರ್ನಾಟಕದ ೧೪ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ ಡಿ.ಎಂ.ಆರ್. ಕೃಷ್ಣಶಾಸ್ತ್ರಿಗಳ 'ಭಾನುಮತಿಯೊಡನೆ ನೆತ್ತವನ್ನಾಡಿದವರಾರು?' ಎಂಬ ಲೇಖನದಲ್ಲಿ -

'ನೆತ್ತಮನಾಡಿ....' ಎಂಬ ಪದ್ಯಕ್ಕೆ 'ಇದ್ದಕ್ಕಿದ್ದಂತೆಯೇ ಅನ್ವಯ ಮಾಡಿ' ಹೀಗೂ ಹೇಳಬಹುದು; (ನಾನು, ಎಂದರೆ ಕರ್ಣನು) ನೆತ್ತವನ್ನು ಆಡಿ. ಭಾನುಮತಿ ಸೋತಳು. ಸೋಲವನ್ನು ಕೊಡಬೇಕೆಂದು (ನಾನು) [illegible], (ಆಕೆಯ ಮುತ್ತಿನ ಲಂಬಣ ವನ್ನು ಎಳೆಯುತ್ತಿದ್ದಾಗ) ಅದು ಹರಿದುಹೋಯಿತು. ಆಗ (ಸುರಿದು ಹೋದ) ಮುತ್ತಿನ ಕೇಡನ್ನು ನೋಡಿ (ಆಕೆ) ಬಳುಕುತ್ತಿರಲು, (ಮತ್ತು ನಾನು ಆಯ್ದುಕೊಡಬೇಕೆಂದು

ಹೋಗಲು) ಅರಸನು ಅಸಮಾಧಾನ ಪಟ್ಟುಕೊಳ್ಳದೆ 'ಇವುಗಳನ್ನು ಆಯಬೇಕೆ? (ನ್ಯಾಯವಾಗಿ) ನಿಜವಾಗಿ ಹೇಳಿ' ಎಂದನು. ಇಂಥ ಅರಸನನ್ನು ಬಿಟ್ಟು ನಿಮ್ಮೊಡನೆ ಸೇರಿದರೆ ನಾನು ಬೇಡನಲ್ಲವೆ?

ಮೈತ್ರಿಯಿದ್ದರೆ, ಮಿತ್ರನ ತಪ್ಪು ತಪ್ಪಾಗಿ ಕಾಣುವುದಿರಲಿ-ಒಂದು ಲೋಪವಾಗಿಯೂ ಕಾಣುವುದಿಲ್ಲ. ಇದು ನಿಜವಾದ ಮೈತ್ರಿಯ ಪ್ರಧಾನ ಲಕ್ಷಣ. ಹೀಗೆ ಯಾವುದು ಸ್ವಾಭಾವಿಕವಾಗಿ, ಮಿತ್ರಪತ್ನಿಯಲ್ಲಿ ಅತಿ ಸ್ವಾತಂತ್ರ್ಯ, ಆದ್ದರಿಂದ ದೋಷ ಎಂದು ಕರ್ಣನಿಗೆ ಶಂಕೆ ಹುಟ್ಟಿತೋ ಅದು ದುರ್ಯೋಧನನಿಗೆ ದೋಷವೆನ್ನಿಸಲಿಲ್ಲ.

.... ಭಾನುಮತಿ ಬಳ್ಕಿದ್ದು, ಗಂಡನೆದುರಲ್ಲಿ ನಾನೂ ಕರ್ಣನೂ ಇಷ್ಟು ಸಲಿಗೆಯಿಂದಿದ್ದೆವಲ್ಲಾ ಗಂಡ ಏನು ತಿಳಿದುಕೊಂಡನೋ!-ಎಂದೇ.

೬. ಜಯಕರ್ನಾಟಕದ ೧೪ನೆಯ ಸಂಪುಟದ ೫ನೆಯ ಸಂಚಿಕೆಯಲ್ಲಿ ದಿ.ಮುಳಿಯ ತಿಮ್ಮಪ್ಪಯ್ಯನವರ 'ನೆತ್ತವನ್ನಾಡಿದುದು ಯಾರೊಡನೆ?' ಎಂಬ ಲೇಖನದಲ್ಲಿ -

ಭೂಪೋತ್ತಮನೊಡನೆ ನೆತ್ತವನ್ನಾಡಿ ಭಾನುಮತಿ ಸೋಲಲು, ಸೋಲವನ್ನು (ಸೋತವನು ಗೆದ್ದವನಿಗೆ ಕೊಡಬೇಕೆಂದು ನಿರ್ಣೀತವಾದ ವಸ್ತು-ಪಣವನ್ನು) ಈವುದು ಎಂದು (ಗೆದ್ದ ಭೂಪೋತ್ತಮನು ಸೋತ ಭಾನುಮತಿಯನ್ನು) ಕಾಡುತ್ತಿರಲು ಲಂಬಣವು ಹರಿದು ಹೋಯಿತು. (ಹಾಗೆ ಲಂಬಣವು ಹರಿದು ಮುತ್ತುಗಳೆಲ್ಲ ಚೆದರಿ ಹೋಗಲು ಆ) ಮುತ್ತಿನ ಕೇಡನ್ನೇ ಮತ್ತೂ ಮತ್ತೂ ನೋಡಿ (ಭಾನುಮತಿ) ಬಳ್ಕುತ್ತ (ಮನಮರುಗುತ್ತ) ಇದ್ದಳು. (ಆದರಿಂದ) ಏವವುಂಟಾಗದೆ ಇದನ್ನು (ಸೋಲವಾಗಿ ನನಗೊದಬೇಕಾದ ಈ ಮುತ್ತುಗಳನ್ನು) (ತಾನು) ಆಯ್ದುಕೊಳ್ಳಬಹುದೋ? ತಪ್ಪದೆ (ಪಕ್ಷಪಾತವಿಲ್ಲದೆ ನ್ಯಾಯವಾಗಿ) ಹೇಳಿರಿ' ಎಂಬ ಭೂಪೋತ್ತಮನನ್ನು ತೊರೆದು ನಿಮ್ಮೊಳಗೆ ಸೇರಿದರೆ (ಈ ಕರ್ಣನು) ಬೇಡನೆನ್ನಿಸಿಕೊಳ್ಳನೆ?

೭. ಜಯಕರ್ನಾಟಕದ ೧೪ನೆಯ ಸಂಪುಟದ ೬ನೆಯ ಸಂಚಿಕೆಯಲ್ಲಿ ಶ್ರೀ. ಡಿ. ರೇಣುಕಾಚಾರ್ಯರು ಬರೆದ 'ನೆತ್ತವನ್ನಾಡಿದವರಾರು?' ಎಂಬ ಲೇಖನದಿಂದ ದಿ. ಮುಳಿಯ ತಿಮ್ಮಪ್ಪಯ್ಯನವರು ಉದ್ಧರಿಸಿದ ಪದ್ಯಾರ್ಥ-

ಕೌರವನು ನೆತ್ತವನ್ನಾಡಿ ಭಾನುಮತಿ ಸೋಲಲು, ಸೋಲನ್ನು ಕೊಡಬೇಕೆಂದು ದುರ್ಯೋಧನನು ಕಾಡುತ್ತಿದ್ದಾಗ (ಎಂದರೆ ಮುತ್ತಿನ ಲಂಬಣವನ್ನು ಎಳೆದಾಡುತ್ತಿದ್ದಾಗ) ಅದು ಕಿತ್ತು ಹೋಯಿತು. ಆಗ (ಸುರಿದು ಹೋದ) ಮುತ್ತಿನ ಕೇಡನ್ನು ನೋಡಿ (ಭಾನುಮತಿ) ಬಳುಕುತ್ತಿರಲು ದುರ್ಯೋಧನನು (ಕರ್ಣ-ಭಾನುಮತಿಯರನ್ನು ಕುರಿತು) 'ಅಸಮಾಧಾನ ಪಟ್ಟುಕೊಳ್ಳದೆ, ಯಾವುದು (ಯಾರದು) ಸರಿ, ನಿಜವಾಗಿ ಹೇಳಿ' ಎಂದನು. ಇಂಥ ಭೂಪೋತ್ತಮನನ್ನು ಬಿಟ್ಟು ನಿಮ್ಮೊಡನೆ ಸೇರಿದರೆ ಬೇಡನಲ್ಲವೆ?

೮. 'ಜನವಾಣಿ' ಯಲ್ಲಿ ಶ್ರೀ ಶೇಷ ಭೀ, ಪಾರಿಶವಾಡರು (ವಿವರ ದೊರೆತಿಲ್ಲ) 'ಸೋಲವು ಚುಂಬನವಾಗಿದ್ದರೂ ಆಗಿರಬಹುದು' ಎಂದು ಹೇಳಿ ನೆತ್ತವನ್ನಾಡಿದಾತನು ದುರ್ಯೋಧನನೆಂದು ಅಭಿಪ್ರಾಯಪಟ್ಟಿರುವಂತೆ, ಇವಕ್ಕೆ ಮೊದಲು 'ಜನವಾಣಿ' ಎಂಬ ನಿತ್ಯಪತ್ರಿಕೆಯಿಂದ '.... ದುರ್ಯೋಧನನು ಕುಳಿತು ಕರ್ಣ ಭಾನುಮತಿಯರ ಪಗಡೆಯಾಟ ವನ್ನು ನೋಡುತ್ತ ಕರ್ಣನು ಪಣಕ್ಕಾಗಿ ಅವಳ ಮುತ್ತಿನ ಹಾರವನ್ನು ಕಿತ್ತಾಗ, ದುರ್ಯೋಧನನು ಸಂತೋಷಪಡುತ್ತ ಮುತ್ತನ್ನು ಆಯುತ್ತಿರುವಂತಹ ಅಕೃತ್ರಿಮ ಸೌಹಾರ್ದಪ್ರೇಮ....' ಎಂದು ಮುಂತಾಗಿ ದಿ. ಬಿ. ಎಂ. ಶ್ರೀಕಂಠಯ್ಯನವರು ಹೇಳಿದ್ದಾರೆಂದು ವರದಿಯಾಗಿತ್ತಂತೆ.

೯. ಮಂಗಳೂರಿನ 'ತ್ರಿವೇಣಿ'ಯ ೪ನೆಯ ಸಂಪುಟದ ೮ನೆಯ ಸಂಚಿಕೆಯಲ್ಲಿ ದಿ. ಮುಳಿಯ ತಿಮ್ಮಪ್ಪಯ್ಯನವರ 'ಇವನಾವುದೊ ಎಂದಾದರೇವುದೋ?' ಎಂಬ ಲೇಖನದಲ್ಲಿ -

''ಇವಂ (ಈ ಮುತ್ತಗಳನ್ನು) ಏವುದೊ (=ಏಂಗೆಯ್ವುದೊ) ಎಂದು ಸುಗಮವಾಗಿ ಅನ್ವಯವಾಗುತ್ತದೆ. ಅಂತೂ 'ಆವುದೊ' ಎಂಬುದಕ್ಕೆ ಎಡೆಯೆ ನನಗೆ ತೋರುವುದಿಲ್ಲ''.

ಇದೇ ಲೇಖನದಲ್ಲಿ 'ಸೋಲ' ಎಂಬ ಪದಕ್ಕೆ ಪಣವಾದ 'ಚುಂಬನ' ಎಂಬ ಧ್ವನಿತಾರ್ಥವನ್ನೆಸಗುವುದು ಉಚಿತವಲ್ಲವೆಂದು ತಿಳಿಸಲಾಗಿದೆ.

೧೦. 'ನಾಡೋಜ ಪಂಪ' ದಲ್ಲಿ (ಪು. ೪೬೯)

'ನೆತ್ತಮನಾಡಿ ಭಾನುಮತಿ ಸೋಲ್ತ' ಳು 'ಸೋಲಮನೀವುದೆಂದು - ಭೂಪೋತ್ತಮನು - ಕಾಡು' ತ್ತಿದ್ದನು. ಆ ಕಾಟಕ್ಕೊಳಗಾದ ರಾಣಿಯ 'ಲಂಬಣಂ' ಪರಿ' ದುದು. 'ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕು'ತ್ತಿದ್ದಳಾಕೆ. ಕೇಳೀಪ್ರಿಯನಾದರಸನು 'ಏವಮಿಲ್ಲದೆ' 'ಇವಂ' (ಈ ಮುತ್ತುಗಳನ್ನು) ತನಗೊದಗಬೇಕಾಗಿದ್ದ ಪಣವನ್ನಾಗಿ 'ಆ (ಯ್ವು)ದೊ ತಪ್ಪದೆ ಪೇಳಿಮೆಂ' ದು ಕೇಳಿದನು. ಹಾಗೆ ಶುದ್ಧಾಂತರಂಗದ ವಿಶ್ವಾಸಯುತನಾದ 'ಭೂಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ' ಕರ್ಣನಿವನು 'ಬೇಡನಲ್ಲನೇ?'

ಈ ವಿವರಣೆಯ 'ಮುತ್ತುಗಳನ್ನು' ಎಂಬುದಕ್ಕೆ ಅಡಿಟಿಪ್ಪಣಿಯಲ್ಲಿ '....'ಮುತ್ತು' ಎಂಬುದಕ್ಕಿರುವ ಕೌರವನ ಭಾವನೆಯ ಶ್ಲೇಷಾರ್ಥವು ಇಲ್ಲಿ ಅಗ್ರಾಮ್ಯತಾಗುಣದೊಡನೆ ಸೂಚಿತವಾಗುತ್ತಿದೆ' ಎಂದಿದೆ.

೧೧. ದಿ. ಕೆ. ಎ. ಕೃಷ್ಣಭಟ್ಟರು ಸಂಗ್ರಹಿಸಿ ವ್ಯಾಖ್ಯಾನಿಸಿದ 'ಕರ್ಣರಸಾಯನಂ' (ಪ್ರಕಾಶಕರು ಎಂ. ಸುಬ್ರಾಯ ಭಟ್ಟ, ಬೇಳ ಪೋಸ್ಟು, ಕುಂಬಳೆ ೧೯೫೩) ಎಂಬುವರಲ್ಲಿ -

ಪಗಡೆಯಾಟವನ್ನಾಡಿ ಭಾನುಮತಿಯು ಸೋತಲ್ಲಿ ಸೋಲವನ್ನು ಕೊಡಬೇಕೆಂದು

ಕಾಡುತ್ತಿರಲು ಹಾರವು ಹರಿದು ಹೋಗಲು, ಮುತ್ತುಗಳು ಚೆಲ್ಲಿ ಹಾಳಾಗುತ್ತಿರುವುದನ್ನು ನೋಡಿ ನಾಚಿಕೆಯಿಂದ ತಲೆತಗ್ಗಿಸಿರಲು ಮನಸ್ತಾಪಗೊಳ್ಳದೆ ಇವುಗಳನ್ನು ಕುರಿತು 'ಏನಾಯ್ತು' ತಪ್ಪದೇ ಹೇಳಿರಿ ಎಂಬ (ಈ ಮುತ್ತುಗಳು ಕೆಟ್ಟು ಹೋದುದರಿಂದೇನಾಯ್ತು? ಅದಕ್ಕಾಗಿ ಚಿಂತಿಸಬೇಕಾದ ಅವಶ್ಯಕತೆಯಿಲ್ಲ; ಅದೊಂದು ಸಾರವುಳ್ಳ ವಿಷಯವಲ್ಲವೆಂದು ದುರ್ಯೋಧನನ ಆಶಯವು ಎಂದು ತೋರುತ್ತದೆ....) ರಾಜಶ್ರೇಷ್ಠನಾದ ದುರ್ಯೋಧನನ್ನು ತ್ಯಜಿಸಿ, ತಡೆಯದೆ ನಿಮ್ಮಲ್ಲಿ ಕೂಡಿದರೆ ನಾನು ಬೇಡನಲ್ಲವೇ, ಹೀನಕುಲದವನಲ್ಲವೇ....

ನಾನು ದುರ್ಯೋಧನನ ಅಂತರಂಗಮಿತ್ರನಾದುದರಿಂದ ಆತನು ಏಕಾಂತದಲ್ಲಿಯೂ ಕೂಡ ನನಗೆ ಪ್ರವೇಶವನ್ನು ಕೊಡುತ್ತಿದ್ದನು. ಒಮ್ಮೆ ಆತನೂ ಆತನ ಹೆಂಡತಿಯಾದ ಭಾನುಮತಿಯೂ ನಾನೂ - ಹೀಗೆ ಮೂವರೇ ಕೂಡಿ ನೆತ್ತವನ್ನಾಡುತ್ತಿದ್ದಾಗ, ಭಾನುಮತಿಯು ಆಟದಲ್ಲಿ ಸೋತಳು. ಆಗ ಸೋಲದ ಪಗಡೆಕಾಯನ್ನು ನನ್ನಿಂದ ಕಸಿದುಕೊಳ್ಳಲು ಭಾನುಮತಿಯು ಕಾಡುತ್ತಿದ್ದಾಗ, ಮುತ್ತಿನ ಹಾರವು ಹರಿದು ಹೋಗಿ ಮುತ್ತುಗಳು ಚೆಲ್ಲಿ ಹಾಳಾಗುತ್ತಿದ್ದುವು; ಹಾಗುಂಟಾದ ಮುತ್ತಿನ ಕೇಡನ್ನು ನೋಡಿ ನೋಡಿ ಭಾನುಮತಿಯು ನಾಚಿಕೆಯಿಂದ ಬಳ್ಕುತ್ತಿರುವಲ್ಲಿ ದುರ್ಯೋಧನನು ಭಾನುಮತಿಯು ನನ್ನಲ್ಲಿ ತೋರಿದ ಈ ಸಲುಗೆಗಾಗಿ ಮನಸ್ಸಿನಲ್ಲಿ ಏನೂ ಹೇವಗೊಳ್ಳದೆ 'ಅದರಿಂದೇನಾಯ್ತು, ಹೋಗಲಿ ಬಿಡಿ, ಸಾರವಿಲ್ಲದ ಸಂಗತಿಯಲ್ಲವೇ, ತಪ್ಪದೇ ಹೇಳು' ಎಂದು ನನ್ನೊಡನೆ ನಿಷ್ಕಪಟಭಾವದಿಂದ ನುಡಿದು, ನನ್ನನ್ನು ತನ್ನ ಅಂತರಂಗದ ಜೀವದ ಗೆಳೆಯನೆಂದು ವರ್ತಿಸುವ ಭೂಪೋತ್ತಮನಾದ ದುರ್ಯೋಧನನ್ನು ತ್ಯಜಿಸಿ, ನಿಮ್ಮೊಡನೆ ಕೂಡಿಕೊಂಡರೆ, ನಾನು ನಿಜವಾಗಿಯೂ ಬೇಡನೆನಿಸಿಕೊಳ್ಳೆನೇ?

೧೨. ಡಿ.ಎಲ್.ನರಸಿಂಹಾಚಾರ್ಯರ 'ಪಂಪಭಾರತ ದೀಪಿಕೆ' (ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೭೧ರಲ್ಲಿ ಪ್ರಕಟಿತವಾದುದು) ಎಂಬುದರಲ್ಲಿ -

ಕರ್ಣನ ಸ್ನೇಹದ, ಸ್ವಾಮಿಭಕ್ತಿಯ ಪರಾಕಾಷ್ಠೆಯ ಚಿತ್ರ ಈ ಪದ್ಯದಲ್ಲಿದೆ. ಇದರಿಂದ ಸಹೃದಯ ಪ್ರತಿಭೆಗೆ ಒಂದು ಇಡೀ ದೃಶ್ಯವೇ ಕಾಣಿಸುತ್ತದೆ. ದುರ್ಯೋಧನನ ಅಂತಃಪುರದಲ್ಲಿ ಅವನ ರಾಣಿ ಭಾನುಮತಿ ಕರ್ಣನೊಡನೆ ಪಗಡೆಯಾಡುತ್ತಿದ್ದಾಳೆ. ದುರ್ಯೋಧನ ಅವರಿಬ್ಬರ ಆಟವನ್ನು ನೋಡುತ್ತಿದ್ದಾನೆ. ಭಾನುಮತಿ ತನ್ನ ಮುತ್ತಿನ ಹಾರವನ್ನು ಆಟಕ್ಕೆ ಪಣವಾಗಿ ಒಡ್ಡಿರುತ್ತಾಳೆ. ಅವಳು ಸೋತಳು, ಆಟದಲ್ಲಿ ಪಣವನ್ನು ಕೊಡದೆ ಅವಳು ಎದ್ದು ಹೋಗುವುದರಲ್ಲಿದ್ದಾಗ ಕರ್ಣ ಅವಳ ಮುತ್ತಿನ ಹಾರಕ್ಕೆ ಕೈಚಾಚಿದ. ಅದು ಹರಿದು ಹೋಗಿ ಬಿಡಿ ಮುತ್ತುಗಳು ಸುರಿದು ದಿಕ್ಕಾಪಾಲಾಗಿ ಚೆದರಿ ಹೋದವು. ಆಗ ಕರ್ಣನಿಗೆ ತಾನೇನು ಮಾಡಿದನೆಂಬ ಅರಿವುಂಟಾಗಿ ಹೆದರಿಕೆಯಿಂದ

ನಡುಗುತ್ತಿರುವಲ್ಲಿ, ಹತ್ತಿರಿದ್ದ ದುರ್ಯೋಧನ ಸ್ವಲ್ಪವೂ ಕೋಪಿಸಿಕೊಳ್ಳದೆ 'ಕರ್ಣ ಮುತ್ತುಗಳನ್ನು ಆರಿಸಿಕೊಡಲೇ?' ಎಂದು ಹೇಳುವನು, ಇಂಥಾ ಸ್ವಾಮಿಯನ್ನು ನಾನು ಬಿಟ್ಟು ಬಂದರೆ ನಾನು ಯಾರಿಗೂ ಬೇಡವಾದವನಾಗುತ್ತೇನೆ ಎಂದು ಕೃಷ್ಣನಿಗೆ ಕರ್ಣನು ಹೇಳುವನು.

ಮುಂದೆ ಪದ್ಯದ ಪ್ರತಿಪದಾರ್ಥವಿದೆ. ಇಲ್ಲಿ ಅರ್ಥವನ್ನು ಮಾತ್ರ ಬರೆಯಲಾಗಿದೆ -

ದುರ್ಯೋಧನನ ರಾಣಿ ಭಾನುಮತಿಯು ಕರ್ಣನೊಡನೆ ಪಗಡೆಯನ್ನಾಡಿ ಸೋತರೆ, ಸೋತುದನ್ನು ಎಂದರೆ ಪಣವನ್ನು ಕೊಡುವುದು ಎಂಬುದಾಗಿ ಕಾಡುತ್ತ ಇರಲು ಹಾರ ಹರಿದು ಹೋಗಲು ಮುತ್ತಿನ ಹಾನಿಯನ್ನೇ ನೋಡುತ್ತ ಕರ್ಣ ನಡುಗುತ್ತಿರಲು ಅಸಮಾಧಾನವಿಲ್ಲದೆ ಎಂದರೆ ಪ್ರಸನ್ನ ಚಿತ್ತನಾಗಿ ಈ ಮುತ್ತುಗಳನ್ನು ಆರಿಸಿಕೊಡುವುದೋ ತಪ್ಪಿಲ್ಲದೆ ಹೇಳಿರಿ ಎನ್ನುವ ರಾಜಶ್ರೇಷ್ಠನಾದ ದುರ್ಯೋಧನನನ್ನು ತೊರೆದು ನಿಮ್ಮಲ್ಲಿಯೇ ನಾನು ಹೊಕ್ಕರೆ ಎಂದರೆ ಸೇರಿಕೊಂಡರೆ ಯಾರಿಗೂ ಬೇಡವಾದವನಲ್ಲವೆ ಅಥವಾ ಕಿರಾತನಾಗುತ್ತೇನಲ್ಲವೇ?

ಕರ್ಣನ ಸ್ನೇಹ ಭವ್ಯತೆಯನ್ನು ಇದಕ್ಕಿಂತ ಮಿಗಿಲಾಗಿ ವರ್ಣಿಸುವುದು ಕಷ್ಟ. ಪಂಪನಿಗೆ ತನ್ನ ಪೋಷಕ ಅರಿಕೇಸರಿ ರಾಜನಲ್ಲಿದ್ದ ಆತ್ಮೀಯ ಸ್ನೇಹದ ಸ್ವಾನುಭವ ಇಲ್ಲಿ ಆದರ್ಶೀಕೃತ ವಾಗಿರುವಂತೆ ತೋರುತ್ತದೆ. ಇದು ಅಪೂರ್ವವೂ ಅದ್ಭುತರಮಣೀಯವೂ ಆಗಿರುವ ಪ್ರತಿಭಾ ವ್ಯಾಪಾರ. ಚಿಂತಿಸಿದಷ್ಟು ಬೆಳೆಯುತ್ತ ಹೋಗುತ್ತದೆ ಈ ಪದ್ಯದ ಭಾವವಲ್ಲರಿ, ಇದರ ವಿಚಾರವಾಗಿ ವಿದ್ವಾಂಸರಲ್ಲಿ ಕೊಂಚ ಚರ್ಚೆ ನಡೆದಿದೆ. ಪಂಪನ ಅನಂತರ ಬಂದ ತಮಿಳು ಕವಿ ವಿಲ್ಲಿ ಪುತ್ತೂರಿನ ಭಾರತದಲ್ಲಿ (ಕಾಲ ಸುಮಾರು ೧೩೨೫) ಈ ಪದ್ಯವನ್ನು ಹೋಲುವ ಪದ್ಯವೊಂದಿದೆಯೆಂದು ಬಲ್ಲವರು ಹೇಳುತ್ತಾರೆ.

೧೩. 'ಅಭಿವಂದನೆ' ಎಂಬ ದಿ.ಎ. ಆರ್. ಕೃಷ್ಣಶಾಸ್ತ್ರಿ ಪ್ರಶಸ್ತಿ ಗ್ರಂಥದಲ್ಲಿ ಶ್ರೀ ಕುವೆಂಪು ಅವರು ಬರೆದ 'ಪಂಪನ ಕರ್ಣ' ಎಂಬ ಲೇಖನದಲ್ಲಿ -

ಹಿಂದೊಂದು ದಿನ ಅಂತಃಪುರದಲ್ಲಿ ತನ್ನ ಸ್ನೇಹಿತನ ಪಟ್ಟದರಸಿಯೊಡನೆ ಪಣವೊಡ್ಡಿ ನೆತ್ತವಾಡುತ್ತಿದ್ದಂದು ಸೋತ ಭಾನುಮತಿ ಸೋಲವನ್ನು ಕೊಡದೆ ತಪ್ಪಿಸಿಕೊಳ್ಳ ಲೆಳಸಿದುದೂ, ಆಗ ಆ ಕಲಹದಲ್ಲಿ ಪಣವಾಗಿ ಒಡ್ಡಿದ್ದ ಅವಳ ಮುತ್ತಿನ ಹಾರ ಹರಿದು ಹೋಗುವುದೂ, ಅದನ್ನು ನೋಡಿ ಏನು ಅಚಾತುರ್ಯವಾಗಿ ಹೋಯಿತು ಎಂದು ತಾನು ಅಳುಕುತ್ತಿದ್ದುದೂ, ದುರ್ಯೋಧನ ಮುತ್ತು ಚೆಲ್ಲಿರುವುದನ್ನೂ ಕರ್ಣನ ಮನಸ್ಥಿತಿ ಯನ್ನೂ ಕಂಡು 'ಇವನಾಯ್ವುದೊ ತಪ್ಪದೆ ಪೇಳಿಮ್' ಎಂದು ಗಮನವನ್ನು ಮುತ್ತನ್ನು ಆಯುವ ಕಡೆಗೆ ಹರಿಸಿ ಅದೊಂದು ಅಚಾತುರ್ಯವೇ ಅಲ್ಲ ಎಂಬಂತೆ ವರ್ತಿಸಿ ಅವನ ಅಳುಕನ್ನು ಪರಿಹರಿಸಿದುದೂ, ಎಲ್ಲ ಚಿತ್ರವೂ ಕರ್ಣನ ಸ್ಮೃತಿಪಟಲದಲ್ಲಿ ಹಾಯ್ದು ಹೋಗುತ್ತದೆ. (ಪು.೩೫೭)

೧೪. ಶ್ರೀ ತ.ಸು. ಶಾಮರಾಯರ 'ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ' ಯಲ್ಲಿ ಶ್ರೀ ಕುವೆಂಪು ಅವರ ಅಭಿಪ್ರಾಯವನ್ನೇ ಈ ರೀತಿ ಮಂಡಿಸಲಾಗಿದೆ-

ಒಂದು ದಿನ ಕರ್ಣನು ದುರ್ಯೋಧನನ ಅಂತಃಪುರದಲ್ಲಿ ಭಾನುಮತಿಯೊಡನೆ ಪಗಡೆಯಾಡುತ್ತಿದ್ದಾನೆ. ದುರ್ಯೋಧನ ಅಲ್ಲಿ ವೀಕ್ಷಕನಂತೆ ಆಗಿ ಕುಳಿತಿದ್ದಾನೆ. ಭಾನುಮತಿ ಸೋತಳು. (ಸೋತವರು ಗೆದ್ದವರಿಗೆ ತಮ್ಮ ಮುತ್ತಿನ ಹಾರವನ್ನು ಕೊಡಬೇಕೆಂದು ಪಣ ಒಡ್ಡಿದ್ದರೆಂದು ತೋರುತ್ತದೆ.) ಕರ್ಣ ತನಗೆ ಬರಬೇಕಾದ ಪಣವನ್ನು ಕೊಡೆಂದು (ರಾಣಿಯ ಕತ್ತಿನಲ್ಲಿದ್ದ ಹಾರಕ್ಕೆ ಕೈ ಹಾಕಿ) ಕಾಡಿದ್ದಾನೆ. ಮುತ್ತಿನ ಹಾರ ಹರಿಯಿತು. (ಗೆಲುವಿನ ಉತ್ಸಾಹದಲ್ಲಿ ಮೈಮರೆತಿದ್ದ ಕರ್ಣನಿಗೆ ಆಗ ಎಚ್ಚರವಾಯಿತೆಂದು ತೋರುತ್ತದೆ) ಅದನ್ನು ಕಂಡು ಕರ್ಣ ಭಯದಿಂದ ನಡುಗುತ್ತ ನಿಂತ. ಅದನ್ನು ನೋಡಿದ ದುರ್ಯೋಧನ ಸ್ವಲ್ಪವೂ ಚಲಚಿತ್ತನಾಗದೆ, 'ಅಯ್ಯಾ, ಮುತ್ತುಗಳನ್ನು ಆಯ್ದು ಕೊಡಲೆ?' ಎಂದು ಅದೊಂದು ಅಚಾತುರ್ಯವೇ ಅಲ್ಲವೇನೋ ಎಂಬಂತೆ ಕೇಳಿದ. ಅಂತಹ ರಾಜಶ್ರೇಷ್ಠನನ್ನು ತ್ಯಜಿಸಿ, ನಿಮ್ಮೊಡನೆ ಸೇರಿಕೊಂಡರೆ ನಾನು ನಿಜವಾದ ಬೇಡನಾಗುವುದಿಲ್ಲವೇ?

೧೫.'ಕರ್ನಾಟಕ ಭಾರತಿ' ಯ ೫ನೆಯ ಸಂಪುಟದ ೧ ನೆಯ ಸಂಚಿಕೆಯಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರು ಬರೆದ 'ಭಾನುಮತಿಕರ್ಣರು ನೆತ್ತವಾಡಿದರೇ?' ಎಂಬ ಲೇಖನದಲ್ಲಿ ಶ್ರೀ ಆರ್. ರಾಚಪ್ಪನವರ ಲೇಖನದಿಂದ ಉದ್ಧರಿಸಿಕೊಂಡುದರಲ್ಲಿ -

ಭಾನುಮತಿ ಕರ್ಣ ಇಬ್ಬರೂ ಪಗಡೆಯಾಡುತ್ತಿದ್ದರು... ದುರ್ಯೋಧನ ಇವರಿಬ್ಬರ ಆಟಕ್ಕೆ ಸಾಕ್ಷಿಯಾಗಿ ಕುಳಿತಿದ್ದನು. ಭಾನುಮತಿ ಆಟದಲ್ಲಿ ಸೋತು ಪಣವನ್ನು ಕೊಡಲು ನಿರಾಕರಿಸಿದಳು. (ಈ ನಿರಾಕರಣೆ ಸ್ತ್ರೀ ಸಹಜವಾದ ಆಭರಣಗಳ ಮೇಲಿನ ಆಸೆಯಿರ ಬಹುದು. ಅಲ್ಲದೆ ಸೋದರ ಸಮಾನನಾದವನಲ್ಲಿ ಸಲುಗೆಯೂ ಇರಬಹುದು) ಕರ್ಣ ಕಾಡಿದನು. ಫಲಕಾರಿಯಾಗಲಿಲ್ಲ. ಆಗ ಕ್ಷತ್ರಿಯೋಚಿತವಾದ ವಿಜಯೋನ್ಮಾದಕ್ಕೆ ಒಳಗಾದ ಕರ್ಣ ಸರವನ್ನು ಹಿಡಿದೆಳೆದ. ಸರ ಹರಿದು ಮುತ್ತುಗಳು ಈಡಾಡಿದುವು. ಆಗ ಕರ್ಣನಿಗೆ ಅರಿವಾಗುತ್ತದೆ. ಆದುದರಿಂದ ತಾನು ಮಾಡಿದುದು ಅಕಾರ್ಯವೆಂಬ ಭಾವನೆಯಿಂದ ಬಳ್ಕುತ್ತಾನೆ. (ಭಯದಿಂದ ತಲೆಬಾಗುತ್ತಾನೆ) ಇಲ್ಲಿ 'ತಪ್ಪದೆ ಪೇಳಿಂ' ಎಂಬ ಮಾತು ಬರಲು ಕರ್ಣನಿಗೆ ಮುತ್ತಿನ ಸರವೂ ಬೇಡ, ಮತ್ತೇನೂ ಮಾತೂ ಬೇಡ. ಇಲ್ಲಿಂದ ಹೋದರೆ ಸಾಕು ಎನಿಸಿರಬೇಕು.

೧೬. ಮೇಲೆ ಹೆಸರಿಸಿದ, ಶ್ರೀ ವೆಂಕಟರಾಯಾಚಾರ್ಯರು ಬರೆದ ಲೇಖನದಲ್ಲಿ -

ಭಾನುಮತಿ (ಕೌರವನಲ್ಲಿ) ನೆತ್ತಮನಾಡಿ ಸೋತಳು ಸೋಲಮನೀವುದೆಂದು (ಕೌರವ) ಕಾಡುತ್ತಿರೆ ಲಂಬಣವು ಪರಿಯಿತು. ಮುತ್ತಿನ ಕೇಡನೆ ನೋಡಿ ನೋಡಿ (ಭಾನುಮತಿ)

ಬಳ್ಕಿದಳು. 'ಏವಮಿಲ್ಲದೆ ತಪ್ಪದೆ, ಇವನಾವುದೂ ಪೇಳಿ' ಎಂದು ಸ್ವಗತವಾಗಿ ದುರ್ಯೋಧನ ಹೇಳಿದನು. ಹೀಗೆಂದ ಇಂತಹ ಭೂಪೋತ್ತಮನನ್ನು ಬಿಸುಟ್ಟು, (ಇಲ್ಲಿ) ಇರದೆ, ನಿಮ್ಮಲ್ಲಿ ಹೊಕ್ಕರೆ, (ಈ ಕರ್ಣನು) ಬೇಡನಲ್ಲವೆ?' ಎಂದು ಹೀಗೆ ಕರ್ಣ ಕೃಷ್ಣನಿಗೆಂದನು.

೧೭. 'ನಂದಾ ನೆನಪು' (ಪ್ರಕಾಶಕರು ಉಷಾ ಸಾಹಿತ್ಯ ಮಾಲೆ, ಮೈಸೂರು - ೧-೧೯೭೨) ಎಂಬ ತಮ್ಮ ಲೇಖನಾದಿ ಸಮುಚ್ಚಯದಲ್ಲಿ, ಶ್ರೀ ಕ.ವೆಂ. ರಾಘವಾಚಾರ್ ಅವರ "Adi Kavi Pampa' ಎಂಬ ಲೇಖನದಲ್ಲಿ =

When I and Queen Bhanumati were playimg dice in the presence of Duryodhana, I teased her to surrender the wager, her necklace, because she lost the game. She was loath to yield and resisted and in the struggle the necklace, snapped. I stood shivering all over the frame at the sight of the scattered pearls. The king without a trace of jealousy, asked me if he could pick them up. Oh, tell me! were I to forsake such a king and come over to you, will I not be a Beda (Unwanted vyadha)[2]

೧೮. ತೆಕ್ಕುಂಜ ಕೃಷ್ಣಭಟ್ : ದುರ್ಯೋಧನನ ಅಂತಃಪುರದಲ್ಲಿ, ಕರ್ಣನೂ ಇದ್ದಾಗ, ಭಾನುಮತಿಯೂ ಕೌರವನೂ ನೆತ್ತನ್ನಾಡುತ್ತಿದರು. ಅದರಲ್ಲಿ ಭಾನುಮತಿ ಸೋತಳು. ಸೋತ ಭಾನುಮತಿ ಸೋಲವನ್ನು ಕೊಡಬೇಕಾಗಿದ್ದರೂ ಅವಳು ಕೊಡಲಿಲ್ಲ. (ಸೋತ ಹೆಣ್ಣು ಸೋಲವನ್ನು ಕೊಡದೆ ಜಾರಿಕೊಳ್ಳುವ ಸ್ವಭಾವದವಳೆಂದು ಮುದ್ದಣ್ಣನೂ ತನ್ನ 'ರಾಮಾಶ್ವಮೇಧ'ದ ಕಟ್ಟಕಡೆಯ ಆಶ್ವಾಸದಲ್ಲಿ ತೋರಿಸಿಕೊಟ್ಟಿದ್ದಾನೆ) ಇಲ್ಲಿ, ಸೋತವರು ಕೊಡಬೇಕಾದುದೇನು ಎಂದು ಸೂಚಿತವಾಗಿಲ್ಲ. ಕಿರೀಟದಿಂದ ಕೆನ್ನೆಯ ಮೇಲೆ ತೊನೆದಾಡುವಂತೆ ಇಳಿಯ ಬಿಟ್ಟ ಕುಚ್ಚು ಎಂದರೆ ಇಬ್ಬರ ಕಿರೀಟದಲ್ಲಿಯೂ ಇರುವ ಆ ಕುಚ್ಚೇ ಪಣವಾಗಿಟ್ಟ ವಸ್ತುವಾಗಿತ್ತೆಂದು ಹೇಳುವುದು ಸರಿಯಾಗುತ್ತದೆ. ಮುತ್ತಿನ ಹಾರವೆಂದಿದ್ದರೂ ಸೊಂಟದ ಪಟ್ಟಿಯಲ್ಲಿ (ಒಡ್ಯಾಣದಲ್ಲಿ) ತೂಗಾಡುವ ಕುಚ್ಚ ಎಂದಿದ್ದರೂ ಸಮರ್ಪಕವಾಗುತ್ತದೆ. ಇಲ್ಲಿ ಯಾವುದನ್ನು ತೆಗೆದುಕೊಳ್ಳೋಣ? ಬಿದ್ದ ಮುತ್ತುಗಳನ್ನು ಆಯ್ದುಕೊಳ್ಳುವುದೋ ಎಂಬಲ್ಲಿ ಅಗ್ರಾಮ್ಯತಾ ಗುಣದ ಶ್ಲೇಷವಿದೆ ಯೆಂದು ಒಪ್ಪಿಕೊಳ್ಳುವುದಾದರೆ, ಕಿರೀಟದಿಂದ ತೊನೆಯುವ ಕುಚ್ಚು ಎಂಬುದೇ ಸಮಂಜಸ. ಏಕೆಂದರೆ ಬೇಂದ್ರೆಯವರ 'ಬಡವ-ಬಡವಿ' ಎಂಬ ಕವನದಲ್ಲಿ ಆತ ಕೊಟ್ಟ ವಸ್ತು ಒಡವೆ! ಅವಗೆ ನನಗೆ ಗೊತ್ತು! ತೋಳುಗಳಿಗೆ ತೋಳ ಬಂಧಿ! ಕೆನ್ನೆ ತುಂಬ ಮುತ್ತು ॥ ಎಂಬಲ್ಲಿ ಈ 'ಕೆನ್ನೆ ತುಂಬ ಮುತ್ತು' ಎಂಬುದು ವಸ್ತುಧ್ವನಿಗೆ ಹೇಗೆ ಉದಾಹರಣೆ ಯಾಗುತ್ತದೆ ಎಂಬುದನ್ನು ಡಾ. ಕೆ. ಕೃಷ್ಣಮೂರ್ತಿಯವರು ಆನಂದವರ್ಧನನ

'ಧ್ವನ್ಯಾಲೋಕ'ದ ಭಾಷಾಂತರದ ಪೀಠಿಕೆಯಲ್ಲಿ ವಿಷದೀಕರಿಸಿದ್ದಾರೆ. ದುರ್ಯೋಧನನ ರಸಿಕತೆಯಿಂದ ಕೆನ್ನೆತುಂಬ ಮುತ್ತನ್ನು ಪಡೆದುಕೊಳ್ಳಲೇ ಎನ್ನುವಾಗಲೂ ಕರ್ಣನು ಅಲ್ಲಿಯೇ ಇದ್ದನೆಂದ ಮೇಲೆ, ಹಾಗೆ ಹೇಳುವಲ್ಲಿ ಕೌರವನಿಗೆ ಏನೂ ಏವ (= ಜುಗುಪ್ಸೆ, ಹೇಸಿಕೆ) ಆಗಲಿಲ್ಲ ಎನ್ನುವಾಗ ಅವನು ಕರ್ಣನಿಗೆ ಎಷ್ಟು ಸ್ನೇಹವನ್ನು ತೋರಿಸಿದ್ದನು ಎನ್ನುವುದು ಸ್ಪಷ್ಟ.[3]

೧೯. ಭಾನುಮತಿ ಕರ್ಣನೊಡನೆ ಪಗಡೆಯಾಡಿದ್ದಾಳೆ. ಭಾನುಮತಿ ಸೋತಿದ್ದಾಳೆ. (ತಾನು ಸೋತಿಲ್ಲವೆಂದು ದಬಾಯಿಸುತ್ತಿದ್ದಾಳೆ) 'ಇಲ್ಲ, ನೀನು ಸೋತಿದ್ದೀಯೆ ಸೋತವರು ಕೊಡಬೇಕಾದುದನ್ನು ಕೊಡು' ಎಂದು ಕರ್ಣ ಅವಳನ್ನು ಕಾಡುತ್ತಿದ್ದಾನೆ (ಸೋತದ್ದನ್ನು ಅವಳಾಗಿಯೇ ಒಪ್ಪಿಕೊಂಡಿದ್ದರೆ ಕರ್ಣ ಕಾಡಬೇಕಾಗಿರಲಿಲ್ಲ) ಹೀಗೆ ಕಾಡುವ ಹೊತ್ತಿನಲ್ಲಿ ಅವಳ ಲಂಬಣ ಕಿತ್ತು ಹೋಯಿತು. (ಲಂಬಣವೆಂಬುದು ಕುತ್ತಿಗೆಯಿಂದ ಹೊಕ್ಕಳಿನವರೆಗೆ ಜೋತುಬೀಳುವ ಹಾರ, ಕುಳಿತು ಪಗಡೆಯಾಡುವಾಗಲಂತೂ ಅದು ನೆಲವನ್ನು ಗುಡಿಸುತ್ತದೆ) ಪಗಡೆಯಾಟದ ಪಣ ಹಾಸಿನ ಹತ್ತಿರ, ಆಡುವವರ ಬಳಿಯಲ್ಲೇ ಇರುವುದರಿಂದ, ಕರ್ಣ ಕಾಡಿ ಪಣಕ್ಕೆ ಕೈ ಚಾಚಿದಾಗ, ಲಂಬಣಕ್ಕೆ ಕೈ ತಾಗಿ, ಮುತ್ತಿನ ಹಾರ ಕಿತ್ತು, ಮುತ್ತು ಚೆಲ್ಲಿ ಹೋಯಿತು! ಅರಸಿಯ ಮುತ್ತಿನ ಹಾರ ಕಿತ್ತು ಹೋದುದನ್ನು ನೋಡಿ ಕರ್ಣನಿಗೆ ನಡುಕವುಂಟಾಯಿತು. ದುರ್ಯೋಧನನಿಗೆ ಎಲ್ಲಿ ಅಸಮಾಧಾನವಾದಿತೋ ಎಂದು ಕರ್ಣನಿಗೆ ಹೆದರಿಕೆಯಾಯಿತು. ಎಷ್ಟೇ ಆದರೂ ಆತನ ಅನುಗ್ರಹದಿಂದ ಅಂಗರಾಜನಾದವನು ! ತನಗೆ ಆಶ್ರಯದಾತನ ಅರಸಿಯಲ್ಲಿ ಈ ಸಲುಗೆ ಅಪಚಾರದ ಪರಮಾವಧಿ ಎಂದು ಅಂಜಿದನು. ಆದರೆ ಅಲ್ಲಿಯೇ ಇದ್ದ ದುರ್ಯೋಧನನಿಗೆ, ಇದನ್ನು ಕಂಡರೂ ಅಸಹನೆಯಾಗಲಿಲ್ಲ. 'ಏನಯ್ಯಾ ಕರ್ಣ! ಏನು ಭಾನುಮತೀ! ಚೆದರಿ ಹೋಗಿರುವ ಮುತ್ತುಗಳನ್ನು ನಾನೇ ಆಯ್ದುಕೊಡಲೇ ಹೇಳಿ' ಎಂದನು. ಇದು ಜಿ.ಪಿ. ರಾಜರತ್ನಂ ಅವರ ಅಭಿಪ್ರಾಯ.[4]

ಈ ಚರ್ಚೆಯ ಮುಖ್ಯವಾದ ಸಮಸ್ಯೆಗಳೆಂದರೆ -

೧. ಲಂಬಣವೆಂದರೇನು?
೨. ಬಳ್ಕಿದುದು ಯಾರು?
೩. ಏವ ಎಂದರೇನು?
೪. ಆಯ್ವುದೋ, ಆವುದೋ ಎಂಬ ಪಾಠಾಂತರಗಳಲ್ಲಿ ಸರಿ ಯಾವುದು?
೫. 'ಪೇಳಿಂ' ಎಂಬುದರ ಅರ್ಥವೇನು?
೬. ನೆತ್ತವಾಡಿದುದು ಇಬ್ಬರೇ ಮೂವರೇ?
೭. ಇಬ್ಬರೇ ಆಡಿದುದಾದಲ್ಲಿ ಭಾನುಮತಿಯೊಡನೇ ಆಡಿದುದು ಕರ್ಣನೇ ದುರ್ಯೋಧನನೇ?
೮. ಪಂಪನ ದೃಷ್ಟಿಯೇನು?[5]

ಇವುಗಳಲ್ಲಿ ಒಂದರಿಂದ ಆರಂಭಿಸಿ ಐದರವರೆಗಿನ ಸಮಸ್ಯೆ ವ್ಯಾಕರಣ ಮತ್ತು ಅನ್ವಯಾರ್ಥಗಳಿಗೆ ಸಂಬಂಧಿಸಿರುವುದು. ಪಂಪನ ಪದ್ಯದ ನೆಪದಲ್ಲಿ ನಡೆದ ಈ ಚರ್ಚೆಯಲ್ಲಿ ಪ್ರಾಸಂಗಿಕವಾಗಿ ಕನ್ನಡ ಭಾಷೆಯ ವೈಶಿಷ್ಟ್ಯದ ಚರ್ಚೆಯೂ ಸೂಕ್ಷ್ಮಾತಿ ಸೂಕ್ಷ್ಮವಾಗಿ ನಡೆದಿದೆ. ಅದು ನಮ್ಮ ಹಿರಿಯ ವಿದ್ವಾಂಸರು ವಾಗ್ವಾದಗಳಲ್ಲಿ ಎಷ್ಟು ಎಚ್ಚರವನ್ನು ವಹಿಸುತ್ತಾರೆಂಬುದಕ್ಕೂ ಅವರ ವಿದ್ವತ್ತಿನ ಆಳ ಅಗಲಗಳ ಪರಿ ಎಂತೆಂಬುದಕ್ಕೂ ಸಾಕ್ಷಿಯಾದುದು. ಕೊನೆಯ ಮೂರು ಸಮಸ್ಯೆಗಳು ಒಟ್ಟು ಪದ್ಯದ ಭಾವಾರ್ಥಕ್ಕೆ ಸಂಬಂಧಿಸಿದವುಗಳಾಗಿವೆ. ಆದರೂ ಈ ಎರಡು ರೀತಿಯ ಸಮಸ್ಯೆಗಳು ಪರಸ್ಪರ ಪೂರಕವಾಗಿವೆ ಎಂಬುದರ ಬಗೆಗೂ ಅನುಮಾನಗಳಿಲ್ಲ. ಇದೀಗ ಈ ಮೇಲಣ ಸಮಸ್ಯೆಗಳ ಚರ್ಚೆಯ ಮುಖ್ಯಾಂಶಗಳತ್ತ ಬರಬಹುದು.

ಲಂಬಣ - ಹಾರ, ಕುಚ್ಚು, ಗುದಿ, ಕಿರೀಟದಿಂದ ಕೆನ್ನೆಗೆ ತಾಗುವಂತೆ ತೂಗಾಡುವ ಮುತ್ತಿನ ಗೊಂಡೆ

ಬಳ್ಕು - ಮನಮರುಗು, ನಾಚಿಕೆಯಿಂದ ತಲೆತಗ್ಗಿಸು, ಹೆದರಿಕೆಯಿಂದ ನಡುಗು, ಭಯದಿಂದ ತಲೆಬಾಗು, ಅಳುಕು.

ಏವ - ವ್ಯಥೆಪಡು, ಅಸಮಾಧಾನಪಡು, ಮನಸ್ತಾಪಗೊಳ್ಳು, ಕೋಪಿಸಿಕೊಳ್ಳು, ಚಲಚಿತ್ತನಾಗು.

ಆಯ್ತುವುದೊ > ಆವುದೋ ಎಂಬ ಎರಡು ಪ್ರಯೋಗಗಳಲ್ಲಿ ಆವುದೋ ಎಂಬುದು ಸರಿ. ಎಲ್ಲ ಹಸ್ತಪ್ರತಿಗಳಲ್ಲಿ ಕಂಡು ಬರುವಂತೆ ಇರುವುದೇ ಸರಿ.

ಹೇಳಿ = ಒಂದು ಪ್ರಯೋಗ ವೈಶಿಷ್ಟ್ಯ. ಹವ್ಯಕ ಭಾಷೆಯಲ್ಲಿರುವಂತೆ, 'ನೀನು ಸುಮ್ಮನೆ ಕೂರು ಹೇಳಿ' (ನೀನು ಸುಮ್ಮನೆ ಕೂತುಕೋಂತ)

ಇನ್ನು ಕೊನೆಯ ಮೂರು ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ವಿದ್ವಾಂಸರಲ್ಲಿ ಬಹುವಾದ ವಾಗ್ವಾದ ನಡೆದಿದೆ. ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನೆರೆದ ಉಭಯ ಬಲದ ವರೆಲ್ಲರೂ ಘಟಾನುಘಟಿಗಳೇ! ಪ್ರಸ್ತುತ ಚರ್ಚೆಯನ್ನು ಮೂರು ರೀತಿಯಲ್ಲಿ ಸಮೀಕರಿಸಬಹುದು -

೧. ಕರ್ಣ X ಭಾನುಮತಿ = ದುರ್ಯೋಧನ

೨. ಭಾನುಮತಿ X ದುರ್ಯೋಧನ = ಕರ್ಣ

೩. ಕರ್ಣ X ದುರ್ಯೋಧನ X ಭಾನುಮತಿ'

ಮೊದಲನೆಯ ತರ್ಕದ ಪರವಾಗಿರುವವರು ಡಿ.ವಿ.ಎಸ್., ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ, ಜಿ.ಪಿ.ರಾಜರತ್ನಂ, ಕುವೆಂಪು, ಡಿ.ಎಲ್.ಎನ್., ತ.ಸು.ಶಾಮರಾಯ,

ಆರ್. ರಾಚಪ್ಪ ಮತ್ತು ಕ.ವೆಂ. ರಾಘವಾಚಾರ್ ಮೊದಲಾದವರು. ಎರಡನೆಯ ತರ್ಕದ ಪರವಾಗಿರುವವರು ಪದ್ಮನಾಭ, ಮುಳಿಯ ತಿಮ್ಮಪ್ಪಯ್ಯ, ಭೀ. ಪಾರಿಶವಾಡ, ವೆಂಕಟಾಚಾರ್ಯ, ರೇಣುಕಾಚಾರ್ಯ ಮತ್ತು ತೆಕ್ಕುಂಚ ಗೋಪಾಲಕೃಷ್ಣ ಭಟ್ ಮೊದಲಾದವರು. (ಇವರನ್ನು ಸೇಡಿಯಾಪು ಕೃಷ್ಣಭಟ್ಟರು ಅನುಮೋದಿಸುತ್ತಾರೆ)

ಈ ಎರಡೂ ತರ್ಕಕ್ಕಿಂತ ಭಿನ್ನವಾಗಿ ಮೂರನೇಯದೇ ಆದ ತರ್ಕವನ್ನೂ ಕೆ.ವಿ. ಕೃಷ್ಣಭಟ್ ಮಾತ್ರ ಮಂಡಿಸಿದ್ದಾರೆ.

ಭಾಗ - ೨

ಬಹುಕಾಲದಿಂದ ನಡೆದ ಬಂದ ಈ ವಾಗ್ವಾದಕ್ಕೆ ಕಳಶಪ್ರಾಯವಾಗುವಂತೆ ಸೇಡಿಯಾಪು ಕೃಷ್ಣಭಟ್ಟರು 'ಭಾನುಮತಿಯ ನೆತ್ತ' ಎನ್ನುವ ವಿದ್ವತ್ ಪೂರ್ಣ ಲೇಖನವನ್ನು 'ಪ್ರಬುದ್ಧ ಕರ್ನಾಟಕ' ದಲ್ಲಿ ೧೯೭೬ರಲ್ಲಿ ಬರೆದರು.[7] ಈ ಲೇಖನಕ್ಕೆ ಮಾತ್ರವಲ್ಲದೆ ಈವರೆಗಿನ ಎಲ್ಲ ವಾಗ್ವಾದಗಳ ಅಂತಿಮ ನಿರ್ಣಯವೆಂಬಂತೆ 'ನೆತ್ತ ಮತ್ತು ಮುತ್ತು' ಎಂಬ ಲೇಖನವನ್ನೂ ೧೯೯೧ರಲ್ಲಿ ಬರೆದರು. ಸೇಡಿಯಾಪು ಬಯಸಿದಂತೆಯೇ ಅಲ್ಲಿಂದ ಮೇಲೆ ಈ ಚರ್ಚೆ ಒಂದು ನಿಲುಗಡೆಗೆ ಬಂದಂತಿದೆ. ಸೇಡಿಯಾಪು ಅವರ ಪರಿಭಾಷೆಯಲ್ಲಿಯೇ ಹೇಳುವುದಾದರೆ 'ಶಾಪಹತ'ಳಾದ ಪಂಪನ 'ಮುದ್ದಿನ ಮಗಳು' ಶಾಪವಿಮೋಚನೆ ಗೊಂಡಿದ್ದಾಳೆ. ಸೇಡಿಯಾಪು ಅವರ ಲೇಖನ ಈ ಎಲ್ಲ ವಾಗ್ವಾದಗಳಿಗೆ ಅಂತಿಮ ತೀರ್ಪನ್ನು ಇತ್ತಿರುವಂತೆ ಕಂಡು ಬರುವುದರಿಂದ ಈ ಭಾಗದಲ್ಲಿ ಪ್ರತ್ಯೇಕವಾಗಿ ಆ ಲೇಖನದ ಆಶಯಗಳನ್ನು ಗಮನಿಸಲಾಗುವುದು. ಭಾಗ - ೩ರಲ್ಲಿ ಮಂಡಿತವಾಗುವ ನನ್ನದೇ ಆದ ಅಭಿಪ್ರಾಯಗಳಿಗೆ ಪೂರಕವಾಗಿಯೂ ಈ ಭಾಗ ಇರುವುದರಿಂದ ಅದು ಯಥೋಚಿತವೂ ಆಗುವುದು.

ಈ ಪದ್ಯವನ್ನು ಸೇಡಿಯಾಪು ಅವರು ಹೀಗೆ ವಿಂಗಡಿಸಿದ್ದಾರೆ -

ನೆತ್ತಮನಾಡಿ,
ಭಾನುಮತಿ ಸೋಲ್ತೊಡೆ
ಸೋಲಮನೀವುದೆಂದು ಕಾಡುತ್ತಿರೆ
ಲಂಬಣಂ ಪರಿಯೆ
ಮುತ್ತಿನ ಕೇಡನೆ ನೋಡಿ, ನೋಡಿ ಬಳ್ಕುತ್ತಿರೆ,

ಏವಮಿಲ್ಲದಿವನಾವುದೋ ತಪ್ಪದೆ ಪೇಳಿಯೆಂಬ ಭೂಪೋತ್ತಮನಂ ಬಿಸುಟ ಇರದೆ
ನಿಮ್ಮೊಳೆ ಪೊಕ್ಕೊಡೆ
ಬೇಡನಲ್ಲವೇ?

ಮುಂದೆ ಪದಗಳ ಅರ್ಥನಿರ್ಣಯವನ್ನು ಹೀಗೆ ಮಾಡಲಾಗಿದೆ -

ಪೇಳಿಂ = ಅಂತೆ (ತೆಕ್ಕುಂಜದವರ ಅರ್ಥ ನಿರ್ಣಯವನ್ನೇ ಪೂರ್ಣ ಪ್ರಮಾಣದಲ್ಲಿ ಒಪ್ಪಲಾಗಿದೆ)

ಬಳ್ಕು = ಬಾಗು

ಏವ = ತಿರಸ್ಕಾರ

ತಪ್ಪದೆ = ಕಳೆದುಕೊಳ್ಳದೆ ಅಥವಾ ಬಿಟ್ಟು ಬಿಡದೆ

ಇರದೆ = ನಿಃಶಂಕೆಯಿಂದ

ಬೇಡ = ಅನಾರ್ಯ, ಅಸಭ್ಯ

ಪದಗಳ ಈ ಅರ್ಥನಿರ್ಣಯದಿಂದ ಅದರ ಅನುವಾದವು ಹೀಗಾಗುತ್ತದೆ -

'ಈ ಕರ್ಣನ ಸಮಕ್ಷಮದಲ್ಲಿ - ತನ್ನೊಡನೆ (ಎಂದರೆ ಭೂಪೋತ್ತಮನೊಡನೆ) ಭಾನುಮತಿ ನೆತ್ತವನಾಡಿ ಸೋತು ಹೋದಾಗ, ಪಣವನ್ನು (ಮುತ್ತು) ಕೊಡು! ಎಂದು ತಾನು (ಭೂಪೋತ್ತಮ) ಅವಳನ್ನು ಕಾಡುತ್ತಿರುವಾಗ ಲಂಬಣ (ಮುತ್ತಿನ ಹಾರ ಅಥವಾ ಮುತ್ತಿನ ಕುಚ್ಚು) ಹರಿಯುವಾಗ ಮುತ್ತುಗಳು ಬೀಳುತ್ತಿರುವುದನ್ನೇ ನೋಡುತ್ತ ಅವಳು ಲಜ್ಜೆಯಿಂದ ಬಾಗುತ್ತಾ ಇರುವಾಗ, ಇವು (ಈ ಮುತ್ತುಗಳು) ತುಚ್ಛವೆಂಬ ಭಾವನೆಯನ್ನು ಬಿಟ್ಟು, ಈ ಮುತ್ತುಗಳನ್ನಾದರೂ ಕಳೆದುಕೊಳ್ಳದೆ ಎತ್ತಿಕೊಳ್ಳುವುದೋ ಎಂದು ತನ್ನ ಯೋಚನೆ ಎನ್ನುತ್ತಿರುವ - ಇಂತಹ (ಸಹೃದಯನೂ ಸುಸ್ನಿಗ್ಧನೂ ಆದ) ಭೂಪೋತ್ತಮನನ್ನು, ಯುಕ್ತಾಯುಕ್ತ ವಿವೇಕವಿಲ್ಲದೆ ದೂರ ಮಾಡಿ ನಿಮ್ಮೊಂದಿಗೆ ಕೂಡಿಕೊಂಡರೆ ಈ ಕರ್ಣನು ಅಸಭ್ಯನೇ ಸೈ'!

ತೆಕ್ಕುಂಜದವರು ಎತ್ತಿಕೊಂಡ ಪ್ರಶ್ನೆಗಿಂತ ಬೇರೆಯದೇ ಆದ ಪ್ರಶ್ನೆಗಳು ಸೇಡಿಯಾಪು ಅವರಿಗೆ ಕಾಡಿವೆ. ಅವುಗಳೆಂದರೆ -

೧.'ನೆತ್ತಮನಾಡಿ' ಎಂಬುದು ಭಾನುಮತಿ ಸೋಲ್ತೊಡೆ ಎಂಬುದರಲ್ಲಿ ನೇರವಾಗಿ ಅನ್ವಯಿಸುವುದಾದರೂ, ನೆತ್ತವು ಒಬ್ಬರೇ ಆಡುವ ಆಟವಲ್ಲವಾದುದರಿಂದ 'ಆಡಿ' ಎಂಬ ಕ್ರಿಯೆಗೆ ಇಲ್ಲಿ 'ಭಾನುಮತಿ' ಎಂಬುದಲ್ಲದೆ, ಒಂದು ಸಹಕರ್ತೃವಿನ ಆಕಾಂಕ್ಷೆಯೂ ಇದೆ. ಆದರೆ ಅದನ್ನಿಲ್ಲಿ ಹೇಳಿಲ್ಲ.

೨. ಸೋಲಮನೀವುದೆಂದು ಕಾಡುತ್ತಿರೆ - ಇಲ್ಲಿ 'ಕಾಡುತ್ತಿರೆ' ಎಂಬ ಕ್ರಿಯೆಯ ಕರ್ತೃ ಹೇಳಲ್ಪಟ್ಟಿಲ್ಲ.

೩. ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ ಎಂಬುದರಲ್ಲಿಯೂ ಕರ್ತೃ ಪದವಿಲ್ಲ.

೪. ನೆತ್ತದಾಟದಲ್ಲಿ ಒಡ್ಡಿದ್ದ ಪಣವೇನು?

೫. ಸೋತ ಭಾನುಮತಿ ಪಣವನ್ನೊಪ್ಪಿಸದಿರಲು ಕಾರಣವೇನು?

ಮೇಲೆ ಉಲ್ಲೇಖಿಸಿದ ಮೂರು ಸಮಸ್ಯೆಗಳಲ್ಲಿ ಕರ್ತೃಗಳು ಅನುಕ್ತವಾಗಿರುವುದೇ ಈ ಪದ್ಯ ಪಾಷಾಣವಾಗಿರುವುದಕ್ಕೆ ಕಾರಣವೆನ್ನುತ್ತಾರೆ, ಸೇಡಿಯಾಪು. ಮುಂದುವರಿದು ಅವರು ಕೊನೆಯ ಎರಡು ಸಮಸ್ಯೆಗಳನ್ನು ಎತ್ತುತ್ತಾರೆ. ಈ ಎರಡು ಪ್ರಶ್ನೆಗಳನ್ನು ಈ ಚರ್ಚೆಯಲ್ಲಿ ಮೊದಲ ಬಾರಿಗೆ ಸಮಸ್ಯೀಕರಣಗೊಳಿಸಿದವರು (ಪಾರಿಶವಾಡರು ೪ನೆಯ ಸಮಸ್ಯೆಗೆ ಉತ್ತರಿಸಿದ್ದರು) ಸೇಡಿಯಾಪು ಅವರೇ ಆದುದರಿಂದ ಅವರ ಇಡೀ ಲೇಖನ ಈ ಎರಡು ಪ್ರಶ್ನೆಗಳಿಗೆ ಕೊಟ್ಟ ಉತ್ತರವೇ ಆಗಿದೆ.

ನೆತ್ತದಾಟದಲ್ಲಿ ಒಡ್ಡಿದ ಪಣವೇನು ಎಂಬ ಪ್ರಶ್ನೆಯನ್ನು ಬಹಳ ಜತನದಿಂದ ಸೇಡಿಯಾಪು ಉತ್ತರಿಸಿದ್ದಾರೆ.

ಏವಂ + ಇಲ್ಲದೆ	= ಜುಗುಪ್ಸೆ ಇಲ್ಲದೆ = ತುಚ್ಛವೆಂಬ ಭಾವನೆಯಿಲ್ಲದೆ
ಇವಂ	= ಇವುಗಳನ್ನು (ಎಂದರೆ, ಈ ಮುತ್ತುಗಳನ್ನು)
ಆವುದೋ	= ಹೆಕ್ಕುವುದೋ = ಆಯ್ದುಕೊಳ್ಳುವುದೋ
ತಪ್ಪದೆ	= ಕಳೆದುಕೊಳ್ಳದೆ - ಬಿಟ್ಟು ಬಿಡದೆ
ಪೇಳಿಂ	= 'ಅಂತ' (= ಎಂದು ನನ್ನ ಯೋಚನೆ)
'	= 'ಏವಮಿಲ್ಲದೆ ತಪ್ಪದೆ ಇವಂ ಆವುದೋ ಪೇಳಿಂ'

ಬಹುಮುಖ್ಯವಾದ ಈ ಪದಾನ್ವಯದ ಅನಂತರ ಸೇಡಿಯಾಪು ಅವರು 'ಮುತ್ತು' ಎಂದರೆ 'ಲಂಬಣದ ಮುತ್ತುಗಳಲ್ಲ' ಬದಲಿಗೆ 'ಚುಂಬನ' ಎಂಬುದಾಗಿ ವಿವರಿಸುತ್ತಾರೆ. ಕ್ರೀಡಾನಿಯಮದಂತೆ ಸೋತವರು ಗೆದ್ದವರಿಗೆ 'ಮುತ್ತು' ಕೊಡಬೇಕೆಂದು ಪಣವಾಗಿತ್ತು. ನೆತ್ತದಲ್ಲಿ ಭಾನುಮತಿಯು ಸೋತಳು. ಈಗ ಗೆದ್ದವನು 'ಸೋಲ'ವನ್ನು (ಪಣವನ್ನು) ಈವುದೆಂದು ಕಾಡಿದ. ಭಾನುಮತಿಯು ಲಜ್ಜಾಭಾರದಿಂದ ಬಾಗಿದಳು. ಈಗ ಕುತೂಹಲದಿಂದ ಇನ್ನೊಂದು ಸಮಸ್ಯೆ: ಸೋಲಮನೀವುದೆಂದು ಕಾಡಿದ ಈ 'ಭೂಪ' ನಾದರೂ ಯಾರು? 'ಭಾನುಮತಿಯ ನೆತ್ತ' ಎಂಬ ಲೇಖನದಲ್ಲಿ ಒಂದಷ್ಟು ಅಳುಕಿನಿಂದ ಆ 'ಭೂಪ'ವನ್ನು ತೋರಿಸಿದ ಸೇಡಿಯಾಪು ಅವರು 'ನೆತ್ತ ಮತ್ತು ಮುತ್ತು'[೮] ಎಂಬ ಅನಂತರದ ಲೇಖನದಲ್ಲಿ ಸಾರ್ವಜನಿಕರಿಗೆ ಅವನನ್ನು ಧೈರ್ಯದಿಂದ ಹಿಡಿದು ಕೊಟ್ಟೇ ಬಿಟ್ಟಿದ್ದಾರೆ. ದಂಪತಿಗಳು ನೆತ್ತವನ್ನಾಡುವಾಗ ಚುಂಬನವು ಪಣವಾಗಿರುತ್ತಿತ್ತು ಎಂದು, 'ಅಮರುಕ ಶತಕ' (ಅಮರುಕ ಕವಿ) 'ಶಾರ್ಙ್ಗಧರ ಪದ್ಧತಿ' (ಶಾರ್ಙ್ಗಧರ) 'ಸಾಹಿತ್ಯ ದರ್ಪಣ' (ವಿಶ್ವನಾಥ ಕವಿ) ಗಳಿಂದ ಸೋದಾರಣವಾಗಿ ಪ್ರತಿಪಾದಿಸಿದ್ದಾರೆ. ಹೀಗೆ ಭಾನುಮತಿಯನ್ನು ಕಾಡಿದ ಭೂಪನು, ಭೂಪೋತ್ತಮನಾದ ದುರ್ಯೋಧನನೇ

ಎಂದಾಯಿತು. ಇಲ್ಲಿ ಕರ್ಣನಿಗೇನು ಕೆಲಸ ? ಅಂತಃಪುರದಲ್ಲಿ ನಡೆದ ಈ ಸರಸ ಕೇಳಿಯು ಕರ್ಣನ ಸಮಕ್ಷಮದಲ್ಲೇ ನಡೆದಿತ್ತು. ಏಕೆಂದರೆ ಕರ್ಣ ಮತ್ತು ದುರ್ಯೋಧನರ ಸ್ನೇಹವು 'ಒಡಲೆರಡೊಂದೆ ಜೀವ' ಎಂಬಷ್ಟು ಪುಣ್ಯಶಾಲಿಯಾದುದಾಗಿತ್ತು. ಈಗ ಪೇಚಿಗೆ ಸಿಲುಕಿದುದು ಭಾನುಮತಿ. ಸೋಲವನ್ನೇನೋ ಕೊಡಬಹುದು. ಆದರೆ ಕಣ್ಣ ಮುಂದೆ ಕರ್ಣ ಇರುವಾಗ (ಬೇರೊಂದು ಗಂಡು ಇರುವಾಗ) ಅವಳು ಹೇಗೆ ತಾನೇ ಆ ಸೋಲವನ್ನು ಈಯುವಳು? ಎಷ್ಟಾದರೂ ಅವಳು (ಹಿಂದಿನ ಕಾಲದ!) ಹೆಣ್ಣಲ್ಲವೇ? (ಇದು ಸೇಡಿಯಾಪು ಅವರದೇ, ಕೊಂಕಿದ ಕೊಂಕು!)

ಸೇಡಿಯಾಪು ಅವರ 'ಭಾನುಮತಿಯ ನೆತ್ತ' ಹಾಗೂ 'ನೆತ್ತ ಮತ್ತು ಮುತ್ತು' ಎಂಬೆರಡು ಲೇಖನಗಳ ಮುಖ್ಯ ಪ್ರತಿಪಾದನೆಯಿದು. ಮೊದಲ ಲೇಖನದಲ್ಲಿ 'ಪದ್ಯ ಪಾಷಾಣ'ದ 'ಶಾಪವಿಮೋಚನೆ' ಯಾದುದರ ಬಗೆಗೆ ಅವರು ಕಿಂಚಿತ್ ಅಧೀರರಾಗಿದ್ದರು. ಆದರೆ ಎರಡನೆಯ ಲೇಖನದಲ್ಲಿ 'ಆ ನನ್ನ ಲೇಖನದಲ್ಲಿ (ಭಾನುಮತಿಯ ನೆತ್ತ) ಮಾಡಲಾದ ಪ್ರತಿಪಾದನೆಯ ಸಾಧುತ್ವದಲ್ಲಿ ಯಾವ ಸಂದೇಹವೂ ಕನ್ನಡ ವಿದ್ವಜ್ಜನರಲ್ಲಿ ಹುಟ್ಟುವುದಕ್ಕೆ ಆಸ್ಪದವಿನ್ನು ಇರುವುದಿಲ್ಲ' ಎಂದು ವಿನಮ್ರವಾಗಿ (ಧೈರ್ಯದಲ್ಲಿ) ಹೇಳಿದ್ದಾರೆ.

ಮುಂದಿನ ಭಾಗದಲ್ಲಿ ಈ ಯಾವುದೇ ವಿಷಯಗಳನ್ನು ಅಲ್ಲಗಳೆಯದೇ, ನಿಲುಗಡೆಗೆ ಬಂದಿರುವ ಈ ವಾಗ್ವಾದಗಳಿಗೆ ಚಾಲನೆಯನ್ನು ಕೊಡುವ ಪ್ರಯತ್ನ ಮಾಡಲಾಗಿದೆ.

ಭಾಗ - ೩

ಈಗಾಗಲೇ-ಹೇಳಿದಂತೆ ಕವಿಗಳು ಮತ್ತು ವಿದ್ವಾಂಸರಲ್ಲಿ ಎರಡು ಪರಿಕಲ್ಪನೆಗಳು ಬೆಳೆದು ಬಂದಿವೆ. ಕವಿಗಳು ಕಾವ್ಯವನ್ನು 'ವಾಗ್ವಿಲಾಸ'ವೆಂತಲೂ ವಿದ್ವಾಂಸರು ಅಂತಹ ವಾಗ್ವಿಲಾಸಗಳನ್ನು 'ಪದ್ಮಪಾಷಾಣ' ವೆಂತಲೂ ಕಾಣುತ್ತ ಬಂದಿದ್ದಾರೆ. ಇದರರ್ಥ ಎಲ್ಲ ಪದ್ಯಗಳನ್ನು ಪಾಷಾಣವೆಂದು ಕರೆಯುತ್ತಾರೆ ಎಂದಲ್ಲ. ಆದರೆ 'ಪದ್ಯ ಪಾಷಾಣ'ವೆಂದು ಕರೆಯಲಾಗುವ ರಚನೆಗಳ ಚರ್ಚೆಯು ಬಹುಮಟ್ಟಿಗೆ ವಿದ್ವಾಂಸರ ಓದಿನ ಕ್ರಮವೆಂದೇ, 'ವಚೋ ವಿಲಾಸ'ವೆಂದೇ ಭಾವಿಸಬೇಕಾಗುತ್ತದೆ. ಆಗ ವಾಗ್ವಿಲಾಸವು ಅದಕ್ಕೆ ಪೂರಕವೆನಿಸುತ್ತದೆ. ಬಹುಮಟ್ಟಿಗೆ ಕನ್ನಡದ ಹಿರಿಯರ ವಾಗ್ವಾದವೇದರೆ ಈ ವಾಗ್ವಿಲಾಸ ಮತ್ತು ವಚೋವಿಲಾಸಗಳ ನಡುವಿನ ಕೊಡುಕೊಳೆಗಳೇ ಆಗಿರುತ್ತದೆ. ಅಂದರೆ ಕವಿಗಳು ವಿಶೇಷವಾಗಿ ವಾಗ್ವಿಲಾಸ ಮೆರೆಯುವ ರಚನೆಗಳನ್ನು ವಿದ್ವಾಂಸರು 'ಪದ್ಯ ಪಾಷಾಣ'ಗಳೆಂದು ಕರೆಯುತ್ತ, ಅದರ 'ಶಾಪ ವಿಮೋಚನೆ' ಗೊಳಿಸುತ್ತಾರೆ. ಹೀಗೆ ಶಾಪವಿಮೋಚನೆಗೊಳಿಸಬೇಕಾದುದು ಕಾವ್ಯಪ್ರಿಯರ ಕರ್ತವ್ಯವೆಂಬುದಾಗಿ ಅವರು ಭಾವಿಸಿದ್ದರು.

ಈಗ ವಾಗ್ವಿಲಾಸವು ಪದ್ಯಪಾಷಾಣವಾಗಿ ಅದರ ಶಾಪ ವಿಮೋಚನೆಯಾಗುವುದೆಂದರೆ ಏನು ಎನ್ನುವ ಮುಖ್ಯ ಪ್ರಶ್ನೆಗೆ ನಾವು ಬರಬೇಕಾಗುತ್ತದೆ. ಪಾಷಾಣ ಪದ್ಯದ

ಶಾಪವಿಮೋಚನೆಯೆಂದರೆ 'ಮೂಲಾರ್ಥ'ವನ್ನು ಶೋಧಿಸುವುದಾಗುತ್ತದೆ. ಈ ಮೂಲಾರ್ಥವು ಕವಿಯ ಅರ್ಥವಾಗಿರುತ್ತದೆ. ಈ ಮೂಲಾರ್ಥವು ಗ್ರಂಥ ಸಂಪಾದನೆಯಂತಹ ಶಿಸ್ತುಗಳನ್ನು ಜೋಡುಗೂಡಿಸಕೊಂಡು ಮೂಲ ಮಾತೃಕೆಗಳನ್ನು ಸಿದ್ಧಪಡಿಸುವ ನಿಲುವಿಗೆ ಸಂಬಂಧಿಸಿದುದು. ಅಂದರೆ ಪದ್ಯವೊಂದರಲ್ಲಿ ಕವಿಯ ಅರ್ಥವು ಏನಿತ್ತೆಂಬುದನ್ನು ಕಂಡುಕೊಳ್ಳುವಲ್ಲಿಗೆ ವಿದ್ವಾಂಸನ ಪಾತ್ರವು ಮರೆಯಾಗಿ ಸಹೃದಯನು ಪ್ರವೇಶ ಪಡೆಯುತ್ತಾನೆ. ಕಾವ್ಯ ರಸಾಸ್ವಾದನೆಯು ಮುಂದಿನ ಕ್ರಿಯೆ.

'ಭಾನುಮತಿಯ ನೆತ್ತ'ದ ಕುರಿತಾಗಿ ನಡೆದಿರುವ ಈ ಚರ್ಚೆಯು ಈ ದೃಷ್ಟಿಯಿಂದ ಮಹತ್ವವಾದುದು. ಅದು ಕೇವಲ ಆ ಪದ್ಯದ ಬಗೆಗೆ ನಡೆದ ಚರ್ಚೆಯೆಂದಾಗಲೀ, ಪಂಪನ ಕಾವ್ಯದ ಬಗೆಗೆ ನಡೆದ ಚರ್ಚೆಯೆಂದಾಗಲೀ ಭಾವಿಸದೆ ಇಡೀ ಅಭಿಜಾತ ಸಾಹಿತ್ಯದ ಕುರಿತು ಚರ್ಚೆಯೊಂದರ ಆದರ್ಶ ಮಾದರಿಯೆಂದೇ ಭಾವಿಸಬೇಕಾಗುತ್ತದೆ. ಆ ಮಾದರಿಯು ಮೂಲಾರ್ಥವನ್ನು (ಸತ್ಯವನ್ನು, ಕವಿಯ ಅರ್ಥವನ್ನು) ಕಂಡುಕೊಳ್ಳುವ ಅಂದರೆ ಅದು ಇದೆ - ಎಂದು ಭಾವಿಸುವ - ಮನೋಧರ್ಮಕ್ಕೆ ಸಂಬಂಧಿಸಿದುದು.

ಸಾಹಿತ್ಯದ ವಾಗ್ವಾದಗಳಲ್ಲಿ ಹೀಗೆ ಕವಿಕೇಂದ್ರಿತ ದೃಷ್ಟಿಕೋನಗಳು ಪ್ರಬಲವಾಗಿದ್ದ ಕಾಲವೊಂದಿತ್ತು. ಆದರೆ ಸಾಹಿತ್ಯದ ವಾಗ್ವಾದಗಳನ್ನು ನಾವೀಗ ವಾಚಕ ಕೇಂದ್ರಿತಗೊಳಿಸಿದ್ದೇವೆ. ಮುಖ್ಯವಾಗಿ ಅದು ಪಾಶ್ಚಿಮಾತ್ಯರಲ್ಲಿ ನಡೆದ ತತ್ವಶಾಸ್ತ್ರೀಯ, ಭಾಷಾ ಶಾಸ್ತ್ರೀಯ ಹಾಗೂ ಸಾಹಿತ್ಯ ಸಂಬಂಧೀ ವಾಗ್ವಾದಗಳಿಂದ ಸಾಧ್ಯವಾದುದಾಗಿರುತ್ತದೆ. ಪದಗಳು ಮತ್ತು ಅವುಗಳ ಅರ್ಥಗಳು ನೇರ ಸಂಬಂಧ ಹೊಂದಿರುತ್ತವೆ ಎಂಬ ತಿಳುವಳಿಕೆಯಿಂದ, ಪದಗಳು ಮತ್ತು ಅವುಗಳ ಅರ್ಥದ ಸಂಬಂಧವು ಯಾದೃಚ್ಛಿಕವಾಗಿರುತ್ತವೆ ಎಂಬ ತಿಳಿವಳಿಕೆಗೆ ನಾವೀಗ ಬಂದಿದ್ದೇವೆ. ಅದು ವಾಚಕನನ್ನು ಸಾಹಿತ್ಯ ಚರ್ಚೆಗಳಲ್ಲಿ ಮುನ್ನೆಲೆಗೆ ತಂದಿದೆ. ಈ ಕುರಿತ ದೃಷ್ಟಿಕೋನಗಳ ವಿಸ್ತೃತ ಚರ್ಚೆಗೆ ಇಲ್ಲಿ ಅವಕಾಶವಿಲ್ಲದಿರುವುದರಿಂದ ಪ್ರಸ್ತುತದ ವಾಗ್ವಾದಗಳನ್ನು ಆ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ. ಲೇಖನದ ಮುಂದಿನ ಭಾಗದಲ್ಲಿ ಆ ಕಡೆಗೆ ಗಮನಕೊಡಲಾಗಿದೆ.

ಸೇಡಿಯಾಪು ಅವರು 'ಸತಿ ಸಪ್ತಮಿಯ ವೈಶಿಷ್ಟ್ಯವನ್ನು ತಿಳಿಯದೆ ಪ್ರಸ್ತುತ ಪದ್ಯವನ್ನು ಅನುವಾದಿಸಿದರೆ ಯಥಾರ್ಥವು ಸ್ಫುಟವಾಗಲಾರದು'' ಎಂದಿದ್ದಾರೆ. ಇದರಿಂದ ಅವರಿಗೂ ಈ ಸಂದರ್ಭದಲ್ಲಿ ಬೇರೊಂದು ವಿಚಾರ ಹೊಳೆದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಈ ಪದ್ಯದಲ್ಲಿ ಭೂತಕಾಲದ ವೃತ್ತಾಂತವು ಅಭೂತ ಕೃದ್ವಾಚಕದಲ್ಲಿ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ ...' ತಪ್ಪದೆ ಪೇಳಿಮೆಂಬ' - ಕೊನೆಗೊಳ್ಳುತ್ತದೆ. ಇದು ಸತಿಸಪ್ತಮಿಯ ಗುಣ. ಅದು ಹಳೆಗನ್ನಡದ ಒಂದು ವಿಶೇಷ ಲಕ್ಷಣ. ಉದಾ :

ಪಾತ್ರವಾಡೆ ವಾದಕಂ ಭಾಜಿಸಿದ

ಈ ವಾಕ್ಯದಲ್ಲಿ ಎರಡು ಕ್ರಿಯೆಗಳು ಏಕಕಾಲದಲ್ಲಿ ನಡೆದುವು ಎಂಬುದಾಗಿ ಹೇಳಿದೆ. ಇದು ಇಲ್ಲಿ ಬಹಳ ಮುಖ್ಯ. ಹೊಸಗನ್ನಡದಲ್ಲಿ ನಷ್ಟವಾದ ಈ ವಿಶೇಷ ರೂಪವನ್ನು ಹೀಗೆ ಹೇಳಬಹುದು:

ಪಾತ್ರವು ಆಡಲು, ವಾದಕನು ಭಾಜಿಸಿದನು

ಈಗ ದರ್ಪಣಕಾರ ಹೇಳುವ ಈ ಸೂತ್ರವನ್ನು ಗಮನಿಸುವ -

ಪಿರಿದುಂ ಪಕ್ಷಾಂತರಮಂ
ನಿರವಿಪೆಕಾರಂ ನಿಜಾಂತಮಾದೊಡೆ ಶಬ್ದಂ ।
ಪರಿಕಿಸೆ ಧಾತ್ವಂತ್ಯದೊಳಾ ।
ವರಿಸಿರ್ಕುಂ ಲಿಂಗ ವಚನ ಪುರುಷಾಯತ್ತಂ ॥ ೨೫೦ ॥[10]

ತಾತ್ಪರ್ಯ: ಪಕ್ಷಾಂತರವನ್ನು ಹೇಳುವ 'ಎ' ಕಾರವನ್ನು ಕಡೆಯಲ್ಲಿ ಉಳ್ಳ 'ಒಡೆ' ಎಂಬ ಶಬ್ದವು ಲಿಂಗತ್ರಯ, ವಚನತ್ರಯ ಮತ್ತು ಪುರುಷತ್ರಯಗಳಲ್ಲಿ ಧಾತುವಿನ ಕಡೆಯಲ್ಲಿ ಬರುತ್ತದೆ.

ಇಲ್ಲಿ ಬಂದೊಡೆ =ಬಂದ ಪಕ್ಷದಲ್ಲಿ, ಪೋದೊಡೆ = ಹೋದ ಪಕ್ಷದಲ್ಲಿ ಎಂದರ್ಥ. ನಡುಗನ್ನಡದಲ್ಲಿ ಬಂದೊಡೆ, ಹೋದೊಡೆ, ಆದಡೆ ಎಂಬಂತಾಗಿದೆ. ಹೊಸಗನ್ನಡದಲ್ಲಿ ಬಂದರೆ, ಹೋದರೆ, ಆದರೆ ಎಂದಾಗುತ್ತದೆ.'[11]

ಈಗ 'ಶಬ್ದ ಮಣಿ ದರ್ಪಣ' ದ ೨೫೦ ನೇ ಸೂತ್ರದ ಆಧಾರದಲ್ಲಿ 'ಭಾನುಮತಿಯ ನೆತ್ತ'ದ ಪದ್ಯವನ್ನು ಅರ್ಥೈಸಿದರೆ ಹೇಗಾಗುತ್ತದೆ ಎಂಬುದನ್ನುನೋಡೋಣ. ನಮಗೀಗಾಗಲೇ ತಿಳಿದಿರುವಂತೆ ಈವರೆಗೆ ಈ ಪದ್ಯವನ್ನು ಕಾಲಸೂಚಕ ಪ್ರತ್ಯಯಗಳ ಆಧಾರದಲ್ಲಿ ಚರ್ಚಿಸಲಾಗಿದೆ. (ಸೇಡಿಯಾಪು ಅವರ ಸತಿಸಪ್ತಮಿಯ ಚರ್ಚೆಯಲ್ಲಿ ಅದು ಸ್ಪಷ್ಟ). ಆದ್ದರಿಂದ ಮೌಲಿಕವಾದ ಫಲಿತಗಳು ಬಂದಿವೆಯೆಂಬುದನ್ನು ಗಮನಿಸಿ, ಪಕ್ಷಾರ್ಥ ಪ್ರತ್ಯಯದ ಆಧಾರದಲ್ಲಿ ಈ ಚರ್ಚೆಗೆ ಇಲ್ಲಿ ಉಪಕ್ರಮಿಸಲಾಗಿದೆ. ಆಗ ಪಂಪನ ಪದ್ಯವನ್ನು ಹೊಸಗನ್ನಡಕ್ಕೆ (ಅಲ್ಪ, ಸ್ವಲ್ಪ ವ್ಯತ್ಯಾಸದೊಂದಿಗೆ) ಹೀಗೆ ಯಥಾವತ್ತಾಗಿ ಅನುವಾದ ಮಾಡಬಹುದು.

ನೆತ್ತವನಾಡಿ ಭಾನುಮತಿ ಸೋತರೆ ಸೋಲವನೀವುದೆಂದು ಕಾ!
ಡುತ್ತಿರೆ ಲಂಬಣವು ಹರಿಯೆ ಮುತ್ತಿನ ಕೇಡನುನೋಡಿ ನೋಡಿ ಬ
ಳ್ಕುತ್ತಿರೆಯೇವವಿಲ್ಲದಿವನಾವುದೊ ತಪ್ಪದೆ ಹೇಳಿಯೆಂಬ ಭೂ ।
ಪೋತ್ತಮನ ಬಿಸುಟ್ಟಿರದೆ ನಿಮ್ಮೊಳು ಹೊಕ್ಕರೆ ಬೇಡನಲ್ಲವೇ॥

ಈಗ ಪಕ್ಷಾರ್ಥದಲ್ಲಿ ಅದರ ಅರ್ಥವನ್ನು ಹೀಗೆ ಹೇಳಬಹುದು -

ಭಾನುಮತಿಯು ನೆತ್ತವನ್ನು ಆಡಿ ಸೋತ ಪಕ್ಷದಲ್ಲಿ (ಒಂದು ವೇಳೆ ಸೋತಳು ಎಂದಾದರೆ) ಪಣವನ್ನು ಕೊಡುವುದು ಎಂದು ಕಾಡಿದ ಪಕ್ಷದಲ್ಲಿ (ಒಂದು ವೇಳೆ ಪಣವನ್ನು ಕೊಡಲು ಕಾಡಿದ ಎಂದಾದರೆ) ಲಂಬಣವು ಹರಿದ ಪಕ್ಷದಲ್ಲಿ (ಒಂದು ವೇಳೆ ಲಂಬಣವು ಹರಿಯಿತು ಎಂದಾದರೆ) ಮುತ್ತಿನ ಕೇಡನ್ನು ನೋಡಿ ನೋಡಿ ಬಾಗುತ್ತಿದ್ದ ಪಕ್ಷದಲ್ಲಿ (ಒಂದು ವೇಳೆ ಮುತ್ತಿನ ಕೇಡನ್ನು ನೋಡಿ ನೋಡಿ ಬಾಗುತ್ತಿದ್ದಳು ಎಂದಾದರೆ) (ತುಚ್ಛವೆಂದು ಭಾವಿಸದೆ 'ಇವುಗಳನ್ನು ಹೆಕ್ಕಿಕೊಳ್ಳುವುದೋ' ಎನ್ನುವ ಭೂಪೋತ್ತಮನಾದ ಕೌರವನನ್ನು ಯುಕ್ತಾಯುಕ್ತ ವಿವೇಕವಿಲ್ಲದೆ ದೂರಮಾಡಿ,) ನಿಮ್ಮೊಂದಿಗೆ ಕೂಡಿಕೊಂಡ ಪಕ್ಷದಲ್ಲಿ (ಒಂದು ವೇಳೆ ಕೂಡಿದ ಎಂದಾದರೆ) ಈ ಕರ್ಣನು ಅಸಭ್ಯನಾಗನೇ?

ಈ ಅರ್ಥೈಸುವಿಕೆಯ ಪ್ರಸ್ತುತತೆ ಅರಿವಾಗಬೇಕಾದರೆ ಇದಕ್ಕೆ ಹಿನ್ನೆಲೆಯಾದ ಸಂದರ್ಭವನ್ನು ಹೇಳಬೇಕು. ನಮಗೆಲ್ಲ ಗೊತ್ತಿರುವಂತೆ ಸಂಧಾನಕ್ಕೆಂದು ಬಂದ ಕೃಷ್ಣನು ಅದು ವಿಫಲವಾದಾಗ, ಕೆಲವು ಅನೌಪಚಾರಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾನೆ. ಅದರಲ್ಲಿ ಕುಂತಿಯನ್ನು ಕಾಣುವುದು, ಕರ್ಣನನ್ನು ಕಾಣುವುದು ಮುಖ್ಯವಾದುವು. ಕರ್ಣನನ್ನು ಕಾಣುವುದಕ್ಕೆ ಬಂದ ಕೃಷ್ಣನು ಬೀಳ್ಕೊಡುವುದಕ್ಕೆಂದು ಬಂದ ಆತನಿಗೆ ಕುಲದ ರಹಸ್ಯವನ್ನು ಹೇಳುತ್ತಾನೆ. ಬಳಿಕ ದುರ್ಯೋಧನನು ಕರ್ಣನನ್ನು ಏಕೆ ನಂಬಿದನೆಂಬುದಕ್ಕೆ ಒಂದು ಕಥೆಯನ್ನು ಕಟ್ಟುತ್ತಾನೆ. ಕೃಷ್ಣನು ಹೇಳಿದ ಸತ್ಯಂತಪ ಮುನಿಯ ಆ ಆಖ್ಯಾಯಿಕೆಯು ಪಂಪಭಾರತದಲ್ಲಿಯೇ ಕಂಡು ಬರುವ ಆಖ್ಯಾಯಿಕೆಯಾಗಿದ್ದು[12] ಅದು ವ್ಯಾಸಭಾರತದ್ದಲ್ಲ. ಅನ್ಯತ್ರ ಇದರ ಉಲ್ಲೇಖವೂ ಕಂಡುಬರುವುದಿಲ್ಲವೆಂಬುದು ವಿದ್ವಾಂಸರ ಅಭಿಮತ. ಕಥೆಯಿಷ್ಟೆ.

ಒಂದು ದಿನ ದುರ್ಯೋಧನ ಮತ್ತು ಕರ್ಣರೀರ್ವರು ಗಂಗಾನದಿಯ ತೀರಕ್ಕೆ ಬೇಟೆಗೆಂದು ಹೋಗಿದ್ದರು. ಹಾಗೆ ಬೇಟೆಯಾಡುತ್ತ ತತ್ಸಮೀಪದ ಸತ್ಯಂತಪರೆಂಬ ದಿವ್ಯ ಮುನಿಗಳ ಬಳಿಗೆ ಹೋದರು. ಆ ಮುನಿಯು (ಹೋದ ಈರ್ವರಲ್ಲಿ) ಮೊದಲಿಗೆ, ಕರ್ಣನಿಗೆ ಕುಳ್ಳಿರಲು ಪೀಠ ತಯಾರಿಸುತ್ತಾನೆ. ಇದನ್ನು ಕಂಡ ದುರ್ಯೋಧನನು ಅದಕ್ಕೆ ಕಾರಣವನ್ನು ಕೇಳಿದಾಗ ಕರ್ಣನ ಜನ್ಮ ರಹಸ್ಯವನ್ನು ಆ ಮುನಿಯು ಹೇಳುತ್ತಾನೆ. ಇದರಿಂದ ಮತ್ಸರಗೊಂಡ ದುರ್ಯೋಧನನು 'ಮುಳ್ಳೊಳೆ ಮುಳ್ಳನು ಪಾಟಿಸುವೆನೆಂದು' ಆತನೊಂದಿಗೆ ಸ್ನೇಹಿತನಂತೆ ವರ್ತಿಸುತ್ತಿರುತ್ತಾನೆ - ಇದು ಕೃಷ್ಣ ಕಟ್ಟಿದ ಕತೆ. ಅದಕ್ಕೆ ಪ್ರತಿಯಾಗಿ ಭಾನುಮತಿಯ ನೆತ್ತದ ಕಥೆಯನ್ನು ಕರ್ಣನು ಕಟ್ಟುತ್ತಾನೆ. ಆಶ್ಚರ್ಯವೆಂದರೆ ಈ ಎರಡೂ ಕಥೆಗಳೂ ವ್ಯಾಸಭಾರತದಲ್ಲಿ ಇಲ್ಲದಿರುವುದು. ಅಷ್ಟೇ ಅಲ್ಲದೆ, ಅದು ಪಂಪನ ಕಾವ್ಯದಲ್ಲಿ ಮಾತ್ರ ಕಾಣಸಿಗುವುದು. ಮೊದಲನೆಯ ಪ್ರಸಂಗ ಕೃಷ್ಣನು ದುರ್ಯೋಧನನ ಕುಟಿಲತನಕ್ಕೆ ಕೊಡುವ ದೃಷ್ಟಾಂತವಾದರೆ, ಎರಡನೆಯದು ಅದೇ ಧಾಟಿಯಲ್ಲಿ ಕರ್ಣನು

ಟಿಪ್ಪಣಿಗಳು

1. ನೋಡಿ ಬೆಳ್ಳಾವೆ ವೆಂಕಟನಾರಾಯಣಪ್ಪ, (ಸಂ) ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಆಶ್ವಾಸ೯- ೬೯. ಪುಟ ೨೩೮.

2. ಈ ಸಂಗ್ರಹವನ್ನು ಮೊದಲ ಬಾರಿಗೆ ಮಾಡಿದವರು, ತೆಕ್ಕುಂಜದವರು. ಬಹುಮಟ್ಟಿಗೆ ಮರೆವಿಗೆ ಸಂದ ಆ ಸಂಗ್ರಹವನ್ನು ಇಲ್ಲಿ ಯಥಾವತ್ತಾಗಿ ಬಳಸಲಾಗಿದೆ. ಇದಕ್ಕೆ ತೆಕ್ಕುಂಜದವರ ಬಗೆಗಿನ ಗೌರವವೇ ಕಾರಣ! ನೋಡಿ: 'ಪ್ರಬುದ್ಧ ಕರ್ನಾಟಕ' ಸಂ - ೫೬ ಸಂ-೧ ಪುಟ - ೧೯-೨೪

3. ನೋಡಿ, ಪೂರ್ವೋಕ್ತ ಪುಟ - ೩೪

4. ನೋಡಿ, ಜಿ.ಪಿ. ರಾಜರತ್ನಂ, 'ಸ್ವಾರಸ್ಯ' ಪುಟ - ೨೯೦-೯೧

5. ಸಮಸ್ಯೆಯನ್ನು ಹೀಗೆ ನಿರೂಪಿಸಿದವರು ತೆಕ್ಕುಂಜದವರೇ. ನೋಡಿ ಪ್ರಬುದ್ಧ ಕರ್ನಾಟಕ' ಸಂ-೫೬ ಸಂ-೧ ಪುಟ - ೨೫

6. ೨ನೆಯ ತರ್ಕದ ಪರವಾಗಿರುವವರಲ್ಲಿ ಮತ್ತೆ ಎರಡು ಪಕ್ಷಗಳಿವೆ. ಕೆಲವರು ಭಾನುಮತಿ ಮತ್ತು ದುರ್ಯೋಧನರ ಆಟದಲ್ಲಿ ಕರ್ಣ ಸಾಕ್ಷಿಯಾಗಿದ್ದನೆಂದರೆ, ಮತ್ತೆ ಕೆಲವರ ಪ್ರಕಾರ, ಕರ್ಣನ ಸಮಕ್ಷಮದಲ್ಲಿ ಈ ಸರಸ ಕೇಳಿ ನಡೆದಿತ್ತು.

7. ನೋಡಿ, ಪಾದೇಕಲ್ಲು ವಿಷ್ಣುಭಟ್ (ಸಂ) 'ಸೇಡಿಯಾಪು ವಿಚಾರ ಪ್ರಪಂಚ' ಪುಟ - ೨೫-೫೬. 'ಭಾನುಮತಿಯ ನೆತ್ತ' ಎನ್ನುವ ಲೇಖನದಲ್ಲಿ ಅಡಿಟಿಪ್ಪಣಿ - ೧೦) ಸೇಡಿಯಾಪು ತಮಿಳು ಕವಿ ಪಿಲ್ಲಿ ಪುತ್ತೂರ್ ಬರೆದ ತಮಿಳು ಭಾರತದ ಬಗೆಗಿನ ಪ್ರಾಸಂಗಿಕ ಚರ್ಚೆಗಳನ್ನು ಉಲ್ಲೇಖಿಸಿದ್ದಾರೆ. ಆತನು ಪಂಪನಿಗಿಂತ ಅರ್ವಾಚೀನನಾದವನು. ಅಜ್ಞಾತ ಕವಿಕೃತವೂ, ಅಪೂರ್ಣವೂ ಆದ ತಮಿಳಿನ 'ಭಾರತವೆಣ್ಬಾ' ಎಂಬ ಇನ್ನೊಂದು ಕಾವ್ಯದಲ್ಲಿ ಇಂತಹದ್ದೇ ಪ್ರಸಂಗವಿದೆ ಎಂದು ತಮಿಳು ಬಲ್ಲವರ ಅಭಿಮತ. ಈ ಕಾವ್ಯವು ೯ ನೆಯ ಶತಮಾನಕ್ಕೆ ಸೇರಿದ್ದು. ಈ ಬಗೆಗೆ ಹೆಚ್ಚಿನ ವಿವರಗಳು ನನಗೆ ಲಭ್ಯವಿಲ್ಲ. 'ಭಾರತವೆಣ್ಬಾ' ತಮಿಳು ಕಾವ್ಯವು 'ವಿಕ್ರಮಾರ್ಜುನ ವಿಜಯಂ' ಕಾವ್ಯಕ್ಕಿಂತ ಪೂರ್ವದ್ದೇ ಆಗಿದ್ದರೂ, ಅದರಲ್ಲಿ ಈ ಪ್ರಸಂಗವು ಇರುವುದೇ ಆದರೂ ಅದರಿಂದ ಈ ಲೇಖನದ ಅಭಿಪ್ರಾಯಕ್ಕೆ ಬಾಧಕವೇನಿಲ್ಲ. ಇದು ತೌಲನಿಕ ಅಭ್ಯಾಸವಲ್ಲ. ಹಾಗೆಯೇ ಪ್ರಾಕ್ತನ ಆಸಕ್ತಿಗಳೂ ಈ ಲೇಖನಕ್ಕಿಲ್ಲ. ಮೇಲಾಗಿ ಪಂಪನ ಕಾವ್ಯವು 'ವ್ಯಾಸಮುನೀಂದ್ರ ವಚನಾಮೃತ ವಾರ್ಧಿಯನೀಸುವ' ಉದ್ದೇಶವನ್ನಿಟ್ಟುಕೊಂಡಿರುವಂತಹದ್ದು. 'ಮುನ್ನಿನ ಕಬ್ಬಮನೆಲ್ಲ ಕಿಕ್ಕಿ ಮೆಟ್ಟಿದ' ಮಹಾಪ್ರತಿಭೆಯನ್ನು ಮೆರೆವ ಕವಿಗೆ ಯಕಚ್ಚಿತ್ ಪ್ರಸಂಗವೊಂದನ್ನು ಚಿತ್ರಿಸುವುದಕ್ಕೆ ಅದಾವುದೋ ದೂರದ ಭಾಷೆಯೊಂದರಲ್ಲಿರುವ ಪ್ರಮಾಣವನ್ನು

ಅನುಸರಿಸುವ 'ದೇಸಿಗತನ'ವನ್ನು ಆರೋಪಿಸುವುದಾದರೆ ಆತ ಶುಷ್ಕ ವೈಯಾಕರಣನೂ ಶುಷ್ಕ ತಾರ್ಕಿಗನೂ ಆಗಲಾರನೇ?

8. ಪಾದೇಕಲ್ಲು ವಿಷ್ಣುಭಟ್, (ಸಂ) 'ಸೇಡಿಯಾಪು ವಿಚಾರ ಪ್ರಪಂಚ' ಪುಟ - ೫೬೬-೫೬೯

9. ನೋಡಿ, ಪೂರ್ವೋಕ್ತ ಪುಟ - ೫೦.

10. ನೋಡಿ, ತ. ಸು. ಶಾಮರಾಯ, (ಸಂ) 'ಶಬ್ದಮಣಿ ದರ್ಪಣಂ' ಪು - ೩೦೫.

11. ನೋಡಿ, ಉಪ್ಪಂಗಳ ರಾಮಭಟ್, 'ಕರ್ನಾಟಕ ಶಬ್ದಾನುಶಾಸನ' ಪುಟ - ೩೪೭

12. ನೋಡಿ, ಬೆಳ್ಳಾವೆ ವೆಂಕಟನಾರಾಯಣಪ್ಪ, (ಸಂ) 'ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ' ಪುಟ - iii.

ಪರಾಮರ್ಶನ ಗ್ರಂಥಗಳು

೧. ವಿ. ನರಸಿಂಹಾಚಾರ್ ಡಿ.ಎಲ್., ಕೇಶಿರಾಜ ವಿರಚಿತ 'ಶಬ್ದಮಣಿ ದರ್ಪಣಂ' ಮೈಸೂರು; ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ ೧೯೮೯.

೨. ರಾಜರತ್ನಂ ಜಿ.ಪಿ., 'ಸ್ವಾರಸ್ಯ' ಬೆಂಗಳೂರು; ಶಾಕ್ಯ ಸಾಹಿತ್ಯ ಮಂಟಪ, ಮಲ್ಲೇಶ್ವರಂ, ೧೯೯೩.

೩. ರಾಮಭಟ್ಟ ಉಪ್ಪಂಗಳ, 'ಕರ್ನಾಟಕ ಶಬ್ದಾನುಶಾಸನ ವಿವೇಚನೆ' ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು, ೧೯೯೫.

೪. ವಿಷ್ಣುಭಟ್ಟ, ಪಾದೇಕಲ್, 'ಸೇಡಿಯಾಪು ಕೃಷ್ಣಭಟ್ಟರ ವಿಚಾರ ಪ್ರಪಂಚ' ಪುತ್ತೂರು; ಕರ್ನಾಟಕ ಸಂಘ, ೧೯೯೨.

೫. ವೆಂಕಟನಾರಾಯಣಪ್ಪ ಬೆಳ್ಳಾವೆ, 'ಪಂಪ ಭಾರತಂ ಎಂಬ ವಿಕ್ರಮಾರ್ಜನ ವಿಜಯಂ' ಮೈಸೂರು; ಪ್ರಸಾರಾಂಗ, ೧೯೭೭.

೬. ಸುಬ್ರಾಯ ಭಟ್, ಪಿ. 'ಗದಾಯುದ್ಧ ದರ್ಪಣಂ' ಕಾಸರಗೋಡು, ವಿದ್ಯಾನಗರ, ೧೯೭೫.

ಲೇಖನ

ಗೋಪಾಲಕೃಷ್ಣ ಭಟ್ ತೆಕ್ಕುಂಜೆ, 'ಪಂಪನ ನಡೆ - ನುಡಿ - ಬಗೆ' (ಪ್ರಬುದ್ಧ ಕರ್ನಾಟಕ, ಸಂ ಟಿ.ವಿ. ವೆಂಕಟಾಚಲಶಾಸ್ತ್ರಿ, ಸುಧಾಕರ, ಸಂ ೫೬ ಸಂ ೧) ಮೈಸೂರು ; ಪ್ರಸಾರಾಂಗ, ೧೯೭೪.

ಕೃತಿಸ್ವಾಮ್ಯ ಕಾನೂನು :೧೯೫೭ರ ಮುಖ್ಯಾಂಶಗಳು*

● ಪ್ರಫುಲ್ಲಾ ನಾಯಕ

ಭಾರತದಲ್ಲಿ ೧೯೫೭ರ ಜೂನ್ ೪ರಂದು ಅಂಗೀಕೃತವಾಗಿ ೧೯೫೮ರ ಜನವರಿ ೨೧ರಂದು ಈ ಕೃತಿಸ್ವಾಮ್ಯ ಕಾನೂನು ಜಾರಿಯಲ್ಲಿ ಬಂದಿತು. ಈ ಕಾನೂನು ಇಡೀ ಭಾರತಕ್ಕೆ ಅನ್ವಯವಾಗುವುದು. ಈ ಕಾನೂನಿನಲ್ಲಿ ೧೫ ಪ್ರಕರಣಗಳಿದ್ದು ೭೯ ಕಲಂಗಳಿವೆ. ಇವು ಪ್ರಾಸ್ತಾವಿಕ, ಕೃತಿಸ್ವಾಮ್ಯ ಕಛೇರಿ, ಕೃತಿಸ್ವಾಮ್ಯ ಮಂಡಳಿ, ಕೃತಿಸ್ವಾಮ್ಯ, ಕೃತಿ ಸ್ವಾಮ್ಯದ ಮೂಲಕರ್ತೃ, ಹಾಗೂ ಕೃತಿಸ್ವಾಮ್ಯಧಾರಕನ ಹಕ್ಕುಗಳು, ಕೃತಿಸ್ವಾಮ್ಯದ ಅವಧಿ, ಲೈಸನ್ಸುಗಳು, ಬಿತ್ತರಿಸುವ ಹಕ್ಕುಗಳು, ಅಂತರಾಷ್ಟ್ರೀಯ ಕೃತಿಸ್ವಾಮ್ಯ, ಕೃತಿ ಸ್ವಾಮ್ಯ ನೋಂದಣೀಕರಣ, ಕೃತಿಸ್ವಾಮ್ಯದ ಉಲ್ಲಂಘನೆ, ದಿವಾಣಿ ಪರಿಹಾರಗಳು, ಅಪರಾಧಗಳು, ಮೇಲ್ಮನವಿಗಳು ಹಾಗೂ ಸಂಕೀರ್ಣ ಎಂದು ಹೀಗೆ ೧೫ ಪ್ರಕರಣಗಳಲ್ಲಿ ಈ ಕಾನೂನಿನ ವಿಭಜನೆ ಮಾಡಿದ್ದಾರೆ. ಕೃತಿಸ್ವಾಮ್ಯವು ಆಯಾ ಕೃತಿಯ ಕರ್ತೃವಿಗೆ ಆತನ ಕೃತಿಗೆ ಸಂಬಂಧ ಪಟ್ಟಂತೆ ನೀಡಲಾದ ರಕ್ಷಣೆಯ ಹಕ್ಕು ಆಗಿರುತ್ತದೆ. ಅದು ಕಲಾಕೃತಿಯಾಗಿರಬಹುದು, ಸಂಗೀತ, ನಾಟಕ, ಸಾಹಿತ್ಯದ ಯಾವುದೇ ಪ್ರಕಾರವಾಗಿರಬಹುದು. ಒಂದು ವ್ಯಕ್ತಿಯ ಹಕ್ಕಿಗೆ ಒಳಪಟ್ಟ ಸಾಹಿತ್ಯ ಕೃತಿಯೇ ಆಗಲಿ, ನಾಟಕ ಸಂಗೀತ ಕೃತಿಯೇ ಆಗಿರಲಿ, ಕಲಾಕೃತಿಯೇ ಆಗಿರಲಿ ಅದನ್ನು ಪ್ರತಿ ಮಾಡುವ, ಮಾರುವ, ರೂಪಾಂತರಿಸುವ, ನಿಯಂತ್ರಿಸುವ ಹಕ್ಕು ಆ ಕೃತಿಕಾರನಿಗೆ ಇರುತ್ತದೆ.

ಒಂದು ಕೃತಿಯನ್ನು ಒಬ್ಬ ವ್ಯಕ್ತಿ ಒಂದು ಸಲ ಪ್ರಕಟಿಸಿದರೆ, ತರುವಾಯ ಮತ್ತೊಮ್ಮೆ ಅದನ್ನು ಪ್ರಕಟಿಸಲು, ರೂಪಾಂತರ ಮಾಡಲು, ಪ್ರದರ್ಶನ ಏರ್ಪಡಿಸಲು, ಸಾಹಿತ್ಯ ಸ್ವಾಮ್ಯ ಅಧಿಕಾರ, ಕಾನೂನು ಮೇರೆಗೆ ನಿಗದಿಯಾದ ಅವಧಿಯಲ್ಲಿ ಆ ಲೇಖಕನಿಗೆ ಅಥವಾ ಆ ಹಕ್ಕನ್ನು ಪಡೆದುಕೊಂಡವನಿಗೆ ಇರುತ್ತದೆ.

೨ನೇ ಕಲಂನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವ್ಯಾಖ್ಯೆಗಳಿದ್ದು, ಒಂದು ನಾಟಕವಾದರೆ ಅದನ್ನು ನಾಟಕೇತರ ಸಾಹಿತ್ಯವಾಗಿ ಮಾರ್ಪಡಿಸುವುದು, ಸಾಹಿತ್ಯ ಕೃತಿಯಾದರೆ ಅದನ್ನು ನಾಟಕವಾಗಿ ರೂಪಾಂತರಿಸುವುದು, ಅಥವಾ ಅವುಗಳನ್ನು ಸಂಕ್ಷಿಪ್ತವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು, ಪತ್ರಿಕೆ, ಸಾಪ್ತಾಹಿಕ ಅಥವಾ ಪಾಕ್ಷಿಕ ಪತ್ರಿಕೆಗಳಲ್ಲಿ ಮರುಪ್ರಕಟಿಸುವುದು, ಕಲಾಕೃತಿಯಾದರೆ ಚಿತ್ರಕಲೆ, ಶಿಲ್ಪಕಲೆ, ರೇಖಾಚಿತ್ರ, ಛಾಯಾಚಿತ್ರ, ನಕಾಶೆ, ಅಥವಾ ಕಲಾಕೃತಿ ಗುಣಗಳುಳ್ಳ ಯಾವುದೇ ಕೃತಿ ಎಂದು ವಿವರಿಸಲಾಗಿದೆ.

★ ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗಗಳು ಜಂಟಿಯಾಗಿ ಧಾರವಾಡದಲ್ಲಿ ಹಮ್ಮಿಕೊಂಡಿದ್ದ 'ಕನ್ನಡ ಪುಸ್ತಕ ಪ್ರಕಾಶಕರ ಕಮ್ಮಟ'ದಲ್ಲಿ ಮಂಡಿಸಲಾದ ಪ್ರಬಂಧ (೨೬ ಸಪ್ಟೆಂಬರ ೧೯೯೯)

ಲೇಖಕನೆಂದರೆ ಸಾಹಿತಿ ಅಥವಾ ನಾಟಕ ಕೃತಿಯಾದರೆ ಅದರ ಲೇಖಕ, ಸಂಗೀತ ಕೃತಿಯಾದರೆ ಅದರ ನಿರ್ಮಾಪಕ, ಭಾವಚಿತ್ರವಾದರೆ ಅದನ್ನು ತೆಗೆದವನು, ಸಿನಿಮಾ ಆದರೆ ಅದು ಪೂರ್ಣಗೊಂಡಾಗ ಅದರ ಮಾಲೀಕನಾಗುವನು. ಆಕಾಶವಾಣಿ ಬಿತ್ತರಣೆ ಎಂದರೆ ನಿಸ್‌ತಂತು (wireless)ವಿನ ಮೂಲಕ ಜನತೆಗೆ ಬಿತ್ತರಣೆ ಮಾಡುವುದು, ಮತ್ತು ಮರು ಪ್ರಸಾರಣವನ್ನು ಒಳಗೊಂಡಿರುತ್ತದೆ. ಕೃತಿಸ್ವಾಮ್ಯದ ಉಲ್ಲಂಘನೆ ಎಂದರೆ ಸಾಹಿತ್ಯಿಕ, ಸಂಗೀತಕ್ಕೆ ಸಂಬಂಧಪಟ್ಟದ್ದು ಕಲಾಕೃತಿಯಾಗಿದ್ದರೆ ಅದರ ಮರು ಪ್ರಕಟಣೆ, ಸಿನಿಮಾ ಆಗಿದ್ದರೆ ಅದರ ಪ್ರತಿ ಮಾಡುವುದು ಅಥವಾ ಆ ಸಿನೆಮಾದಲ್ಲಿದ್ದ ಯಾವುದೇ ಧ್ವನಿ ಮುದ್ರಿತ ಭಾಗವನ್ನು ಪುನಃ ನಿರ್ಮಿಸುವುದು ಆಗಿದೆ.

ಪ್ರಕಟಣೆಯೆಂದರೆ ಒಂದು ಕೃತಿಯ ಪೂರ್ತಿ ಮರು ಪ್ರಕಟಣೆ ಅಥವಾ ಆಂಶಿಕ ಪ್ರಕಟಣೆ ಆಗಿರಬಹುದು. ಕೃತಿಸ್ವಾಮ್ಯದ ಬಗ್ಗೆ ತಂಟೆ ತಕರಾರುಗಳಿದ್ದರೆ, ಕೃತಿಸ್ವಾಮ್ಯ ಮಂಡಳಿಯು ಆ ವಿಷಯವನ್ನು ಕಲಂ ೧೧ರ ಮೇರೆಗೆ ಅಸ್ತಿತ್ವದಲ್ಲಿ ಬಂದ ಕೃತಿಸ್ವಾಮ್ಯ ಮಂಡಳಿ ನಿರ್ಧರಿಸುತ್ತದೆ.

ಈ ಕಾನೂನಿನ ಉದ್ದೇಶಗಳ ಈಡೆರಿಕೆಗಾಗಿ ಕೃತಿಸ್ವಾಮ್ಯ ಕಚೇರಿಯನ್ನು ಸ್ಥಾಪಿಸಲಾಗಿರುತ್ತದೆ. ಈ ಕಚೇರಿಯು ಕೃತಿಸ್ವಾಮ್ಯಗಳ ನಿಬಂಧಕರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತದೆ. ಕೇಂದ್ರ ಸರಕಾರವು ಕೃತಿಸ್ವಾಮ್ಯಗಳ ನಿಬಂಧಕರನ್ನು ಒಬ್ಬರು ಅಥವಾ ಅದಕ್ಕಿಂತಲೂ ಹೆಚ್ಚು ಉಪನಿಬಂಧಕರನ್ನು ನೇಮಿಸಬಹುದು. ಕೃತಿಸ್ವಾಮ್ಯ ಮಂಡಳಿಯು ಒಬ್ಬರು ಚೇರಮನ್‌ರು ಹಾಗೂ ಎರಡಕ್ಕಿಂತ ಕಡಿಮೆಯಿಲ್ಲದ ಹಾಗೂ ಎಂಟಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರನ್ನು ಹೊಂದಿರುತ್ತದೆ. ಇದರ ಚೇರಮನ್‌ರು ಸುಪ್ರೀಂ ಕೋರ್ಟಿನ ಅಥವಾ ಹೈಕೋರ್ಟಿನ ಸದ್ಯದ ನ್ಯಾಯಾಧೀಶರು ಅಥವಾ ಮಾಜಿ ನ್ಯಾಯಾಧೀಶರು ಅಥವಾ ಹೈಕೋರ್ಟಿನ ನ್ಯಾಯಾಧೀಶರಾಗಲು ಅರ್ಹತೆ ಹೊಂದಿದ ನ್ಯಾಯಾಧೀಶರೂ ಆಗಿರಬಹುದು.

ಇವೆಲ್ಲ ಪ್ರಾಸ್ತಾವಿಕ ವಿಷಯಗಳಾಗಿದ್ದು, ಲೇಖಕರಿಗೆ, ಪ್ರಕಾಶಕರಿಗೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಇಲ್ಲಿ ಪರಿಗಣಿಸಬಹುದಾಗಿದೆ. ಒಂದು ಕೃತಿ ಭಾರತದಲ್ಲಿ ಪ್ರಥಮ ಬಾರಿ ಪ್ರಕಟವಾಗಿದ್ದರೆ, ಪ್ರಕಟಣೆಗೊಂಡಿದ್ದ ಅಥವಾ ಭಾರತದ ಹೊರಗೆ ಪ್ರಕಟಣೆಗೊಂಡಿದ್ದರೆ ಅದು ಪ್ರಕಟಗೊಂಡ ದಿನದಿಂದ ಅದರ ಕರ್ತೃವು ಕೃತಿಸ್ವಾಮ್ಯದ ಹಕ್ಕುದಾರನಾಗಿರುತ್ತಾನೆ. ಅಪ್ರಕಟಿತ ಕೃತಿಯಾಗಿದ್ದರೆ, ಅದರ ಹಕ್ಕು ಕೃತಿಕಾರನದೇ ಆಗಿರುತ್ತದೆ. ಕೃತಿಸ್ವಾಮ್ಯವು ಈ ಮುಂದೆ ಕಾಣಿಸಿದ ಹಕ್ಕನ್ನು ಒಳಗೊಂಡಿರುತ್ತದೆ. ಸಾಹಿತ್ಯಿಕ, ನಾಟಕಕ್ಕೆ ಸಂಬಂಧಪಟ್ಟ ಇಲ್ಲವೆ ಸಂಗೀತ ಕೃತಿಯಾಗಿದ್ದರೆ ಅದನ್ನು ಮರು ಪ್ರಕಟಿಸುವ, ಸಾರ್ವಜನಿಕರೆದುರು ಪ್ರದರ್ಶಿಸುವ ಆ ಕೃತಿಯನ್ನು ಭಾಷಾಂತರ ಮಾಡುವ, ಚಲನಚಿತ್ರ ಮಾಡುವ, ಬಿತ್ತರಗೊಳಿಸುವ, ರೂಪಾಂತರಗೊಳಿಸುವ ಹಕ್ಕು ಕೃತಿಸ್ವಾಮ್ಯ ಧಾರಕನದೇ ಇರುತ್ತದೆ.

ಕೃತಿಸ್ವಾಮ್ಯದ ಮೊದಲನೆಯ ಹಕ್ಕುದಾರನು ವೃತ್ತಪತ್ರಿಕೆಯ ಅಥವಾ ಯಾವುದೇ ಸಾಪ್ತಾಹಿಕ ಅಥವಾ ಮಾಸಿಕದಲ್ಲಿ ನೌಕರಿ ಮಾಡುತ್ತಿದ್ದರೆ, ನೌಕರಿಯ ಅವಧಿಯಲ್ಲಿ ತನ್ನ ಕೃತಿಯನ್ನು ಅದಕ್ಕೆ ಸಂಬಂಧಪಟ್ಟಂತೆ ನಿರ್ಮಿಸಿದ್ದರೆ ಆ ವೃತ್ತಪತ್ರಿಕೆಯ ಮಾಲೀಕನು ಆ ಕೃತಿಯ ಸ್ವಾಮ್ಯ ಹೊಂದಿರುತ್ತಾನೆ. ಕೃತಿಸ್ವಾಮ್ಯವನ್ನು ಅದರ ಧಾರಕನು ಮತ್ತೊಂದು ವ್ಯಕ್ತಿಗೆ ಅಥವಾ ಸಂಸ್ಥೆಗೆ ತನ್ನ ಕೃತಿಸ್ವಾಮ್ಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಕೊಡಬಹುದಾಗಿದೆ. ಅದರಲ್ಲಿ ಸಮಯದ ನಿರ್ಬಂಧವನ್ನು ಹಾಕಬಹುದು. ಒಬ್ಬ ಲೇಖಕನು ತಾನು ಮುಂದೆ ಬರೆಯಬಹುದಾದ ಕೃತಿಯ ಸ್ವಾಮ್ಯದ ಹಕ್ಕನ್ನು ಬೇರೊಬ್ಬರಿಗೆ ಕೊಡಬಹುದು. ಅದು ಆ ಕೃತಿಯು ಅಸ್ತಿತ್ವದಲ್ಲಿ ಬಂದ ಮೇಲೆ ಜಾರಿಯಲ್ಲಿ ಬರುವುದು. ಈ ಸ್ವಾಮ್ಯ ನೀಡುವಿಕೆ ಬರಹದಲ್ಲಿದ್ದು, ಕೃತಿ ಸ್ವಾಮ್ಯ ಧಾರಕನ ಸಹಿ ಇದ್ದರೆ ಮಾತ್ರ ಅದಕ್ಕೆ ಬೆಲೆ ಬರುತ್ತದೆ.

ಕೃತಿಸ್ವಾಮ್ಯ ಧಾರಕನು ಕೃತಿಸ್ವಾಮ್ಯ ಮಂಡಳಿಗೆ ಬರೆದು ತನ್ನ ಕೃತಿಯ ಬಗ್ಗೆ ಇದ್ದ ಸಂಪೂರ್ಣ ಹಾಗೂ ಭಾಗಶಃ ಹಕ್ಕುಗಳನ್ನು ಬಿಟ್ಟುಕೊಡಬಹುದು. ಕೃತಿಸ್ವಾಮ್ಯದ ಅವಧಿಯು ಅದರ ಕೃತಿಕಾರ ಬದುಕಿದ್ದಾಗ ಪ್ರಕಟವಾಗಿದ್ದರೆ, ಕೃತಿಕಾರ ತೀರಿಕೊಂಡ ವರ್ಷದ ಅನಂತರದ ಪಂಚಾಂಗ ವರ್ಷದ ಸಂಯುಕ್ತ ಆದಿಯಿಂದ ೫೦ ವರ್ಷಗಳ ಕಾಲ ಅದರ ಸ್ವಾಮ್ಯ ಇರುತ್ತದೆ. ಸಂಯುಕ್ತ ಕರ್ತೃತ್ವದ ಕೃತಿಯಾಗಿದ್ದರೆ, ಕೃತಿಕಾರರ ಪೈಕಿ ಕೊನೆಯಲ್ಲಿ ಮರಣ ಹೊಂದಿದವನ ಮರಣದ ಮುಂದಿನ ಪಂಚಾಂಗ ವರ್ಷದ ಆದಿಯಿಂದ ೫೦ ವರ್ಷಗಳ ಸ್ವಾಮ್ಯ ಇರುತ್ತದೆ. ಕೃತಿ ಛಾಯಾಚಿತ್ರವಾಗಿದ್ದರೆ ಅದರಲ್ಲಿ ಸ್ವಾಮ್ಯ, ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳವರೆಗೆ ಉಳಿಯುತ್ತದೆ. ಚಲನಚಿತ್ರ ಇಲ್ಲವೆ ಧ್ವನಿ ಮುದ್ರಿಕೆ ಆಗಿದ್ದರೆ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳವರೆಗೆ ಅದರಲ್ಲಿ ಸ್ವಾಮ್ಯ ಇರುತ್ತದೆ. ಸರ್ಕಾರಿ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳ ಕೃತಿಗಳಲ್ಲಿ ಸ್ವಾಮ್ಯ ಅವು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳ ತನಕ ಉಳಿಯುತ್ತದೆ. ಹೆಸರಿಲ್ಲದೆ ಇಲ್ಲವೆ ಗುಪ್ತನಾಮದಲ್ಲಿ ಒಂದು ಕೃತಿ ಪ್ರಕಟವಾಗಿದ್ದರೆ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳವರೆಗೆ ಸ್ವಾಮ್ಯ ಇರುತ್ತದೆ. ಆದರೆ ಈ ಅವಧಿ ಮುಗಿಯುವ ಮೊದಲೇ ಕೃತಿಕಾರನಾರು ಎಂದು ತಿಳಿದುಬಂದಲ್ಲಿ ಹಾಗೇ ತಿಳಿದು ಬಂದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳ ವರೆಗೆ ಕೃತಿಯಲ್ಲಿ ಸ್ವಾಮ್ಯ ಉಳಿಯುತ್ತದೆ. ಒಂದು ಸಾಹಿತ್ಯ, ನಾಟಕ, ಸಂಗೀತ ಅದರ ರಚಕನಿಗೆ ಸ್ವಾಮ್ಯವಿದ್ದು, ಅವನು ಜೀವಂತ ಇರುವಾಗ ಕೃತಿ ಪ್ರಕಟವಾಗದಿದ್ದಲ್ಲಿ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೫೦ ವರ್ಷಗಳ ವರೆಗೆ ಸ್ವಾಮ್ಯ ಉಳಿಯುತ್ತದೆ.

ಒಂದು ಕಾರ್ಯಕ್ರಮವು ಆಕಾಶವಾಣಿಯಲ್ಲಿ ಬಿತ್ತರಣೆಗೊಂಡರೆ ಆಕಾಶವಾಣಿಯುವರಿಗೆ ಒಂದು ವಿಶೇಷ ಹಕ್ಕು ಇರುತ್ತದೆ. ಅದನ್ನು 'ಮರುಪ್ರಸಾರಣೆ' ಮಾಡುವ ಹಕ್ಕು ಎನ್ನುತ್ತಾರೆ.

ಒಬ್ಬ ವ್ಯಕ್ತಿ ಒಂದು ಭಾಷಣವನ್ನು ಆಕಾಶವಾಣಿಯಲ್ಲಿ ಮಾಡಿದರೆ, ಒಂದು ನಾಟಕ, ಕಥೆ ಪ್ರಸಾರಗೊಂಡರೆ ಆಕಾಶವಾಣಿಯು ಅವುಗಳ ಮರುಪ್ರಸಾರಣೆಯ ಹಕ್ಕನ್ನು ಆ ಕಾರ್ಯಕ್ರಮ ಪ್ರಥಮ ಸಲ ಬಿತ್ತರಣೆಗೊಂಡ ದಿನದಿಂದ ಮುಂದಿನ ಪಂಚಾಂಗ ವರ್ಷದ ಆದಿಯಿಂದ ೨೫ ವರ್ಷಗಳವರೆಗೆ ಹೊಂದಿರುತ್ತದೆ. ಈ ಹಕ್ಕಿನ ಅವಧಿ ಮುಗಿಯುವ ಮೊದಲು ಯಾರಾದರೂ ಅದನ್ನು ಮರುಪ್ರಸಾರವನ್ನು ಪೂರ್ಣ : ಅಥವಾ ಭಾಗಶಃ ಮಾಡಿದರೆ, ಬಳಕೆ ಮಾಡಿದರೆ, ಆತನು ಮೂಲ ಕೃತಿಸ್ವಾಮ್ಯ ಧಾರಕನ ಹಕ್ಕನ್ನು ಉಲ್ಲಂಘಿಸಿದಂತೆ ಆಗತ್ತದೆ.

ನಾವು ಸಾಮಾನ್ಯವಾಗಿ ಹೆಚ್ಚಾಗಿ ಗಮನಿಸಬೇಕಾದ ಅಂಶವೇನೆಂದರೆ ಕೃತಿಸ್ವಾಮ್ಯದ ಉಲ್ಲಂಘನೆ ಹಾಗೂ ಅದರ ನಿವಾರಣೋಪಾಯಗಳು. ಯಾವುದೇ ವ್ಯಕ್ತಿಯು ಮೂಲ ಕೃತಿಸ್ವಾಮ್ಯಧಾರಕನ ಅನುಮತಿ ಇಲ್ಲದೇ ಕೃತಿಸ್ವಾಮ್ಯ ಉಲ್ಲಂಘನೆ ಮಾಡಿ ನಾಟಕ ಪ್ರದರ್ಶನ, ಅಥವಾ ಕೃತಿ ಪ್ರದರ್ಶನ ಮಾಡಲು ಲಾಭಕ್ಕಾಗಿ ಸ್ಥಳ ನೀಡಿದರೆ ಅದು ಕಾನೂನು ಮೇರೆಗೆ ಅಪರಾಧವಾಗುತ್ತದೆ. ಯಾವುದೇ ವ್ಯಕ್ತಿಯು ಒಂದು ಕೃತಿಯ ಸ್ವಾಮ್ಯ ಉಲ್ಲಂಘನೆ ಮಾಡಿ ಪ್ರಕಟಗೊಂಡ ಕೃತಿಯನ್ನು ಮಾರಾಟ ಮಾಡಿದರೆ, ಬಾಡಿಗೆಗೆ ಕೊಟ್ಟರೆ, ಮೂಲಸ್ವಾಮ್ಯ ಧಾರಕನ ಹಕ್ಕಿಗೆ ಚ್ಯುತಿ ಬರುವಂತೆ ಯಾವುದೇ ಕ್ರಮ ಕೈಕೊಂಡರೆ, ಅಂತಹ ಕೃತಿಯನ್ನು ಭಾರತಕ್ಕೆ ಆಮದು ಮಾಡಿಕೊಂಡರೆ ಆತನು ಈ ಕಾನೂನಿನಡಿ ಅಪರಾಧ ಮಾಡಿದಂತೆ ಆಗುತ್ತದೆ.

ಇಲ್ಲಿಯವರೆಗೆ ಕಾನೂನು ನಿಷೇಧಾತ್ಮಕವಾಗಿ ಹೇಳಿದ್ದನ್ನು ನೋಡಿದರೆ, ಅದು ಪ್ರತಿಬಂಧನದ ಬಗ್ಗೆ ಹೇಳುತ್ತಿದೆ ಎನ್ನಬಹುದು.

ಕೃತಿಸ್ವಾಮ್ಯ ಕಾನೂನಿನಡಿಯಲ್ಲಿ ಮುಂದೆ ಹೇಳಲಾದ ಅಂಶಗಳು ಕೃತಿಸ್ವಾಮ್ಯದ ಉಲ್ಲಂಘನೆ ಅಲ್ಲ. ಒಂದು ಸಾಹಿತ್ಯಿಕ ಕೃತಿ, ನಾಟಕ, ಸಂಗೀತ ಅಥವಾ ಕಲಾತ್ಮಕ ವಿಷಯಗಳ ಬಗ್ಗೆ ಸಂಶೋಧನೆ ಮಾಡುವುದು, ಪತ್ರಿಕೆಗಳಲ್ಲಿ ಟೀಕೆ ಅಥವಾ ವಿಮರ್ಶೆ ಮಾಡುವುದು, ಪ್ರಚಲಿತ ಘಟನೆಗಳ ಬಗ್ಗೆ ಒಂದು ಸಾಹಿತ್ಯಿಕ ಕೃತಿ ಅಥವಾ ನಾಟಕ ಅಥವಾ ಇತರ ಯಾವುದೇ ಕಲಾಕೃತಿಯ ಬಗ್ಗೆ ಪತ್ರಿಕೆಯಲ್ಲಿ ಅಥವಾ ಬಾನುಲಿಯಲ್ಲಿ ಅಥವಾ ಸಿನಿಮಾದಲ್ಲಿ ಅಥವಾ ಛಾಯಾಚಿತ್ರದಲ್ಲಿ ಮೂಲಕೃತಿಯ ಬಳಕೆಯಾದರೆ ಅದು ಕೃತಿಸ್ವಾಮ್ಯದ ಉಲ್ಲಂಘನೆಯಲ್ಲ. ನ್ಯಾಯಾಲಯದ ಆದೇಶ ಅಥವಾ ತೀರ್ಪನ್ನಾಗಲಿ ಪ್ರಕಟಿಸಿದರೆ ಅದು ಸಹ ಕಾನೂನಿನ ಉಲ್ಲಂಘನೆಯಲ್ಲ. ಈ ಕಾನೂನಿನ ಅಡಿಯಲ್ಲಿ ಹೇಳಿದ ಕಾಲಮಿತಿಯ ಅವಧಿ ಮುಗಿದ ಮೇಲೆ ಪ್ರಕಟಗೊಂಡ ಕೃತಿಯ ಬಗ್ಗೆ ಅದು ಉಲ್ಲಂಘನೆಯೆಂದು ಹೇಳಲಾಗದು.

ಯಾರೇ ಆಗಲಿ ತಮ್ಮ ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆದುಕೊಳ್ಳಲು ಈ ಕಾನೂನಿನ ೫೫ನೇ ಕಲಂನಲ್ಲಿ ಅವಕಾಶವಿದೆ.

ಕೃತಿಕಾರನು ನ್ಯಾಯಾಲಯದಲ್ಲಿ ದಾವೆ ಹೂಡಿ ಕೃತಿಸ್ವಾಮ್ಯದ ಉಲ್ಲಂಘನೆಯಾಗದಂತೆ ಪ್ರತಿಬಂಧಕಾಜ್ಞೆ ಪಡೆಯಬಹುದು. ಒಂದು ವೇಳೆ ಉಲ್ಲಂಘನೆಯಾಗಿದ್ದರೆ ನಷ್ಟ ಪರಿಹಾರ ಕೇಳಬಹುದು ಅಥವಾ ಕಾನೂನಿನಲ್ಲಿ ಉಲ್ಲೇಖಿಸಿದ ಯಾವುದೇ ಪರಿಹಾರ ಕೇಳಬಹುದು.

ಕೃತಿಕಾರನಿಗೆ ಕೆಲವು ವಿಶಿಷ್ಟ ಹಕ್ಕುಗಳನ್ನು ಕಾನೂನು ನೀಡಿದೆ. ಕೃತಿಕಾರನು ಕೃತಿಸ್ವಾಮ್ಯವನ್ನು ಬೇರೊಬ್ಬರಿಗೆ ಕೊಟ್ಟಿದ್ದರೂ ಆ ಕೃತಿಗೆ ತನ್ನ ಹೆಸರನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾನೆ. ತನ್ನ ಕೃತಿಯನ್ನು ವಿದ್ರೂಪಗೊಳಿಸಿದರೆ, ಬದಲಾವಣೆ ಮಾಡಿದರೆ, ತನ್ನ ಘನತೆ-ಗೌರವಕ್ಕೆ ಧಕ್ಕೆ ಬರದಂತೆ ಆ ಕೃತಿಗೆ ಸಂಬಂಧಪಟ್ಟಂತೆ ಏನೇ ಕೆಲಸ ಮಾಡಿದರೂ ಅದಕ್ಕೆ ಪರಿಹಾರ ಪಡೆಯಲು, ಅದನ್ನು ತಡೆಹಿಡಿಯುವಂತೆ ನ್ಯಾಯಾಲಯಕ್ಕೆ ಕೋರಲು ವಿಶೇಷ ಹಕ್ಕನ್ನು ಪಡೆದಿರುತ್ತಾನೆ. ೬೩ನೇ ಕಲಂ ಕೃತಿಸ್ವಾಮ್ಯದ ಉಲ್ಲಂಘನೆಯನ್ನು ಮಾಡಿದರೆ ಅದಕ್ಕೆ ನೀಡುವ ದಂಡ ನಿಯಮದ ಬಗ್ಗೆ ಹೇಳುತ್ತದೆ. ಇದರನ್ವಯ ಯಾವುದೇ ವ್ಯಕ್ತಿ ಗೊತ್ತಿದ್ದೂ ಕೃತಿಸ್ವಾಮ್ಯವನ್ನು ಉಲ್ಲಂಘಿಸಿದ್ದರೆ ಅಥವಾ ಉಲ್ಲಂಘಿಸಲು ಸಹಕಾರ ಮಾಡಿದ್ದರೆ ಅಂತಹ ಅಪರಾಧಕ್ಕೆ ಒಂದು ವರ್ಷದವರೆಗೆ ಶಿಕ್ಷೆ ಅಥವಾ ದಂಡ ಅಥವಾ ಇವೆರಡಕ್ಕೂ ಗುರಿಯಾಗುವನು. ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದೂರು ಸಲ್ಲಿಸಿ, ದಂಡಾಧಿಕಾರಿಗಳು ಮೊಕದ್ದಮೆಯನ್ನು ವಿಚಾರಣೆಗೆ ಅಂಗೀಕರಿಸಿದ್ದರೆ, ನ್ಯಾಯಾಧೀಶರು ವಾರಂಟ್ ಇಲ್ಲದೇ ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ ಎಂದು ಹೇಳಲಾದ ಕೃತಿಗಳನ್ನು ಎಲ್ಲಿ ದೊರೆಯುತ್ತವೆಯೋ ಅಲ್ಲಿ ಜಪ್ತಿ ಮಾಡಬಹುದು. ಜಪ್ತಿಯಾದ ಕೃತಿಗಳನ್ನು ಸಾಧ್ಯವಾದಷ್ಟು ಬೇಗ ನ್ಯಾಯಾಲಯದಲ್ಲಿ ಹಾಜರಪಡಿಸಬೇಕು. ಜಪ್ತಿಯಾದ ೧೫ ದಿನಗಳಲ್ಲಿ ಇದರಲ್ಲಿ ಆಸಕ್ತಿ ಇದ್ದ ವ್ಯಕ್ತಿಯು ತನಗೆ ಆ ಕೃತಿಗಳನ್ನು ಮರಳಿಸಬೇಕು ಎಂದು ಅರ್ಜಿ ಕೊಡಬಹುದು. ನ್ಯಾಯಾಧೀಶರು ಆ ಅರ್ಜಿಯನ್ನು ವಿಚಾರಿಸಿ ಸೂಕ್ತ ಆದೇಶ ನೀಡಬಹುದಾಗಿದೆ. ಹಾಗೂ ತೀರ್ಮಾನವಾದ ಅರ್ಜಿಯ ಮೇಲೆ ಮೇಲ್ಮನವಿ ಸಲ್ಲಿಸಬಹುದು.

ಸಾಮಾನ್ಯವಾಗಿ ನಾವು ಯಾವುದನ್ನು ಕೃತಿಚೌರ್ಯ ಎಂದು ಹೇಳುತ್ತೇವೆಯೋ ಅದು ಕಾನೂನಿನ ದೃಷ್ಟಿಯಲ್ಲಿ ಕೃತಿಸ್ವಾಮ್ಯದ ಉಲ್ಲಂಘನೆಯಾಗಿರುತ್ತದೆ. ಒಬ್ಬನ ಕೃತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಕಳುವು ಮಾಡಿಕೊಂಡು ಆ ಕೃತಿ ತನ್ನದೇ ಎಂದು ಹೇಳುವುದು ಕೃತಿಚೌರ್ಯ. ಇದು ಸಾಹಿತ್ಯ ಪ್ರಪಂಚದ ಕಳ್ಳತನ. ಇನ್ನೂ ಅನೇಕ ಸಲ ಯಾವುದೇ ವ್ಯಕ್ತಿ ಸ್ವಂತ ಲಾಭಕ್ಕಾಗಿಯೋ ಅಥವಾ ಇನ್ನೊಬ್ಬರನ್ನು ಅವಮಾನಕ್ಕೆ ಗುರಿಪಡಿಸಬೇಕೆಂದೋ ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆಯೆಂದು ವಾದ ಹೂಡುತ್ತಾನೆ. ಒಂದು ಮೂಲ ವಸ್ತುವಿದ್ದರೆ ಅದರ ಮೇಲೆ ಹತ್ತು ಜನ ಹತ್ತು ರೀತಿಯ ವ್ಯಾಖ್ಯಾನ ಮಾಡಬಹುದು. ಪ್ರತಿಕೂಲ ಅಭಿಪ್ರಾಯ ಮಂಡಿಸಬಹುದು. ಹಾಗಿದ್ದಾಗ ಅದು ಕೃತಿ ಚೌರ್ಯವೂ ಅಲ್ಲ, ಕೃತಿಸ್ವಾಮ್ಯದ ಉಲ್ಲಂಘನೆಯೂ ಅಲ್ಲ.

ಪ್ರಕಾಶಕರಿಗೆ ಸಂಬಂಧಪಟ್ಟಂತೆ ತಿಳಿಸಬೇಕಾದ ವಿಷಯವೆಂದರೆ, ಯಾವುದೇ ಲೇಖಕ ಪ್ರಕಟಣೆಗಾಗಿ ಒಂದು ಪುಸ್ತಕ ಕೊಟ್ಟರೆ ಕೃತಿ ಸ್ವಾಮ್ಯದ ಬಗ್ಗೆ ಬರಹದಲ್ಲಿ ನಮೂದಿಸದೇ ಪ್ರಕಟಮಾಡುವುದು ಕ್ಷೇಮವಲ್ಲ. ಪ್ರತಿಯೊಬ್ಬ ಪ್ರಕಾಶಕರು ಕೃತಿಸ್ವಾಮ್ಯ ಸನ್ನೆಯಾದ '©' ಈ ಚಿನ್ಹೆಯನ್ನು ಹಾಕದೇ ಇದ್ದರೆ 'ಬರ್ನ್ಸ್ ಕನ್‌ವೆನ್ಷನ್' ಅದು ಲೇಖಕನ ಕೃತಿ ಸ್ವಾಮ್ಯವನ್ನು ಸಿದ್ಧಪಡಿಸಲು ಕಷ್ಟವಾಗುತ್ತದೆ. ಕೃತಿಕಾರನು ಗ್ರಂಥದ ಸ್ವಾಮ್ಯವನ್ನು ಒಂದನೇ ಪ್ರಕಟಣೆಗೆ ಕೊಟ್ಟಿದ್ದಾನೋ ಅಥವಾ ಮುಂದಿನ ಎಲ್ಲ ಪ್ರಕಟಣೆಗಳ ಹಕ್ಕನ್ನು ಕೊಟ್ಟಿದ್ದಾನೋ ಇದರ ಉಲ್ಲೇಖ ಬರಹದಲ್ಲಿರಬೇಕು. ಯಾವುದೇ ಇನ್ನೊಬ್ಬ ವ್ಯಕ್ತಿ ತನ್ನ ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ ಎಂದು ಮೊಕದ್ದಮೆ ಹೂಡಿದರೆ ಪ್ರಕಾಶಕನು ಒಬ್ಬ ಪ್ರತಿವಾದಿಯಾಗಿ ನ್ಯಾಯಾಲಯಕ್ಕೆ ಅಲೆದಾಡಬೇಕಾಗುತ್ತದೆ. ಕೈತಪ್ಪಿನಿಂದಲೋ, ಮರವಿನಿಂದಲೋ, ನಿಷ್ಕಾಳಜಿತನದಿಂದಲೋ ಪ್ರಕಾಶಕರು ತಮ್ಮ ರಕ್ಷಣೆ ತಾವು ಮಾಡಿಕೊಳ್ಳದಿದ್ದರೆ ಮುಂದೆ ಕಾನೂನಿನ ತೊಂದರೆಗೆ ಗುರಿಯಾಗುವುದಲ್ಲದೇ, ಆರ್ಥಿಕ ನಷ್ಟವನ್ನು ಅನುಭವಿಸುತ್ತಾರೆ.

ಕರ್ನಾಟಕದಲ್ಲಿ ಪ್ರತಿಯೊಬ್ಬ ಲೇಖಕ ಅಥವಾ ಪ್ರಕಾಶಕ ತಾನು ಬರೆದ ಅಥವಾ ಪ್ರಕಟಿಸಿದ ಕೃತಿಯ ಮೂರು ಪ್ರತಿಗಳನ್ನು ನಿರ್ದೇಶಕರು, ಗ್ರಂಥಾಲಯ ವಿಭಾಗ, ಕಬ್ಬನ್ ಪಾರ್ಕ್, ಬೆಂಗಳೂರು - ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆಯ ಮೂಲಕ ಪತ್ರ ಪಾವತಿ ಪಡೆದು ಕಳುಹಿಸಲೇಬೇಕು. ಆಗ ಕೃತಿಸ್ವಾಮ್ಯವು ಇಲ್ಲಿ ನೋಂದಾಗುತ್ತದೆ. ಇದು ಮುಂದೆ ಯಾವುದೇ ತರಹದ ತಂಟೆ - ತಕರಾರುಗಳು ಬಂದಾಗ ಪ್ರಕಾಶಕರಿಗೆ ಅನುಕೂಲವಾಗುತ್ತದೆ. ಇದಲ್ಲದೆ ನ್ಯಾಶನಲ್ ಲೈಬ್ರರಿ ಕಲ್ಕತ್ತಾ, ಕನ್ನೆಮರ ಲೈಬ್ರರಿ ಅಡಿಯಾರ್, ಮದ್ರಾಸ್, ಸಿಟಿ ಲೈಬ್ರರಿ ಮುಂಬೈ ದೆಹಲಿಯ ಲೈಬ್ರರಿ ಇವುಗಳಿಗೆ ತಲಾ ಒಂದು ಪ್ರತಿ ಕಳುಹಿಸಬೇಕು. ಸಾಮಾನ್ಯವಾಗಿ ಯಾರೂ ಕಳುಹಿಸುವುದಿಲ್ಲ. ಹೀಗೆ ಕಳುಹಿಸಿದರೆ ಅಲ್ಲಿ ಅವು ನೋಂದಾಗಿ ರುಜುವಾತಿಗೆ ಅನುಕೂಲವಾಗುತ್ತದೆ.

●

ಹೊಸ ಶತಮಾನ : ಅದೇ ಬಾನು ಅದೇ ಭಾನು

● ಚಂಪಾಕಾಲಂ

ಇಂದು ಡಿಸೆಂಬರ ಮೂವತ್ತೊಂದು. ನಾಳೆ ಜನವರಿ ಒಂದು. ನಮಗೆ 'ನಾಳೆ' ಅಂದರೆ ಬೆಳಗು ಹರಿದ ನಂತರದ್ದು. ಸೂರ್ಯೋದಯ ಸೂರ್ಯಾಸ್ತಗಳ ಲೆಕ್ಕದಲ್ಲಿ ನಮ್ಮ ಇಂದು-ನಾಳೆ-ನಿನ್ನೆಗಳು. ಆದರೆ....

ಈ ಮಧ್ಯರಾತ್ರಿಯ ನಂತರ 'ನಾಳೆ' ಅಂತ ಒಂದು ಕ್ಯಾಲೆಂಡರು ಹೇಳುತ್ತಿದೆ. ನಟ್ಟಿರುಳಿನ ನೀರವ ಮೌನ. ರಾಜಧಾನಿಯ ಅಷ್ಟೇನೂ ಗದ್ದಲವಿಲ್ಲದ ಈ ಬಡಾವಣೆಯ ಮನೆಯ ಸುತ್ತ ಕತ್ತಲೆಯ ಕಾವಲು. ಆಗೀಗ ದೂರದಲ್ಲಿ ಎಲ್ಲೋ ಓಡಾಡುವ ಆಟೋಗಳ ಸದ್ದು. ಅವು ದೂರ ಹೋದಷ್ಟೂ ಅವುಗಳ ಸಪ್ಪಳ ಸಮಿಸಮೀಪವೇ ಅನ್ನಿಸುವುದು ರಾತ್ರಿಯ ಮಹಿಮೆಯೋ ಮೌನದ ಮಹಿಮೆಯೋ ಗೊತ್ತಾಗುತ್ತಿಲ್ಲ.

ನಾನೂ ನೋಡುತ್ತಿದ್ದೇನೆ ಎದುರು ಗೋಡೆಯ ಮೇಲಿನ ಗಡಿಯಾರದ ಮುಳ್ಳುಗಳ ಸ್ಥಿತಿಯನ್ನೋ ಗತಿಯನ್ನೋ. ಅದು ಗೋಡೆ-ಗಡಿಯಾರ. ಆ ಗೋಡೆ? ಅದು ಗಡಿಯಾರದ ಗೋಡೆ! (ನಾಯಿಗುತ್ತಿ ಮತ್ತು ಗುತ್ತಿನಾಯಿಯ ಹಾಗೆ.) ಆದರಿಂದ ಇದಕ್ಕೆ, ಇದರಿಂದ ಅದಕ್ಕೆ ಅರ್ಥ; ಅರ್ಥದಿಂದಾಗಿ ಅಸ್ತಿತ್ವ, ಹೌದಲ್ಲ! ಅಸ್ತಿತ್ವ ಎನ್ನುವುದು ಎಷ್ಟು ಪರಾವಲಂಬಿಯಾಗಿದೆ!

ನಮ್ಮ 'ಕಾಲ'ದ ಎಣಿಕೆ ಕೂಡ ಹಾಗೇ. ನಿನ್ನೆ-ಮೊನ್ನೆ-ಆಚೆಮೊನ್ನೆಗಳು ಭೂತಕಾಲದ ನಿರ್ದೇಶಿಕೆಗಳಾದರೆ, ನಾಳೆ-ನಾಡದು-ಆಚೆ ನಾಡದುಗಳು ಭವಿಷ್ಯದ ಸೂಚಿಕೆಗಳು. ಇವೆಲ್ಲದಕ್ಕೂ 'ವರ್ತಮಾನ'ವೇ ನೆಲೆ. ಇವತ್ತು, ಇಂದು, ಈಗ, ಇದೇ ಈಗ, ಈ ಕ್ಷಣ - ಅಂತ ಅನ್ನಅನ್ನುತ್ತಲೇ 'ಈ' ಹೋಗಿ 'ಆ' ಆಗಿರುತ್ತದೆ. ಇಂದು 'ನಾಳೆ' ಅನ್ನಿಸಿಕೊಂಡದ್ದು 'ಇಂದು' ಆಗಿ, ಈ ಇಂದು 'ನಿನ್ನೆ' ಆಗಿರುತ್ತದೆ.

ಇವೆಲ್ಲ ನಾವೇ ನಮಗಾಗಿ ನಿರ್ಮಿಸಿಕೊಂಡ ಪರಿಕಲ್ಪನೆಗಳಿಗೆ ನಾವು ನಮ್ಮ ಭಾಷೆಯಲ್ಲಿ ಕೊಟ್ಟ ಶಬ್ದಗಳು. ಇವು ನಮ್ಮದೇ ಸೃಷ್ಟಿ ಆಗಿರುವುದರಿಂದ ಇವುಗಳ ಕೂಡ ಹೇಗೆ ಬೇಕಾದರೂ ಚೆನ್ನಾಟ ಆಡಬಹುದು ನಾವು.

ಈಗ ನಮ್ಮನ್ನೆಲ್ಲ ಗುಂಗಾಗಿ ಕಾಡುತ್ತಿರುವ ಪದಪುಂಜಗಳನ್ನೇ ನೋಡಿರಿ. ಹೊಸ 'ಶತಮಾನ' ಅನ್ನುತ್ತೇವೆ. ಈ ಶತಮಾನ ಅಂಥಿಂಥ ಶತಮಾನ ಅಲ್ಲ. ಇದು ಹೊಸ 'ಸಹಸ್ರಮಾನ'ದ ಉದ್ಘಾಟನೆ ಮಾಡುತ್ತಿರುವ ವಿಶಿಷ್ಟ ಶತಮಾನ.

ಇಪ್ಪತ್ತೊಂದನೇ ಶತಮಾನ ಅಥವಾ ಹೊಸ ಸಹಸ್ರಮಾನ ಈ ವರ್ಷದಿಂದ ಪ್ರಾರಂಭವೇ

ಮುಂದಿನ ವರ್ಷದಿಂದಲೇ ಎಂಬ ಬಗ್ಗೆ ತಿಂಗಳುಗಟ್ಟಲೆ ಅಂತಾರಾಷ್ಟ್ರೀಯ ಚರ್ಚೆ ನಡೆಯುತ್ತಿದೆ. ಇಂಥ ಎಲ್ಲ ಚರ್ಚೆಗಳಿಗೆ ವಾಸ್ತವ ಅಥವಾ ಸತ್ಯಗಳಿಗಿಂತ ನಮ್ಮ ನಮ್ಮ ಲೆಕ್ಕಾಚಾರಗಳೇ ಆಧಾರ. ಸಹಜವಾಗಿ ವಿಚಾರ ಮಾಡಿದರೆ ದಶಕ ಅಂದರೆ ಹತ್ತು ವರ್ಷ, ಶತಮಾನ ಅಂದರೆ ನೂರು ವರ್ಷ. ಒಂದರಿಂದ ನೂರು, ಒಂದರಿಂದ ಸಾವಿರ ಇವು ಕಾಲಘಟಕಗಳು. ಈ ಅಂದಾಜಿನ ಪ್ರಕಾರ ೨೦೦೦ದ ಇಸ್ವಿ ಮುಗಿದ ನಂತರವೇ (ಅಂದರೆ ಮುಂದಿನ ವರ್ಷದ ಡಿಸೆಂಬರ ೩೧ರ ನಂತರವೇ) ಇಪ್ಪತ್ತೊಂದನೇ ಶತಮಾನ ಪ್ರಾರಂಭ.

ಆದರೆ ಇನ್ನೂ ಒಂದು ಲೆಕ್ಕವಿದೆ. ನಾವು ಎಲ್ಲಿಂದ ಗಣನೆ ಶುರು ಮಾಡುವುದು. 'ಶೂನ್ಯ' ದಿಂದಲೋ 'ಒಂದ'ರಿಂದಲೋ? ಶೂನ್ಯದಿಂದ ಒಂಭತ್ತು. ೦-೧-೨-೩... ೯.. ಹೀಗೆ. ಅಂದರೆ '೧೦'ರಿಂದ ಹೊಸ ದಶಕ ; '೨೦' ರಿಂದ ಇಪ್ಪತ್ತರ ದಶಕ. ಹಾಗೆಯೇ ೧೯೦೦ ದಿಂದ ಇಪ್ಪತ್ತನೇ ಶತಮಾನ, ೨೦೦೦ದಿಂದ ಇಪ್ಪತ್ತೊಂದನೇ ಶತಮಾನ.

ಲೆಕ್ಕ ಬರೋಬರಿ ಆಯಿತಲ್ಲವೇ? ಆದರೆ ಯಾಕೆ ಈ ಗೊಂದಲ? ನಮ್ಮ ಅನುಭವೀ ಸಾಹಿತಿ ಸ್ನೇಹಿತರೊಬ್ಬರು ಹೇಳಿದರು : ಈ ನಮೂನೆಯ ಗೊಂದಲ ನಿರ್ಮಾಣದಿಂದ ಇಡೀ ಎರಡು ವರ್ಷ ಲಾಭ ಹೊಡಕೊಳ್ಳಬೇಕೆಂಬ ಜಾಗತಿಕ ವ್ಯವಹಾರಸ್ಥರ ಹುನ್ನಾರ ಇದು! .... ಇದು ಅವರ ಲೆಕ್ಕಾಚಾರ.

ಅವರವರ ಭಾವಕ್ಕೆ ಅವರವರ ದರುಶನಕೆ..... ಎಂಬ ಅನುಭಾವದ ಸಾಲುಗಳಿಗೆ ನಾವಿನ್ನು ಅವರವರ ಲೆಕ್ಕಕ್ಕೆ ಎಂಬ ಅನುಭವದ ಸಾಲನ್ನು ಜೋಡಿಸಬೇಕು.

ಹೊಸ ದಶಕ, ಶತಮಾನ, ಸಹಸ್ರಮಾನ ಅಂದರೆ ಪುಕ್ಕಟೆ ಆಗುತ್ತದೆಯೇ? ಅದರ 'ಸ್ವಾಗತ'ಕ್ಕಾಗಿ ಎಷ್ಟೊಂದು ತಯಾರಿಗಳು! ಕಳೆದ ಶತಮಾನದ ಎಲ್ಲಾ ನಮೂನೆಯ ವಿದ್ಯಮಾನಗಳ ಮೆಲುಕು ಹಾಕಬೇಕು. ಸಾಹಿತ್ಯ ಸೃಷ್ಟಿಯ ಮೌಲ್ಯಮಾಪನ ಮಾಡಬೇಕು. ವಿಚಾರ ಸಂಕಿರಣ ಹಮ್ಮಿಕೊಳ್ಳಬೇಕು. ಮುಂದಿನ ಶತಮಾನದ ಸವಾಲುಗಳ ಪಟ್ಟಿ ಮಾಡಿ ಅವಕ್ಕೆ ಜವಾಬುಗಳನ್ನೂ ಸೂಚಿಸಬೇಕು. ಶತಮಾನದ ವ್ಯಕ್ತಿಗಳನ್ನು ಹೆಸರಿಸಲು ಸ್ಪರ್ಧೆ ಏರ್ಪಡಿಸಬೇಕು. ಅದಕ್ಕೂ ಲಾಬಿ ಮಾಡಬೇಕು. ಎಲ್ಲಕ್ಕೂ ಮೇಲಾಗಿ ನಮ್ಮ ಕವಿಗಳು ಹೊಸದಾಗಿ ಕವನ ರಚಿಸಬೇಕು!

ನಮ್ಮ ಕವಿಗಳು ಮಾತ್ರ ಈ ವಿಷಯದಲ್ಲಿ ನಿರ್ಲಿಪ್ತರು. ಅವರು ಹಿಂದೂ ಪಂಚಾಂಗದ ಪ್ರಕಾರ 'ಯುಗಾದಿ' ಬಗ್ಗೆಯೂ ಬರೆಯುತ್ತಾರೆ; ಕ್ರಿಶ್ಚನ್ ಕ್ಯಾಲೆಂಡರ ಪ್ರಕಾರ 'ಜನವರಿ' ಬಗ್ಗೆಯೂ ಬರೆಯುತ್ತಾರೆ. ಮಾರ್ಕೆಟ್ಟಿನಲ್ಲಿ ಯಾವುದಕ್ಕೆ ಡಿಮ್ಯಾಂಡ್ ಇದೆಯೋ ಅದನ್ನು ಸಪ್ಲಾಯ್ ಮಾಡಬಲ್ಲ ವ್ಯಾಪಾರಿಗಳು ಅವರು. ಕಾವ್ಯ ಎಂಬುದು ಕಾಲದ ಹಾಗೆಯೇ ಸಮಕಾಲೀನ ಮತ್ತು ಸರ್ವಕಾಲೀನ; ಸ್ಥಾವರ ಮತ್ತು ಜಂಗಮ. ಕಾಲಪ್ರವಾಹದ ಹಾಗೆ ಕಾವ್ಯ ವಾಹಿನಿಯೂ ಸದಾ ಸದಾ ಅನಾದಿಯಾಗಿ ಅನಂತವಾಗಿ ಹರಿಯುತ್ತಿರುವುದು.

ಸಹಜವಾಗಿಯೇ ಸಮರ್ಥರಾಗಿರುವ ಕವಿಗಳು ಈ ಬಗೆಯ ಸಮರ್ಥನೆ ನೀಡುವುದು ಸಹಜವೇ.

★

ಭಾರತೀಯ ಪಂಚಾಂಗದ ಪ್ರಕಾರ ಈಗ ಚಾಲ್ತಿಯಲ್ಲಿರುವುದು ಕಲಿಯುಗ. ಈ ಯುಗದ ೫೧ನೆಯದೋ ೫೨ನೆಯದೋ ಶತಮಾನ ಈಗಾಗಲೇ ಪ್ರಾರಂಭವಾಗಿದೆ ಎಂದು ಕಳೆದ ವರ್ಷ ಕೇಸರಿ ಬಣ್ಣದ ಬ್ಯಾನರುಗಳು ಎಲ್ಲೆಂದರಲ್ಲಿ ಸಾರಿ ಹೇಳುತ್ತಿದ್ದವು. ಕ್ರಿಸ್ತಶಕದ ೨೦೦೦ದ ಜನವರಿ ೧ ಅಂದರೆ ಶ್ರೀ ಪ್ರಮಾಥಿ ಸಂವತ್ಸರದ ಮಾರ್ಗಶಿರ-ಪೌಷ ಮಾಸದ ೧೬ನೆಯ ತೇದಿ. ಹಿಜರಿ ಶಕೆ ಎಂಬುದೂ ಇದೆ. ಅದರ ಕಾಲನಿರ್ಣಯವೇ ಬೇರೆ. ಭೂಗೋಲದ ಬೇರೆ ಬೇರೆ ಪ್ರಾಕೃತಿಕ ಪರಿಸರಗಳಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಮನುಷ್ಯ ಬಳಕೆಗೆ ತಂದ ಕ್ಯಾಲೆಂಡರುಗಳನ್ನು ಇಂದು ಕ್ರಿಶ್ಚನ್ ಕ್ಯಾಲೆಂಡರು ಜಾಗತಿಕ ಮಟ್ಟದಲ್ಲಿ ಸವರಿ ಹಾಕಿದೆ. ನಮಗೆ ನೆನಪಿರುವುದು ಕ್ರಿಸ್ತಶಕದ ದಿನಾಂಕಗಳೇ : ಜನವರಿ ೨೬, ಅಗಸ್ಟ್ ೧೫, ಅಕ್ಟೋಬರ ೨, ನವಂಬರ್ ೧, ಡಿಸೆಂಬರ ೬.... ಹೀಗೆ : ಕೆಲವು ಸವಿ ಮೆಲುಕುಗಳು, ಹಲವು ಕರಾಳ ಹಳವಂಡಗಳು.

‘ಕಾಲ’ದೊಂದಿಗೆ ನಾವು ಸ್ಥಿತಿ, ಗತಿ, ಬದಲಾವಣೆ, ಕ್ರಾಂತಿ ಇತ್ಯಾದಿ ಪರಿಕಲ್ಪನೆಗಳನ್ನು ಜೋಡಿಸುತ್ತೇವೆ. ಕಾಲದ ಅನಾದಿ, ಅನಂತ ಆಕಾರದ ಎದುರು ಕೋಟಿ ಕೋಟಿ ಜೀವರಾಶಿಗಳಲ್ಲಿ ಒಂದಾದ ‘ಮನುಷ್ಯ’ ಪ್ರಾಣಿಯ ಅಸ್ತಿತ್ವ ಕ್ಷುಲ್ಲಕ ಅಂದರೆ ಅತಿ ಕ್ಷುಲ್ಲಕವೇನೋ ಖರೆ. ಆದರೆ ಈ ‘ಮನುಷ್ಯ’ನೆಂಬವನೇ ಭಾಷೆಯ ಮಾಧ್ಯಮದ ಮೂಲಕ ಕಾಲವನ್ನು ಅರಿಯಲು, ಅಳೆಯಲು ಪ್ರಯತ್ನಿಸುತ್ತಿರುವುದರಿಂದ ಕಾಲದ ಗತಿಗೂ ಮನುಷ್ಯನ ಗತಿಗೂ ಇರಬಹುದಾದ ಸಂಬಂಧವಾದರೂ ಎಂಥದು ಎಂಬ ಜಿಜ್ಞಾಸೆ ಮೂಡುತ್ತದೆ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು, ಕಾಲ ಮಹಿಮೆ, ಅತ್ತೆಗೊಂದು ಕಾಲ ಸೊಸೆಗೊಂದು ಕಾಲ - ಎಂಬಂಥ ದಿನಬಳಕೆಯ ಮಾತುಗಳು, ಈ ‘ಕಾಲ’ ಎಂಬುದಕ್ಕೆ ತನ್ನದೇ ಆದ ಒಂದು ಕಾರ್ಯಕ್ರಮ, ಪ್ರೊಗ್ರಾಮ್, ಡಿಜೈನ್, ಹಿಡನ್ ಅಜೆಂಡಾ ಇರಬಹುದೆಂಬುದನ್ನು ಸೂಚಿಸಿದರೆ, ಮನುಷ್ಯ ತನ್ನ ಪ್ರಯತ್ನದಿಂದಲೇ ಕಾಲವನ್ನು ನಿಯಂತ್ರಿಸಿದ, ಇತಿಹಾಸ ಬದಲಿಸಿದ ಅನೇಕ ಉದಾಹರಣೆಗಳನ್ನು ಇತಿಹಾಸ, ಪುರಾಣಗಳಲ್ಲಿ ಓದುತ್ತೇವೆ. ಈ ಜಂಜಾಟದಲ್ಲಿ ಮನುಷ್ಯನ ಶ್ರಮಕ್ಕೆ ಕಾಲದ ಮುಹೂರ್ತವನ್ನು ಅನುಕೂಲಕರವಾಗಿ ಎಡ್‌ಜಸ್ಟ್ ಮಾಡಿಕೊಡುತ್ತ, ಅದನ್ನೇ ಉಪಜೀವನದ ಒಂದು ಧಂಧೆಯನ್ನಾಗಿ ಮಾಡಿಕೊಂಡಿರುವ ಜ್ಯೋತಿಷಿಗಳ, ಕಾಲಜ್ಞಾನಿಗಳ ಒಂದು ಗ್ಯಾಂಗೂ ತಯಾರಾಗಿದೆ.

ಕಾಲ ಪ್ರವಾಹ ಅನ್ನುತ್ತೇವೆ; ಕಾಲಚಕ್ರ ಎಂದೂ ಅನ್ನುತ್ತೇವೆ. ಒಂದು ಸರಳ ರೇಖಾತ್ಮಕ (ಲೀನಿಯರ್), ಇನ್ನೊಂದು ವೃತ್ತಾಕಾರ (ಸರ್ಕ್ಯುಲರ್). ಕಾಲ ಎಂಬುದು ಮುಂದೆ

ಮುಂದೆ ಪ್ರವಾಹವಾಗಿ ಹರಿಯುತ್ತಿದ್ದರೆ ಸ್ಥಿತ್ಯಂತರಗಳಲ್ಲಿ 'ಬದಲಾವಣೆ' 'ಪ್ರಗತಿ' 'ಮುನ್ನಡೆ' ಅಂತ ಹಲವು ಪದಗಳನ್ನು ಬಳಸಬಹುದು. ಆದರೆ ಕಾಲವು 'ಚಕ್ರ'ವಾಗಿದ್ದರೆ ಇವೆಲ್ಲ ಬಂಡಲ್ ಬಾಜಿ. ಎಲ್ಲಿಂದ ಹೊರಟೆವೋ ಅಲ್ಲಿಗೇ. ಪುನರಪಿ ಜನನಂ ಪುನರಪಿ ಮರಣಂ. History repeats itself. ಮನುಷ್ಯ ಏನೂ ಡೀಕುವಂತಿಲ್ಲ.

ಹಾಗಾದರೆ, ಇರುವ ಹಕೀಕತ್ತಾದರೂ ಏನು?

ಕಾಲಾಂತರದಲ್ಲಿ ಅದ್ಭುತ ಬದಲಾವಣೆಗಳಾಗಿವೆ, ನಿಜ. ಭೂಮಿಯಾಗಲಿ, ಆಕಾಶವಾಗಲಿ, ಸೂರ್ಯ-ಚಂದ್ರ-ತಾರೆ-ನೀಹಾರಿಕೆಗಳಾಗಲಿ, ಹಕ್ಕಿ ಹಾವು ಹುಲಿ ಗುಂಗಾಡುಗಳಾಗಲಿ ಬದಲಾಗಿವೆಯೇ ಬದಲಾಗುತ್ತಿವೆಯೇ ತಿಳಿಯದು. ಆದರೆ ಮನುಷ್ಯ ತನಗಾಗಿ ತಾನೇ ನಿರ್ಮಿಸಿಕೊಂಡ ಲೋಕದಲ್ಲಿ ಮಾತ್ರ ಅಗಾಧ ಬದಲಾವಣೆಗಳಾಗಿವೆ ಎಂಬ ಮಾತನ್ನು ಮನುಷ್ಯರಾದವರೇ ಬರೆದುಕೊಂಡ ದಾಖಲೆಗಳಲ್ಲಿ ನಾವು - (ನಾವೂ ಮನುಷ್ಯರೇ!) - ಕಾಣುತ್ತೇವೆ. ಅದರಲ್ಲೂ ಕಳೆದ ಎರಡು-ಮೂರು ಶತಮಾನಗಳಲ್ಲಂತೂ ನಮ್ಮ ಜ್ಞಾನ-ವಿಜ್ಞಾನಗಳ ಅರಿವಿನ ವಿಸ್ತಾರ ವಿಪರೀತವಾಗಿದೆ. ವೈಯಕ್ತಿಕ ಸಂಬಂಧಗಳು, ಸಾಮಾಜಿಕ ಸಂಬಂಧಗಳು ಪಲ್ಲಟಗೊಳ್ಳುತ್ತಿವೆ.

ಇಂಥ ಪಲ್ಲಟಗಳಿಗೆ ಹೊಂದಿಕೊಳ್ಳಲಾಗದ ಮನಸ್ಸುಗಳು 'ಅಯ್ಯೋ, ಕಾಲ ಕೆಟ್ಟು ಹೋಯಿತು!' ಅಂತ ಎಲ್ಲ ಜವಾಬ್ದಾರಿಯನ್ನು ಬಡಪಾಯಿ 'ಕಾಲ'ದ ಮೇಲೆಯೇ ಹಾಕಿ ತಾವು ಬಚಾವಾಗುವುದುಂಟು. ಕಾಲಗಳಲ್ಲೂ ಕೂಡ ರಾಹುಕಾಲ, ಗುಳಿಕಾಲ, ಯಮಗಂಡ ಕಾಲಗಳೆಂದು ಪಟ್ಟ ಮಾಡುವುದುಂಟು.

★

ಅವರಿವರ ಉಸಾಬರಿ ನಮಗೇಕೆ? ನಮ್ಮ ನಮ್ಮ ಜೀವಿತಗಳ ಅವಧಿಯಲ್ಲೇ ನಾವು ಕಣ್ಣಾರೆ ಕಂಡ ಬದಲಾವಣೆಗಳು ಎಷ್ಟೋ. ನಮ್ಮೂರಿನಿಂದ ಬೇರೆ ಊರಿಗೆ ನಡಕೊಂಡು ಹೋಗಿ, ಸಾಲಿಯ ಕಸ ಹೊಡೆದು, ಮಾಸ್ತರ ಕೈಯಲ್ಲಿ ಹೊಡೆತ ತಿಂದು ರಠಈಕ, ಬೇರೀಜು-ವಜಾಬಾಕಿ, ರೂಪಾಯಿ-ಆಣೆ-ಪೈ ಬಾಯಿಪಾಠ ಮಾಡಿದ ನಮ್ಮಂಥವರ ಮನೆಯಲ್ಲಿ ಈಗ ಕುಳಿತಲ್ಲಿಯೇ ಟೀವಿ, ಇಂಟರ್‌ನೆಟ್‌ಗಳ ಮೂಲಕ ಶಿಕ್ಷಣ ಪಡೆಯುವ ಸೌಲಭ್ಯಗಳಿವೆ. ಯಾರಾದರೂ ಸತ್ತಾಗ ಊರೂರಿಗೆ ಆಳು ಕಳಿಸಿ ಬೀಗರು ಬಿಜ್ಜರು ಬರುವ ತನಕ ಹೆಣವನ್ನಿಟ್ಟುಕೊಂಡು ಅಳುವ ಕಾರ್ಯಕ್ರಮ ಈಗ ಮಾಡಬೇಕಾಗಿಲ್ಲ; ಕೈಯಲ್ಲಿರುವ ಸೆಲ್ ಫೋನಿನಿಂದ ಈಗಿಂದೀಗ ಎಲ್ಲಿಗಾದರೂ ಯಾರಿಗಾದರೂ ಎಂಥದಾದರೂ ಸಂದೇಶ ಕಳಿಸಬಹುದು. ಶತ್ರುಗಳನ್ನು ದೃಷ್ಟಿಯುದ್ಧ, ಮುಷ್ಟಿಯುದ್ಧ ಮಾಡಿ, ಗದೆಯಿಂದ ತೊಡೆ ಸೀಳಿ, ಬಾಣ ಬಿಟ್ಟು, ಖಡ್ಗ ಇರಿದು ಸಂಹಾರ ಮಾಡಬೇಕಾಗಿಲ್ಲ; ಮುಟಗೆಯಲ್ಲಿಯ ಒಂದು ಬಟನ್ ಒತ್ತಿದರೆ ಸಾಕು, ವೈರಿ

ಧ್ವಂಸವಾಗಬಹುದು; ಜೊತೆಗೆ ತಾನೂ ಧ್ವಂಸವಾಗಬಹುದು. ಅಷ್ಟೇ ಏಕೆ, ಬಸಿರಾದವಳು ಬೇನೆ ತಿಂದು ಹಡೆಯುವ ತೊಂದರೆಯೂ ಈಗ ಇಲ್ಲ. ಡಿಸೆಂಬರ ೩೧ರ ರಾತ್ರಿ ಹನ್ನೆರಡರ ಮುಳ್ಳು ಟಣ್ ಅಂದ ನಂತರವೇ ಮಾತೃಗರ್ಭದಿಂದ ಮಗುವಿನ 'ಅವತಾರ' ಆಗುವಂತೆ ಮಾಡಿ ನವಸಹಸ್ರಮಾನವನ್ನು ಮಗುವಿನ ಹಾರಾಟ ಚೀರಾಟದೊಂದಿಗೆ ಸ್ವಾಗತಿಸುವ ವ್ಯವಸ್ಥೆಯನ್ನೂ ಆಧುನಿಕ ವೈದ್ಯ ವಿಜ್ಞಾನ ಮಾಡಿದೆ.

ನಾವು ಕಂಡ ಶತಮಾನ ಅತ್ಯಂತ ಅಮಾನವೀಯವಾದ ಘೋರ ಶತಮಾನ ಎನ್ನುವವರೂ ಇದ್ದಾರೆ. ಯುದ್ಧ, ರಕ್ತಪಾತ, ಕೊಲೆ, ಸುಲಿಗೆ, ಹೈಜಾಕ್, ಅತ್ಯಾಚಾರ, ಭ್ರಷ್ಟಾಚಾರ - ಪತ್ರಿಕೆಗಳ ಪುಟ ಪುಟಗಳನ್ನು ತಗೆದಂತೆಲ್ಲ ಕಣ್ಣಿಗೆ ಹೊಡೆಯುವ ಸುದ್ದಿಗಳೇ ಇವು. ಇವುಗಳನ್ನೇ ರೋಮಾಂಚಕವಾಗಿ ಪ್ರಕಟಿಸಿ ಬದುಕುತ್ತಿರುವ ಪತ್ರಿಕೆಗಳೂ ಇವೆ. ಇವೆಲ್ಲ ಈ ಶತಮಾನಕ್ಕೆ ಮಾತ್ರ ಮೀಸಲಾದ ವೈಶಿಷ್ಟ್ಯಗಳೋ ಅಥವಾ ಎಲ್ಲ ಕಾಲದಲ್ಲೂ ಇದ್ದು, ಹೆಚ್ಚಾಗಿ ವರಧಿಯಾಗದೆ, ಈಗ ಮಾತ್ರ ಮಾಧ್ಯಮಗಳ ಭರಭರಾಟೆಯಲ್ಲಿ ಮೆರೆಯುತ್ತಿರುವ ವಿದ್ಯಮಾನಗಳೋ ಖಾತ್ರಿಯಾಗಿ ಹೇಳುವಂತಿಲ್ಲ.

ಪ್ರಜ್ಞಾಪೂರ್ವಕವಾಗಿ 'ಬದಲಾವಣೆ' ಎಂಬುದರಲ್ಲಿ ಸೈದ್ಧಾಂತಿಕ ನಂಬಿಕೆ ಇರಿಸಿಕೊಂಡ ನಾನು ಈ ಬದಲಾವಣೆ ಪ್ರಗತಿಪರವಾಗಿರಲಿ ಮಾನವೀಯ ಮೌಲ್ಯಗಳ ಪರವಾಗಿರಲಿ ಎಂದು ಬಯಸುವ, ಅದಕ್ಕಾಗಿ ಒಂದಿಲ್ಲೊಂದು ಚಳುವಳಿಯಲ್ಲಿ ತೊಡಗಿಸಿಕೊಂಡಿರುವ ನಿರಂತರ ಕನಸುಗಾರ. ''ಪ್ರೀತಿ ಇಲ್ಲದೆ ನಾನು ಏನನ್ನೂ ಮಾಡಲಾರೆ - ದ್ವೇಷವನ್ನೂ ಕೂಡ'' - ಎಂಬ ಘೋಷಣಾ ಫಲಕ ಹಚ್ಚಿಕೊಂಡ ಮನುಷ್ಯ. ಪ್ರೀತಿ ಕೊಟ್ಟಿದ್ದೇನೆ; ಪ್ರೀತಿ ಪಡೆದಿದ್ದೇನೆ. ಸದಾ ಸ್ವ-ವಿಮರ್ಶೆಯ ಕಿಚ್ಚಿನಲ್ಲಿ ಬೇಯುತ್ತ, ಮಾಡಿದ ತಪ್ಪುಗಳನ್ನು ಮತ್ತೆ ಮಾಡದೆ, 'ಹೊಸ' ತಪ್ಪು ಮಾಡಿದರೂ ಅವುಗಳನ್ನು ತಿದ್ದಿಕೊಳ್ಳುತ್ತ, 'ಉರಿವ ನಾಲಗೆ' ಇದ್ದರೂ ಎದೆಯಲ್ಲಿ ಸ್ನೇಹದ ಪಣತಿ ಬೆಳಗಿಸುತ್ತ ಬದುಕು ಸಾಗಿಸುತ್ತಿದ್ದರೂ....

ಯಾಕೆ ಈ ಜಗತ್ತು 'ಹೀಗೆಯೇ' ಇದೆ? - ಎಂಬ ಗೊಂದಲದ ಪ್ರಶ್ನೆ ನನ್ನದು. ಅವರಿವರ ಮಾತು ಬೇಡ. ನನ್ನ ಸುತ್ತಲೂ ಇರುವ ಪರಿಸರದಲ್ಲಿ ನಾನೇ ಕಟ್ಟಿಕೊಂಡ ಕಾಮ್ರೇಡಗಳಲ್ಲಿ: ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಸುದ್ದಿ ಸಾಗಿಸುತ್ತ ನಮ್ಮ ನಮ್ಮಲ್ಲೇ ಜಗಳ ಹಚ್ಚಿ ಮೋಜು ನೋಡುವ ನಾರದರಿದ್ದಾರೆ; 'ಗಾಂಧಿ'ಯ ಪೋಜು ಕೊಟ್ಟರೂ ಒಳಗೊಳಗೇ ಲೆಕ್ಕಾಚಾರ ಹಾಕಿ ಕಾರಸ್ಥಾನ ಮಾಡುವ ಶಕುನಿಗಳಿದ್ದಾರೆ; ಅನುಕೂಲವಿದ್ದಾಗ ಉಪಕಾರ ಪಡೆದು ಐನಟೈಮಿನಲ್ಲಿ ಮದ್ದಿನಲ್ಲಿ ಸಗಣಿ ಸೇರಿಸುವ, ಉಂಡ ಗಂಗಾಳದಲ್ಲಿ ಹೇತು ಹೋಗುವ ಮೀರಸಾದಿಕರಿದ್ದಾರೆ; ಸಾವಿರ ಸುಳ್ಳು ಹೇಳಿ ಅದೇ ಸತ್ಯವೆಂದು ಸಾಧಿಸುವ ಗೋಬೆಲ್ಸಗಳಿದ್ದಾರೆ; ನಿಷ್ಠಾವಂತ ಶಿಷ್ಯರಿಂದ ಹೆಬ್ಬೆರಳು ಕೇಳುವ ದ್ರೋಣರಿದ್ದಾರೆ.

ಈ ನಾರದ, ಶಕುನಿ, ಮೀರಸಾದಿಕ್, ಗೋಬೆಲ್, ದ್ರೋಣರಲ್ಲ ನಮ್ಮ ಪುರಾಣಗಳಿಂದ,

ಇತಿಹಾಸಗಳಿಂದ ಕಾಲವಾಹಿನಿಗುಂಟ ನಮ್ಮ ಪ್ರಜ್ಞೆಯಲ್ಲಿ ತೇಲಿ ಬಂದ ಸಂಕೇತಗಳು. ನಮ್ಮ ದಿನನಿತ್ಯದ ಮಾತಿನ ಪಾತ್ರಗಳು. ಹೀಗಂದಾಗ ಪ್ರಶ್ನೆ : ಹಾಗಾದರೆ 'ಮನುಷ್ಯ'ನಲ್ಲಿ ಜೈವಿಕವಾಗಿಯೇ ಕೆಲವು ಮೂಲಭೂತ ಪ್ರವೃತ್ತಿಗಳಿವೆಯೇ? ಬದಲಾಗುತ್ತಿರುವ ಪರಿಸರಕ್ಕೂ ಇವಕ್ಕೂ ಸಂಬಂಧವೇ ಇಲ್ಲವೆ? ಇಂದಿನ ಈ ಕ್ಷಣದ ಈ ಸ್ಥಳದ ಈ ನಾನು ಯಾವುದೋ ಮೂಲಕೃತಿಯ ಒಂದು ಆವೃತ್ತಿ ಮಾತ್ರವೇ?

ನನ್ನ ಹಳೆಯ ಕವನವೊಂದು ನೆನಪಾಗುತ್ತಿದೆ:

ಈ ನಾನು - ನಾನು ನಾನು
ಎಂದು ಎದೆಯ ಸೆಟೆಸಿ ಅಲೆವ
ಈ ನಾನು-ಯಾವ ಬೆಳಕೊ! ಯಾವ ಬೆಳಕು ಯಾರ ಮೇಲೆ
ಬಿದ್ದು ಉದಿಸಿದಂಥ ನೆರಳೊ!
ಯಾವ ನೆರಳ ನೆರಳೋ!

ಮೂವತ್ತೆಂಟು ವರ್ಷಗಳ ಹಿಂದೆ - (ಜನವರಿ ೧೯೬೨) - ನನಗೆ ನಾನೇ ಹೇಳಿಕೊಂಡ ಕೇಳಿಕೊಂಡ ಈ ಉದ್ಗಾರವಾಚಕ ಚಿಹ್ನೆ ಈಗಲೂ ಹಾಗೆಯೇ ಇದೆ.

ಹಾಗಾದರೆ : ಬದಲಾವಣೆ ಬದಲಾವಣೆ ಅಂತ ಬಂಬಡಾ ಬಜಾಯಿಸುವ ನಾನಾದರೂ ಬದಲಾಗಿದ್ದೇನೆಯೇ?

★

ಗೋಡೆ ಗಡಿಯಾರದ ತಾಸಿನ ಮುಳ್ಳು, ಮಿನಿಟಿನ ಮುಳ್ಳು, ಸೆಕಂಡಿನ ಮುಳ್ಳು ಒಂದು ಕ್ಷಣ - ಒಂದೇ ಒಂದು ಕ್ಷಣ - ಒಂದರ ಮೇಲೊಂದು ಸವಾರಿ ಮಾಡಿ, ಮೂರೂ ಒಂದೇ ಆಗಿ, ಮತ್ತೆ ತಮ್ಮ ದಾರಿ ಹಿಡಿದಿವೆ. ಜನವರಿ ಒಂದು ಉದಯವಾದ ಈ ಕ್ಷಣ ಏನಾದರೂ 'ಸಂಭವಿ'ಸಿತೇ? ಏನೂ ಇಲ್ಲ. ಅದೇ ಕತ್ತಲೆ. ಅದೇ ಮೌನ. ಕೇಳಿಸುತ್ತಿರುವುದು ನನ್ನ ಉಸಿರಾಟ ಮತ್ತು ಗಡಿಯಾರದ ಮುಳ್ಳುಗಳ ಟಿಕ್‌ಟಿಕ್ ಮಾತ್ರ.

ಮತ್ತೊಂದು ಕವನ. ಅದೇ ೧೯೬೨ರ ಜನವರಿಯಲ್ಲಿ ಬರೆದದ್ದು;

ಜನೆವರಿ ಒಂದು

ಎಂದಿನಂತೆಯೆ ಇಂದು ಬೆಳಗು ಹರಿದು
ಆಡುತಿದೆ. ಆದರೂ ನಿನ್ನೆ ನಟ್ಟಿರುಳಿನಲಿ
ಇದಕೆ ಕಾಲ್ಗಳು ಮೂಡಿ, ಕೆಳಕ್ಕೊತ್ತಿತ್ತಂತೆ
ಹಳೆಯ ವರುಷದ ಗಟ್ಟ ನೆತ್ತಿ ಬಿರಿದು.

ತಲೆಭಾರವನ್ನೊಂದು ಚಣವೆ ಇಳಿಸಿ
ಕುಳಿತು ಉಸಿರನು ಹಾಕಿ ಗಾಳಿಯಲಿ ಮನೆ ಕಂಡು
ಮತ್ತೆ ಹೊತ್ತನು ಮುದುಕ. ಸೆಟೆದ. ಹುಡುಗರ ಹಾಗೆ
ಹೊರಟ ಮುಂದಕೆ ತೊಡಕುಗಾಲು ಬೀಸಿ.

ಧೂಳು ಮುಸುಡಿಯನೊಮ್ಮೆ ತೊಳೆದುಕೊಂಡು
ಹೊಸ ಪೌಡರನು ಬಳಿದು, ಆ ಅವೇ 'ತಾರೆ'ಗಳು
ಮಿನುಗಿವೆ; ದಿನಾಂಕಗಳ ಕಣ್ಣನೆಳೆ ರೆಪ್ಪೆಗಳು
ಮುಚ್ಚಿರಲು ಎಷ್ಟೆಷ್ಟೊ ಕನಸು ಕಂಡು.

ಗೋಡೆ ಬಿರುಕಿನ ಒಳಗೆ ಕಣ್ತೆರೆದ ಹೂ-
ಮೊನ್ನೆಯೇ ಹುಟ್ಟಿದ್ದು-ಗಾಳಿಯಲಿ ಎದೆಯಾಸೆ
ಹರವಿ, ನಿಟ್ಟುಸಿರಿಡಲು ಹವಣಿಕೆಯ ಹಾಕುತಿದೆ,
ಬಂದು ಕೊಯ್ದೊಯ್ಯದಿರೆ ಯಾರಾದರೂ.

ಇಂದು ಹೊಸ ದಿನ. ಇದರ ಗಾಳಿ ಕುಡಿದು
ಇಸ್ತ್ರಿ ಬಟ್ಟೆಯ ತೊಟ್ಟು, ಕಿಸೆಗೆ ಹೊಸ ಧೈರಿಯನು
ತುರುಕಿ, ಸಿಳ್ಳನು ಹೊಡೆದು ಹೊರಹೊರಟೆ ನಾ, ಭೂಪ,
ನನ್ನ ನೆರಳಿನ ಹರಕು ಚುಂಗು ಹಿಡಿದು.

★

ಕಿಡಕಿಗುಂಟ ಜಿನುಗುತ್ತಿದೆ ಕವಿ ಬೇಂದ್ರೆಯ 'ಮೂಡಲ ಮನೆಯಾ ಮುತ್ತಿನ ನೀರು'. ಹುಬ್ಬಳ್ಳಿಯ ಸುಕುಮಾರ ಕವಿ ಕರ್ಕಿ ನೆನಪಿನಲ್ಲಿ ಹಬ್ಬುತ್ತಾರೆ :

ಅದೇ ಬಾನು ಅದೇ ಭಾನು
ಆದರು ಇದು ಹೊಸದಿನ

ಹೌದು, ಅದೇ ಬಾನು ಅದೇ ಭಾನು. ಇದು ವಾಸ್ತವ. 'ಆದರು ಇದು....' ಎಂಬುದು ನಾವು ನಮಗಾಗಿಯೇ ಆಸೆಯಿಂದ ಆತಂಕದಿಂದ ಕಟ್ಟಿಕೊಂಡ ಕನಸು, ಕನವರಿಕೆ.

●

೧೯೯೮ರ ಪ್ರಕಟಣೆಗಳು

ಎಡೆ (ಕಾವ್ಯ) :
ಬಿ.ಆರ್.ಲಕ್ಷ್ಮಣರಾವ್; ಲಿಪಿ ಪ್ರಕಾಶನ, ಬೆಂಗಳೂರು-೫೬೦ ೦೦೪ ರೂ.೩೦

ಸಮನ್ವಿತಾ (ಕಾವ್ಯ) :
ಡಾ.ಕೆ.ಲೀಲಾ ಪ್ರಕಾಶ, ವಿದ್ಯುತ್ ಪ್ರಕಾಶನ, ಮೈಸೂರು-೫೭೦ ೦೦೯ ರೂ.೨೫

ನೂರಾರು ಮಿನಿ ಕವಿತೆಗಳು :
ಮಾನಸ; ತನುಮನು ಪ್ರಕಾಶನ, ರಾಮಕೃಷ್ಣ ನಗರ, ಮೈಸೂರು-೫೭೦ ೦೨೩. ರೂ.೨೫.

ಗರ್ಭಿಣಿಯರ ಕೈಪಿಡಿ :
ಡಾ.ಸುನಂದಾ ಕುಲಕರ್ಣಿ; ಅಂಕುರ ಪ್ರಕಾಶನ,
ಬಸವೇಶ್ವರ ನಗರ, ಬೆಂಗಳೂರು-೫೯೦ ೦೭೯. ರೂ.೪೦.

ಮೋಜಿನ ಗಣಿತ :
ಪಿ.ಎನ್.ವೆಂಕಟಾಚಲ ಶೆಟ್ಟಿ; ಅಂಕುರ ಪ್ರಕಾಶನ,
ಬಸವೇಶ್ವರ ನಗರ, ಬೆಂಗಳೂರು-೫೬೦ ೦೭೯. ರೂ.೨೫.

ಶ್ರಾವಣ ಕಾವ್ಯ:
ದಿವಾಕರರಾವ್ ನಾಡಿಗರ್; ತುಲನ ಪ್ರಕಾಶನ, ಬೆಂಗಳೂರು-೫೬೦ ೦೦೪. ರೂ.೩೦.

ನವಕರ್ನಾಟಕ ಪ್ರಕಾಶನ,
ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧

ಎರವಲು ಪದಕೋಶ :
ಪ್ರೊ.ಜಿ.ವೆಂಕಟಸುಬ್ಬಯ್ಯ ರೂ.೧೦೦

ಪದಾರ್ಥ ಚಿಂತಾಮಣಿ :
ಪಾ.ವೆಂ.ಆಚಾರ್ಯ ರೂ.೧೪೦

ತಿರುಗಿ ನರಜನ್ಮ (ಕಾದಂಬರಿ) :
ಮು.ಗೋಪಾಲಕೃಷ್ಣ ನಾಯಕ ರೂ.೭೦.

ಕಡಲ ತೀರದ ಒಂದು ಗ್ರಾಮದ ಕಥೆ (ಕಾದಂಬರಿ) :
ತೋಮು.ಮೀರಾನ್ ರೂ.೮೦.

ಇದು ಮುಗಿಯದ ಕಥೆ :
ದೇವಿ ಪ್ರಸಾದ ಚಟ್ಟೋಪಾಧ್ಯಾಯ ರೂ.೫೦

ಪಂಜುಗಳು :
ಸು.ರಂ.ಎಕ್ಕುಂಡಿ ರೂ.೩೫

ಭಾರತಕ್ಕೆ ಆರ್ಯರ ಪ್ರವೇಶ :
ಆರ್. ಎಸ್. ಶರ್ಮಾ ರೂ.೩೫

ಬಸವೇಶ್ವರ-ಜ್ಞಾನೇಶ್ವರ:
ಒಂದು ಚಿಂತನೆ; ಕೃಷ್ಣ ಮೆಣಸೆ ರೂ.೧೫

ಗೋರಾ :
ದೊರೆಸ್ವಾಮಿ ಮತ್ತು ಕೃಷ್ಣರಾವ್ ರೂ.೧೮

ಅಜ್ಜಿ ಹೇಳಿದ ಕಥೆಗಳು :
ಪಾರ್ವತಮ್ಮ ಮಹಲಿಂಗಶೆಟ್ಟಿ ರೂ.೧೨

●

ಸೌರಭ
ಎಂ.ಬಿ. ಕುಕ್ಯಾನ್, ಸಾಯಿದೀಪ ಪ್ರಕಾಶನ, ಮುಂಬಯಿ ರೂ.೫೦

ಕಲ್ಲಂಗಡಿ ಕಲ್ಲಿನ ಕಂಕನರಿ
ಜೀನಹಳ್ಳಿ ಸಿದ್ದಲಿಂಗಪ್ಪ ; ಪ್ರೇಮ ಪ್ರಕಾಶನ, ಜೀನಹಳ್ಳಿ (ಶಿವಮೊಗ್ಗ) ರೂ.೮೦

ಹೊಸ ಹಂತ (ಅರವಿಂದ ನಾಡಕರ್ಣಿ ಕಾವ್ಯ ಸಮೀಕ್ಷೆ)
ಅಭಿಜ್ಞಾ ಪ್ರಕಾಶನ, ಮುಂಬಯಿ -೪೦೦ ೦೭೮ ರೂ.೩೦

[illegible]ಯಾಮಿ (ಕಾವ್ಯ)
[illegible] ರಾಮೇಶ್ವರಪ್ಪ ; ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು -೨ ರೂ.೪೦

[illegible]ಶೋಧ
ಲಿ[illegible]ಣ್ಣ ಎಂ.ಗೋನಾಲ; ಶರಣು ಪ್ರಕಾಶನ, ದೇವರಗೋನಾಲ (ಗುಲಬರ್ಗಾ)
ರೂ.೩೦

ಗಾಂಜಾ ಡಾಲಿ (ಕಾವ್ಯ)
ಲತಾ ಗುತ್ತಿ, ನಿಸರ್ಗ ಪ್ರಕಾಶನ, ಬೆಂಗಳೂರು - ೫೬೦ ೦೪೫ ರೂ.೫೦

ಗಾಂಧಿ ಎಂಬುವ ಹೆಸರು (ಕಾವ್ಯ)
ಸಂ. ಚಂಪಾ ಮತ್ತು ಶಶಿಕಲಾ ವೀರಯ್ಯಸ್ವಾಮಿ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೫೬೦ ೦೧೮ ರೂ.೭೫

ಮುಗಿಲ ಮರೆಯ ನೇಸರ (ಕಾವ್ಯ)
ಡಾ. ಸಿ. ಪಿ. ಸಿದ್ಧಾಶ್ರಮ ; ಶಕ್ಕು ಪ್ರಕಾಶನ, ಮೈಸೂರು - ೬ ರೂ.೪೦

ನೆಲಮನೆ ಪ್ರಕಾಶನ

ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

ಆಡಿ ಬಾ ನನ ಕಂದಾ (ಶಿಶುಗೀತೆಗಳು) :
ಲಿಂಗಣ್ಣ ಬಂಧುಕಾರ್ ರೂ.೨೫

ಬದುಕೆಂಬ ದಿವ್ಯ (ಕಾದಂಬರಿ) :
ಕಮಲಾ ಹೆಮ್ಮಿಗೆ ರೂ.೨೫

ಐದು ಮಕ್ಕಳ ನಾಟಕಗಳು :
ಎ. ಎಸ್. ಮೂರ್ತಿ ರೂ. ೩೫

ಹೇಳದಿರಲಾರೆ :
ಶಾರದಾ ಹೆಮ್ಮಿಗೆ ರೂ. ೪೫

ಪ್ರಜ್ಞಾ :
ಸಿ. ಜಿ. ಮಂಜುಳಾ ರೂ. ೩೫

ಪೊಳ್ಳಿನೊಳಗೆ ಪಕ್ಷಿ (ತತ್ವಪದಗಳು) :
ಸಂ- ಕಮಲಾ ಹೆಮ್ಮಿಗೆ ರೂ.೮೦

ಶ್ರೀ ರಾಘವೇಂದ್ರ ಪ್ರಕಾಶನ

ಅಂಬಾರಕೊಡ್ಲ, ಅಂಕೋಲಾ (ಉ.ಕ.) ೫೮೧೩೧೪.

ನೋವು ಪ್ರೀತಿಯ ಪ್ರಶ್ನೆ (ಕಾವ್ಯ) :
ವಿಷ್ಣು ನಾಯ್ಕ ರೂ.೮೦

ಅವಾಂತರ (ನಾಟಕ) :
ನಾಸು ಹೆಗಡೆ, ಭರತನಹಳ್ಳಿ ರೂ.೩೫

ಮುಖಾಂತರ (ಸಣ್ಣ ಕತೆ) :
ಶ್ರೀಧರ ಬಳಗಾರ ರೂ.೫೦

ಗಿಳಿ ಹೇಳಿದ ಕತೆ :
ಗಿರಿ ಪಿಕಳೆ ರೂ.೨೫

ಮುಗಿಯದ ಹಾಡು (ಕಾವ್ಯ) :
ಸಂ- ಡಾ. ಗುರುಲಿಂಗ ಕಾಪಸೆ ರೂ.೪೦

ಆತಂಕ (ಕಾವ್ಯ) :
ಶಾಂತಾರಾಮ ನಾಯಕ ಹಿಚಕಡ ರೂ.೨೫.

ಈ ಸಂಚಿಕೆಯ ಲೇಖಕರು

●

ಡಾ. ಜಿ. ರಾಮಕೃಷ್ಣ	೭೧೩, ವಿಜಯ ಮ್ಯಾನ್‌ಶನ್, ೧ನೇಮೇನ್, ಆರ್.ಪಿ.ಸಿ. ಲೇ ಔಟ್, ಬೆಂಗಳೂರು-೫೬೦ ೦೪೦.
ಮಾಧವ ಪೆರಾಜೆ	ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ (ಬಳ್ಳಾರಿ) ೫೮೩ ೨೭೧
ಪ್ರಫುಲ್ಲಾ ನಾಯಕ	ಕೆ.ಪಿ.ಇ.ಎಸ್. ಕಾನೂನು ಕಾಲೇಜು, ಧಾರವಾಡ ೫೮೦ ೦೦೧
ಚಂದ್ರಶೇಖರ ಪಾಟೀಲ	ಸಂಕ್ರಮಣ, ೨೭೫೧, ೧೭-ಎ ಕ್ರಾಸ್, ೬ನೇ ಮೇನ್, ಬನಶಂಕರಿ ೨ನೇ ಹಂತ, ಬೆಂಗಳೂರು - ೫೬೦ ೦೭೦.

ಸಂಕ್ರಮಣದ ಹಿತೈಷಿಗಳಲ್ಲಿ ಒಂದು ಮನವಿ

- ಜನವರಿ ೨೦೦೦ರಿಂದ ನಿಮ್ಮ ಸಂಕ್ರಮಣ ಹೊಂದುತ್ತಿರುವ ಬದಲಾಣೆಗಳ ವಿವರಗಳು ಈ ಸಂಚಿಕೆಯ ಹಿಂಭಾಗದಲ್ಲಿದೆ. ನಿಮ್ಮ ನಿರಂತರ ಸಹಕಾರ ಮುಂದುವರಿಯಲಿ.
- ಐದು ವರ್ಷಗಳ ಮುಂಗಡ ಚಂದಾ ರೂ. ೧೦೦೦/- ಕಳಿಸಿದರೆ ಅನುಕೂಲ. ಜೊತೆಗೆ ನಿಮ್ಮ ವಲಯದಲ್ಲಿ ಕನಿಷ್ಠ ಐವರು ಗೆಳೆಯರನ್ನಾದರೂ ಸಂಕ್ರಮಣಕ್ಕೆ ಚಂದಾದಾರರನ್ನಾಗಿ ಮಾಡಿರಿ. ನೀವು ಹೆಸರು ಕಳಿಸಿದರೆ ನಾನೂ ಅವರಿಗೆ ಬರೆಯುವೆ.
- ವಿವಿಧ ಸಾಹಿತ್ಯ ಪ್ರಕಾರಗಳ ಸಾವಿರಾರು ಪುಸ್ತಕಗಳು ನಮ್ಮ ಕಾರ್ಯಾಲಯದಲ್ಲಿ ಸಂಗ್ರಹವಾಗಿವೆ. ಐದು ವರ್ಷದ ಮುಂಗಡ ಚಂದಾ ರೂ. ೧೦೦೦/- ಕಳಿಸುವವರಿಗೆ ರೂ. ೩೦೦/-ರ ಮೌಲ್ಯದ ಉತ್ತಮ ಪುಸ್ತಕಗಳನ್ನು ಉಚಿತವಾಗಿ ಅಂಚೆಯಲ್ಲಿ ಕಳಿಸಲಾಗುವುದು. ಈ ವಿಷಯವನ್ನೂ ಸ್ನೇಹಿತರಿಗೆ ತಿಳಿಸಿರಿ.

- ಚಂಪಾ

೩೧.೧೨.೧೯೯೯

ಮೂರೂವರೆ ದಶಕಗಳ ನಿರಂತರ ಪ್ರಕಟನೆ

ಜನವರಿ ೨೦೦೦ ದಿಂದ

ದ್ವೈಮಾಸಿಕ ಸಾಹಿತ್ಯ ಸಂಕಲನ

ಸಂಕ್ರಮಣ

ಸಂಪಾದಕ : ಚಂದ್ರಶೇಖರ ಪಾಟೀಲ (ಚಂಪಾ)

- ಪ್ರತಿ ಸಂಚಿಕೆಯಲ್ಲಿ ಒಂದು ಸಣ್ಣ ಕಥೆ, ಒಂದು ಲಲಿತ ಪ್ರಬಂಧ, ಹಲವಾರು ಕವನಗಳು; ಆಗೀಗ ಏಕಾಂಕ ನಾಟಕ.
- ಸಮಕಾಲೀನ ಬದುಕಿನ ಮುಖ್ಯ ಸಮಸ್ಯೆಗಳ ಬಗ್ಗೆ ಇಪ್ಪತ್ತು ಪುಟಗಳ ಚರ್ಚಾ ವೇದಿಕೆ; ತಜ್ಞರ ಪಾಲುಗಾರಿಕೆ.
- ಸಾಹಿತ್ಯಿಕ - ಸಾಂಸ್ಕೃತಿಕ ವಲಯದ ಗಣ್ಯರೊಂದಿಗೆ ಮಾಮೂಲಿಯಲ್ಲದ ಸಂದರ್ಶನಗಳು.
- ನಿಯಮಿತವಾಗಿ ಪುಸ್ತಕ ಪರಿಚಯ, ಪುಸ್ತಕ ವಿಮರ್ಶೆ
- ವರ್ಷಾಂತ್ಯದಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳ ವಾರ್ಷಿಕ ಸಮೀಕ್ಷೆ.
- ವಾದ ವಿವಾದ, ಪ್ರತಿಕ್ರಿಯೆಗಳಿಗೆ ಮುಕ್ತ ಅವಕಾಶ.
- ಯುವಕವಿಗಳ ಪ್ರಥಮ ಸಂಕಲನಗಳಿಂದ ಆಯ್ದ ಕವನಗಳ ಪ್ರಕಟಣೆ.
- ಎಂದಿನಂತೆ ವಾರ್ಷಿಕ ಸಂಕ್ರಮಣ ಸಾಹಿತ್ಯ ಸ್ಪರ್ಧೆ.

ವಾರ್ಷಿಕ ಚಂದಾ : ರೂ. ೨೦೦ ಐದು ವರ್ಷಕ್ಕಾಗಿ ಮುಂಗಡ : ರೂ. ೧೦೦೦

ಮಹಾಪೋಷಕತ್ವ : ರೂ. ೫೦೦೦

ಸಂಕ್ರಮಣ ಪ್ರಕಾಶನ

೨೭೫೧, ೧೭-ಎ ಕ್ರಾಸ್, ೬ನೇ ಮೇನ್, ಬನಶಂಕರಿ ಎರಡನೇ ಹಂತ,

ಬೆಂಗಳೂರು - ೫೬೦ ೦೭೦. (ಫೋನು : ೦೮೦-೬೭೬೩೦೦೪)